ಬೆಲೆ: ಎರಡು ಆಣೆ

ಕರ್ಮವೀರ

ಜಾತೀರಾತಿಗಾಗಿ ವಿಚಾರಿಸಿರಿ

ಸಂಪಾದಕರು: ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor: H. R. Purohit, M. A.

ಜಾತೀರಾತಿಗಾಗಿ ವಿಚಾರಿಸಿರಿ

ಸಂಪುಟ ೧೯] ಹುಬ್ಬಳ್ಳಿ ಸೋಮವಾರ ತಾರೀಖು ೨೮—೪—೧೯೪೭ [ಸಂಚಿಕೆ ೪

ರಶಿಯನ್ನರ ಚರ್ಯೆ ನಿಜವಾಗಿ ಅಯೋಗ್ಯವೆ? [ಎಡ್ಗಾರ ಸ್ನೋ ಅವರಿಂದ]

ರಶಿಯನ್ ದೃಷ್ಟಿಕೋನದಲ್ಲಿ ಅಮೇರಿಕೆಯ ಲೋಪದೋಷಗಳು: ಅಮೇರಿಕನ್ ಧೋರಣೆಯಲ್ಲಿರುವ ವಿರೋಧಾಭಾಸ

ಆಂಗ್ಲೋ—ಅಮೇರಿಕನ್ ಪ್ರಚಾರದಿಂದ ರಶಿಯನ್ನರು ಯುರೋಪಿನಲ್ಲಿ ವಹಿಸಿದ ಧೋರಣೆಯ ಬಗ್ಗೆ ಅನೇಕ ತಪ್ಪು ತಿಳುವಳಿಕೆಗಳು ಹಿಂದೀಯರಲ್ಲಿ ಉಂಟಾಗಿವೆ. ರಶಿಯನ್ನರು ದುಷ್ಪರೆಂಬ ಭಾವ ಪ್ರಚುರವಾಗತೊಡಗಿದೆ. ಆದರೆ ರಶಿಯನ್ನರ ನಡತೆ ನಿಜವಾಗಿ ಅಷ್ಟು ಅನುಚಿತವಾಗಿದೆಯೆ? ಅಮೇರಿಕನ್ನರೇನು ತೀರ ಸಂಭಾವಿತರೆ? ಈ ಪ್ರಶ್ನೆಗಳಿಗೆ ಪ್ರಸಿದ್ಧ ಅಮೇರಿಕನ್ನ ಸುದ್ದಿಗಾರರಾದ ಎಡ್ಗಾರ ಸ್ನೋ ಅವರು ಇಲ್ಲಿ ಉತ್ತರ ಕೊಟ್ಟಿದ್ದಾರೆ. ವಿದೇಶ ಧೋರಣೆಯಲ್ಲಿ ಹೊಸಬರಾದ ನಾವು ಜಗತ್ತಿನ ಯಾವ ಯಾವ ರಾಷ್ಟ್ರದ ಒಳ ಅಂತರ್ಯ ಹೇಗಿದೆಯೆಂದರಿತುಕೊಳ್ಳುವದವಶ್ಯ. ಅಮೇರಿಕನ್ ಔದಾರ್ಯದ ಹಿಂದಿರುವ ಸ್ವಾರ್ಥದ ಉದ್ಘಾಟನೆ ಇಲ್ಲಿ ಚನ್ನಾಗಿ ಆಗಿದೆ.

ರಶಿಯನ್ನರು ಅಟ್ಲಾಂಟಿಕ ಶಾಸ್ತ್ರಪಟವನ್ನು ಉಲ್ಲಂಘಿಸಿದ್ದಾರೆ. ಇತರ ಒಪ್ಪಂದಗಳ ಮೂಲಕ್ಕೆ ಕುಠಾರ ಹಾಕಿದ್ದಾರೆ. ಜರ್ಮನಿ, ಆಸ್ಟ್ರಿಯಾ, ಪೋಲಂಡ, ಚೀನ ಮತ್ತು ಬೇರೆಡೆಗಳಲ್ಲಿ ತಮ್ಮ ಧೋರಣೆಯಿಂದ "ಉಳಿದ ಜಗತ್ತನ್ನು" ಧಿಕ್ಕರಿಸುತಿದ್ದಾರೆ. ತುರ್ಕಿ ಇರಾಣಗಳ ಮೇಲೆ ಅವರು ಸಾಮ್ರಾಜ್ಯವಾದಿ ಬೇಡಿಕೆಗಳನ್ನು ಮುಂದೊಡ್ಡಿದರು, ಗ್ರೀಸಿನ ವಿರುದ್ಧ ಆಕ್ರಮಣಶೀಲ ಚಾಲನೆಗಳನ್ನು ಪ್ರಾರಂಭಿಸಲು ಯುಗೊಸ್ಲಾವಿಯಾ, ಬಲ್ಗೇರಿಯಾಗಳನ್ನು ಪ್ರೇರೇಪಿಸಿದರು. "ಪರಿಹಾರ ದ್ರವ್ಯ"ದ ಸೋಗಿನಿಂದ ಪೂರ್ವ ಯುರೋಪಿನಲ್ಲಿ ತಮ್ಮ ಆರ್ಥಿಕ ಗುತ್ತಿಗೆಯನ್ನು ಸ್ಥಾಪಿಸಿ "ಅನಿರ್ಬಂಧ ವ್ಯಾಪಾರ"ಕ್ಕೆ ಉಪದ್ರವ ಮಾಡಿದ್ದಾರೆ. ತಮ್ಮ ಆಕ್ರಮಣದ ಪ್ರಯೋಜನ ಪಡೆದು ಯುರೋಪನ್ನೂ ಮಂಚೂರಿಯಾವನ್ನೂ ಸೂರೆ ಮಾಡಿದರು; ಕಮ್ಯುನಿಝಂ ಪ್ರಚಾರ ಮಾಡಿದರು; ಪ್ರಜಾತಂತ್ರವನ್ನು ಹತ್ತಿಕ್ಕಿದರು; ಕೈಗೊಂಬೆ ರಾಜ್ಯಗಳನ್ನು ಸ್ಥಾಪಿಸಿದರು. ಅರ್ಥಾತ್ "ಸೋವಿಯಟ್ ಮುಂದಾಳುಗಳು ತಮ್ಮ ಜೀವನ ಪದ್ಧತಿ ನಮ್ಮದರೊಡನೆ ಬಾಳಲಾರದೆಂಬ ನಂಬಿಕೆಯಿಂದ ಜಗತ್ತನ್ನು ಗಂಡಾಂತರ, ಅಶಾಂತಿಗಳಿಗೆ ಗುರಿ ಮಾಡಿದ್ದಾರೆ." ಇವೀಗ ಜನಸಾಮಾನ್ಯ ಅಮೇರಿಕನ್ನರು ರಶಿಯನ್ನರ ಮೇಲೆ ಹೊರಿಸುವ ಆರೋಪಗಳು.

ಆದರೆ ಸಾಮಾನ್ಯ ರಶಿಯನ್ನನಿಗೆ— ಅಧಿಕಾರಿಗಲ್ಲ, ಕಮ್ಯುನಿಸ್ಟ ಪಕ್ಷಾಂಧನಿಗೂ ಅಲ್ಲ— ಇದೆಲ್ಲ ಹೇಗೆ ತೋರುತ್ತದೆ?

ಸಾಮಾನ್ಯ ರಶಿಯನ್ನನಿಗೆ ಸಿಗುವ ವಿದೇಶಿ ಸುದ್ದಿಗಳು ಮಿತವಾಗಿವೆ; ಕಮ್ಯುನಿಸ್ಟ ಪ್ರಚಾರ ಸಮಿತಿ ಒಳ್ಳೆ ಎಚ್ಚರಿಕೆಯಿಂದ ಆರಿಸಿ ಅದನ್ನು ಪ್ರಕಟಿಸುತ್ತದೆ, ಎಂಬದನ್ನು ನಾವು ಮರೆಯುತಕ್ಕದ್ದಲ್ಲ. ಆದರೆ ಒಂದೇ ಪತ್ರಿಕೆಯನ್ನೋದುವ ಸಾಮಾನ್ಯ ಅಮೇರಿಕನ್ನನ ಪರಿಸ್ಥಿತಿಯೂ ಹೀಗೆಯೆ ಇದೆ. ಅಮೇರಿಕನ್ನನು ಬಯಸಿದರೆ ಎಲ್ಲ ದೃಷ್ಟಿಕೋನಗಳ ಅಭಿಪ್ರಾಯ ಪ್ರತ್ಯಭಿಪ್ರಾಯಗಳನ್ನು ದೊರಕಿಸಿಕೊಳ್ಳಬಲ್ಲ. ರಶಿಯನ್ನನಿಗೆ ಏಕಪಕ್ಷೀಯ ದೃಷ್ಟಿಕೋನದ ಸುದ್ದಿ—ವಿವರಗಳು ಮಾತ್ರ ದೊರೆಯುತ್ತವೆ. ನಿಜ. ಆದರೂ ಅವನಿಗೆ ವಿದೇಶ ವಿಚಾರಗಳಲ್ಲಿ ಸಾಕಷ್ಟು ವಿವರಗಳು— ಅಚ್ಚರಿಯೆನಿಸುವಷ್ಟು ಪರಿಜ್ಞಾನ— ದೊರಕುತ್ತದೆ. ಶಾಲೆ, ಕಾರಖಾನೆ, ಕಾರ್ಯಾಲಯ, ಸಂಘಗಳಲ್ಲಿ ತತ್ವಜ್ಞಾನ ಸಹಿತ ಈ ವಿವರಗಳನ್ನು ತಿಳಿಸಲಾಗುತ್ತದೆ. ಆದರೆ ಅವನಿಗೆ ದೊರಕದ ವಿವರಗಳೇ ಅವನಿಗೂ ಅಮೇರಿಕನ್ನನಿಗೂ ಉಂಟಾಗುವ ತಪ್ಪು ತಿಳುವಳಿಕೆಯ ಕಾರಣವೆಂದು ಹೇಳಬಹುದು.

ಯುದ್ಧದ ಕಾರಣ

ಮೊಟ್ಟ ಮೊದಲು, ಯುದ್ಧದ ಕಾರಣಗಳು ಶಾಂತಿಯ ಧ್ಯೇಯಗಳು ಈ ಎರಡೂ ವಿಷಯಗಳಲ್ಲಿ ರಶಿಯನ್ನನ ವಿಚಾರಗಳು ಅಮೇರಿಕನ್ನನಕ್ಕಿಂತ ತೀರ ಭಿನ್ನವಾಗಿವೆ. ಸಾಧಾರಣವಾಗಿ ಅಮೇರಿಕನ್ನರು, ಅಚ್ಚನ ರಾಷ್ಟ್ರಗಳ ಉಚ್ಚಾಪ್ರಯತ್ನಕ್ಕಿಂತ ಮೊದಲು ಜಗತ್ತಿನಲ್ಲಿ ಎಲ್ಲವೂ ಹೆಚ್ಚು ಕಡಿಮೆ ಸರಾಗವಾಗಿಯೆ ಇತ್ತೆಂದು ಗ್ರಹಿಸುತ್ತಾರೆ. ಆದರೆ ರಶಿಯನ್ನನ ವಿಚಾರವೇ ಬೇರೆ. ವಿವಿಧ ಮಟ್ಟಗಳಲ್ಲಿದ್ದ ರಾಷ್ಟ್ರಗಳೊಳಗಿನ ಸಾಮಾಜಿಕ ವೈಷಮ್ಯಗಳೇ ಯುದ್ಧಕ್ಕೆ ಕಾರಣವಾದವೆಂದೂ ಆ ವೈಷಮ್ಯಗಳನ್ನು ಹೋಗಲಾಡಿಸಲು ಪ್ರತಿಗಾಮಿ ಬಂಡವಲಗಾರರು ಸೋವಿಯೆಟ್ ರಾಜ್ಯವನ್ನು ಬೇರ್ಪಡಿಸಿ ನಿರ್ನಾಮ ಮಾಡಲು ಹೆಣಗಿದ್ದರಿಂದಲೇ ಯುದ್ಧ ಒದಗಿ ಬಂತೆಂದೂ ಅವನ ತಿಳುವಳಿಕೆ. ಶತ್ರುಗಳನ್ನು ಮುರಿದ ನಂತರ ಹಳೆಯ ಸ್ಥಿತಿಗತಿಗಳೇ ಮರಳುವದು ಅವನಿಗೆ ಬೇಕಾಗಿದ್ದಿಲ್ಲ.

ಪಾಶ್ಚಿಮಾತ್ಯ ರಾಷ್ಟ್ರಗಳು ರಶಿಯಾವನ್ನು ಯುರೋಪಿನಿಂದ ಹೊರಗಿಡಲು ಅಡ್ಡಗೋಡೆಗಳಂಥ ರಾಜ್ಯಗಳನ್ನು ವರ್ಸಾಯಿಯಲ್ಲಿ ನಿರ್ಮಿಸಿದ್ದರಿಂದಲೇ ಸೋವಿಯಟ್ ರಾಜ್ಯದ ಮೇಲೆ ಅಭಿಯೋಗ ಮಾಡುವದು ಜರ್ಮನಿಗೆ ಸಾಧ್ಯವಾಯಿತು. ಈ ರಾಜ್ಯಗಳು ಜರ್ಮನ್ ಫ್ಯಾಸಿಝಂನ ಕೈಗೊಂಬೆಗಳಾಗಿ ರಶಿಯಾವನ್ನು ನಿರ್ನಾಮ ಮಾಡುವ ಸಾಹಸದಲ್ಲಿ ಭಾಗಿಗಳಾದವು. ಹೀಗಾಗಿ ಯುದ್ಧ ಕಾಲದಲ್ಲಿ ಜರ್ಮನರು ಇಟಲಿ, ಆಸ್ಟ್ರಿಯಾ, ಹಂಗೇರಿ, ರುಮಾನಿಯಾ, ಬಲ್ಗೇರಿಯಾ, ಫಿನ್ಲಂಡ, ಗ್ರೀಸ, ಪೋಲಂಡ, ಝೆಕೊಸ್ಲೊವಾಕಿಯಾ, ಮತ್ತು ಆಕ್ರಮಿತ ಪಶ್ಚಿಮ ಯುರೋಪ ಇವೆಲ್ಲವುಗಳ ಜನ—ಧನಶಕ್ತಿಗಳ ಸಮೂಹವನ್ನು ಸಂಗ್ರಹಿಸಲು ಸಮರ್ಥರಾದರು. ಅಂದ ಮೇಲೆ ವಿಜಯದ ಅರ್ಥವೇನಾಯಿತು? ಬ್ರಿಟನ್ ಒಂದು ಬಿಟ್ಟು ಉಳಿದೆಲ್ಲ ಯುರೋಪಿನ ಶಕ್ತಿಯನ್ನು ಸೋವಿಯೆಟ್ ರಶಿಯಾ ತಡೆದು ನಿಂತಿತೆಂದಲ್ಲವೆ? ಆದುದರಿಂದ ಯುರೋಪಿಯನ್ ರಾಷ್ಟ್ರಗಳಲ್ಲಿ ಯಾವಾವುವೇ ಕೂಡಿದರೂ— ಅಮೇರಿಕೆಯ ಸಹಾಯವಿಲ್ಲದೆ— ಸೋವಿಯೆಟ್ ರಾಜ್ಯದ ಮೇಲೆ ಯುದ್ಧ ಹೂಡುವದು ಅಸಾಧ್ಯವೆಂದೂ ಆಯಿತು.

ಎರಡನೆಯದಾಗಿ, ವಿವಿಧ ರಾಷ್ಟ್ರಗಳ "ಆಳುವ ವರ್ಗ"ಗಳು ತಮ್ಮ ಜನರನ್ನು ಬೇಕೆಂದೇ ಅನಾಹುತಕ್ಕೆಳೆದವು. ಆದುದರಿಂದ ಆ ವರ್ಗಗಳೂ ಅವುಗಳಿಗೆ ಬೆಂಬಲವಾಗಿದ್ದ ಆರ್ಥಿಕ ಸಾಮಾಜಿಕ ರಾಜಕೀಯ ಸಂಸ್ಥೆ ವಿಚಾರಗಳೂ ಲಯ ಹೊಂದಬೇಕೆಂದು ರಶಿಯನ್ನರು ಅಪೇಕ್ಷಿಸಿದರು. ಅಂದರೆ ಶತ್ರು ರಾಷ್ಟ್ರಗಳಲ್ಲಿದ್ದ —ಕನಿಷ್ಠ ಕೆಂಪುಸೇನೆಯ ಆಕ್ರಮಣಕ್ಕೊಳಗಾದ ದೇಶಗಳಲ್ಲಿದ್ದ— "ಇನಾಮದಾರಿ ಕಾಲದ ಅವಶೇಷಗಳಾ"ದ "ಕುಲೀನ" ವರ್ಗ, ಜಮೀನದಾರ ವರ್ಗ, ಅಧಿಕಾರಶಾಹಿ, ಹಿರಿ ಬಂಡವಲಗಾರರು, ಮತ್ತು ಫ್ಯಾಸಿಝಂನೊಡನೆ ಸಹಕರಿಸಿದ ವ್ಯಕ್ತಿ-ಸಂಸ್ಥೆಗಳೆಲ್ಲ ನಾಶವಾಗಬೇಕು.

ಮೂರನೆಯದಾಗಿ, ಸೋವಿಯಟ್ ವಿಜಯದ ಅಭೂತಪೂರ್ವ ರಾಜಕೀಯ ಸಂಕೇತವನ್ನು ಜಗತ್ತು ತಿಳಿದುಕೊಂಡೀತೆಂದು ರಶಿಯನ್ನರು ಗ್ರಹಿಸಿದ್ದರು. ಯುರೋಪ ಏಶಿಯಾಗಳಲ್ಲಿ ರಶಿಯಾನೇ ಅತಿಪ್ರಬಲ ರಾಷ್ಟ್ರವಾಗಿ ರೂಪುಗೊಂಡಿದೆ; ಮಾತ್ರವಲ್ಲ—ಅಮೇರಿಕೆಯನ್ನು ಬಿಟ್ಟು—ಇಡಿ ಯುರೋಪ ಏಶಿಯಾಗಳಲ್ಲಿ ಸಾಮ್ಯವಾದಿ ಚಳವಳಿಯೆ ರಾಜಕೀಯ ತಕ್ಕಡಿ ಹಿಡಿದಿದೆ.

ನಾಲ್ಕನೆಯದಾಗಿ, ಸಾಮ್ಯವಾದಿ ರೂಪದ ಸಮಾಜ ವ್ಯವಹಾರ್ಯವೆಂದು ಈಗಾದರೂ ಜಗತ್ತು ಒಪ್ಪಬಹುದೆಂದು ರಶಿಯನ್ನರು ನಿರೀಕ್ಷಿಸಿದ್ದರು. ಬಂಡವಲವಾದಕ್ಕಿಂತ ಸಾಮ್ಯವಾದವೇ ಶ್ರೇಷ್ಠವೆಂದು ಇಡಿ ಯುರೋಪು ಅಂಗೀಕರಿಸಬಹುದೆಂದೂ ಅವರು ನಂಬಿದ್ದರು.

ಕೊನೆಗೆ, ಇಷ್ಟನ್ನೆಲ್ಲ ಜಗತ್ತಿಗೆ ತೋರಿಸಿಕೊಡುವಗೋಸ್ಕರ ಮತ್ತು ತಮ್ಮ ಸ್ವಂತ ವಿಮೋಚನೆಗಾಗಿ ತಾವು ಮಾಡಿದ ಅಗಾಧ ತ್ಯಾಗವನ್ನೂ ರಶಿಯನ್ನರು ಮರೆಯಲಾರರು. ವಿನ್ಸ್ಟನ್ ಚರ್ಚಿಲ್ಲರೇ ಹೇಳಿದ್ದರು: "ಹಿಟ್ಲರನು ರಶಿಯಾಕ್ಕೆ ಉಂಟುಮಾಡಿದ ಈ ಬಗೆಯ ಘೋರ ಕ್ರೂರ ಯಾತನೆಯನ್ನು ಸಹಿಸಲು ಮನುಷ್ಯ ನಿರ್ಮಿತವಾದ ಬೇರೆ ಯಾವ ಸರಕಾರವೂ ಸಮರ್ಥವಾಗಿದ್ದಿಲ್ಲ."

ರಶಿಯಾದ ಬಲಿದಾನ

ಅಮೇರಿಕನ್ನರು ಯುರೋಪಿನ ಮೇಲೆ ದಾಳಿ ಮಾಡುವ ಮೊದಲೇ ರಶಿಯನ್ನರು ಜರ್ಮನ್ ಸೈನ್ಯದ ಗುಂಡಿಗೆಯನ್ನು ಒಡೆದಿದ್ದರು. ಆದರೆ ಅದಕ್ಕೆ ಅವರು ತೆತ್ತ ಬೆಲೆಯನ್ನು ಅಮೇರಿಕನ್ನರು ಮಸುಮಸುಕಾಗಿಯೆ ಕಲ್ಪಿಸಿಕೊಳ್ಳಬಲ್ಲರು. ಇಡಿ ಯುದ್ಧದಲ್ಲಿ ಸತ್ತ ಅಮೇರಿಕನ್ ಸೈನಿಕರಿಗಿಂತ ಹೆಚ್ಚು ರಶಿಯನ್ನರು ಸ್ಟಾಲಿನ್‌ಗ್ರಾಡ ಯುದ್ಧವೊಂದರಲ್ಲಿ ಪ್ರಾಣ ಕಳೆದುಕೊಂಡರು. ಇಡಿ ಜಪಾನಿ ಯುದ್ಧದಲ್ಲಿ ಅಮೇರಿಕನರಿಗಾದ ಜನ ಹಾನಿಗಿಂತ ಹೆಚ್ಚು ಹಾನಿ ರಶಿಯನ್ನರಿಗೆ ಖಾರಕೋವ ಕಾಳಗವೊಂದರಲ್ಲೆ ಆಯಿತು. ಜರ್ಮನರೂ ಅವರ ಮಿತ್ರರೂ ಸೇರಿ ೭೦ ಲಕ್ಷ ರಶಿಯನ್ ಸೈನಿಕರನ್ನೂ ೫೦-೬೦ ಲಕ್ಷ ನಾಗರಿಕರನ್ನೂ ಕೊಂದು ಹಾಕಿದರು. ಒಟ್ಟು ಒಬ್ಬ ಅಮೇರಿಕನ್ ಸತ್ತಲ್ಲಿ ೨೪ ರಶಿಯನ್ನರು ಸತ್ತರು. ಒಬ್ಬ ಮಿತ್ರ ಸೈನಿಕ ಸತ್ತಲ್ಲಿ ೧೦ ರಶಿಯನ್ನರು ಆಹುತಿಯಾದರು.

ಯುದ್ಧ ಹಿರೋಶಿಮಾದಲ್ಲಿ ಗೆಲ್ಲಲ್ಪಡಲಿಲ್ಲ, ಎಂದು ರಶಿಯನ್ನರು ಹೇಳುತ್ತಾರೆ. ರಶಿಯನ್ ಪ್ರತಿಭಟನೆಯ ದುರ್ಗ ಒಡೆದಿದ್ದರೆ ಇಷ್ಟರಲ್ಲೆ ನ್ಯೂಯಾರ್ಕದಲ್ಲಿ ಜರ್ಮನ್ ವೈಜ್ಞಾನಿಕರು ಪ್ರಯೋಗಗಳನ್ನು ನಡೆಸುತಿದ್ದರು!

ರಶಿಯಾದ ೮,೦೦,೦೦೦ ಚೌ. ಮೈಲು ಪ್ರದೇಶವನ್ನು ಜರ್ಮನರು ಆಕ್ರಮಿಸಿದರು. ಆ ಪ್ರದೇಶದಲ್ಲಿ ರಶಿಯಾದ ಜನಸಂಖ್ಯೆಯ ಮೂರರಲ್ಲೊಂದಂಶ ಇತ್ತು. ಅದರ ಧ್ವಂಸದಿಂದ ಸೋವಿಯಟ್ಟಿನ ಅರ್ಧದಷ್ಟು ಕಲ್ಲಿದ್ದಲಿ ಗಣಿಗಳು, ಅರ್ಧ ವಿದ್ಯುತ್ ಕಾರಖಾನೆಗಳು, ನೂರಕ್ಕೆ ಪ್ಪತ್ತರಷ್ಟು ಕಬ್ಬಿಣದ ಗಣಿಗಳು, ಅರ್ಧದಷ್ಟು ಉಕ್ಕಿನ ಮತ್ತು ಯಂತ್ರಗಳ ಉದ್ಯೋಗ ಹಾಳಾದವು. ಅವು ತಿರುಗಿ ಕೈಸೇರಿದಾಗ ನೂರಕ್ಕೆ ೩೦ ರಿಂದ ೯೦ ರ ವರೆಗೆ ಧ್ವಸ್ತವಾದ ಒಂದು ವಿಶಾಲ ಅರಣ್ಯವೇ ಆಗಿದ್ದವು.

ಯುಕ್ರೇನ್ ಒಂದರಲ್ಲೆ ೪೦ ಲಕ್ಷ ಜನರು ಇನ್ನೆರಡು ವರ್ಷ ಹಾಳಾದ ಮನೆಗಳ ಗಳಗಳಿಂದ ಮಾಡಿದ ಗುಹೆಗಳಲ್ಲಿ ವಾಸಿಸಬೇಕಾಗುವದು. ೨೫೦ ಲಕ್ಷ ಜನರಿಗೆ ಆಶ್ರಯ ಕೊಡುತಿದ್ದ ೬೦ ಲಕ್ಷ ಮನೆಗಳು ಒಟ್ಟು ಧ್ವಂಸವಾದವು.

ಹೀಗೇನಾದರೂ ಅಮೇರಿಕನ್ನರಿಗೆ ಆಗಿದ್ದರೆ, ಜರ್ಮನರಿಗೆ ಹೀಗೆಯೆ ಮತದಾನ ಮಾಡಬೇಕೆಂದು ಒತ್ತಾಯಗೊಳಿಸಲಾಗುತಿದೆಯೆ, ಅಥವಾ ಒಡೆಸಾವೊಂದರಲ್ಲೆ ೨ ಲಕ್ಷ ರಶಿಯನ್ನರನ್ನು ಕೊಂದ ರುಮೇನಿಯನ್ನರಿಗೆ ಶುದ್ಧ ಅನಿರ್ಬಂಧ ಚುನಾವಣೆಗಳು ಸಿಗುತ್ತಿವೆಯೊ ಇಲ್ಲವೊ, ೭ ಲಕ್ಷ ಜನರನ್ನು "ಫ್ಯೂರರ"ರಿಗೋಸುಗ ಹೋರಾಡಲು ಕಳಿಸಿದ ಆಸ್ಟ್ರಿಯಾದ ಕಾರಖಾನೆಗಳು ಕಳೆದು ಹೋದವೇ, ಹತ್ತು ಲಕ್ಷ ರಶಿಯನ್ನರನ್ನು ಕೊಂದೆವೆಂದು ಜಂಬ ಕೊಚ್ಚಿಕೊಂಡ ಹಂಗೇರಿಯನ್ನರಿಗೆ ಅತಿಪ್ರಸರಣದ ಕಾಟ ಬಂದಿದೆಯೇ, ಇತ್ಯಾದಿಯಾಗಿ ಎಷ್ಟು ಜನ ಅಮೇರಿಕನ್ನರು ತಲೆ ಕೆಡಿಸಿಕೊಳ್ಳುತಿದ್ದರು?


ರಶಿಯಾದ ಈ ಕಠೋರ ಅನುಭವಕ್ಕೆ ಪ್ರತಿಫಲ ಈಗ ದೊರೆಯುವ ಪರಿಹಾರವೆಂದು ಯಾರಾದರೂ ಬಗೆಯುವರೆ? ಅದು ಕಳೆದುಕೊಂಡ ಜನರನ್ನು ಯಾವ ಪರಿಹಾರ ಬದುಕಿಸೀತು? ರಶಿಯಾದ ಸಂಪತ್ತಿಯ ಹಾನಿ ೨೦೦೦೦ ಕೋಟಿ ಡಾಲರೆಂದು ಊಹಿಸಲಾಗಿದೆ. ಅದರ ಹಣಕ್ಕಿಂತ ಹೆಚ್ಚಿನದೇನೂ ಆಹುತಿಯಾಗಿಲ್ಲವೆ?

ರಶಿಯಾದ ತಪ್ಪೇನು?

ಯುರೋಪಿನಲ್ಲಿಂದು ರಶಿಯಾದ ಧೋರಣೆಗಳ ಹಿನ್ನೆಲೆಯಿದು. ಅದನ್ನು ನಾವು (ಅಮೇರಿಕನ್ನರು) ಪೂರ್ತಿಯಾಗಿ ಕಡೆಗಣಿಸಿದರೆ ರಶಿಯಾದೊಡನೆ ಒಡಂಬಡಿಕೆ ಸಾಧ್ಯವೇ ಇಲ್ಲ. ರಶಿಯಾದ ಮೇಲೆ ದಾಳಿಯಾದಾಗ ಅನಂದ ತುಂದಿಲರಾದ, ಸಾವಿರಗಟ್ಲೆ ಹಳ್ಳಿಗಳ ಸುಲಿಗೆಯಾದಾಗ, ರಶಿಯನ್ ಸ್ತ್ರೀಯರ ಮೇಲೆ ಬಲಾತ್ಕಾರವಾದಾಗ, ೭೦ ಲಕ್ಷ ಯಹೂದ್ಯರನ್ನೂ ರಾಜಕೀಯ ಕೈದಿಗಳನ್ನೂ ಹೆಸರಳಿಸಿದಾಗ ತುಟಿ ಪಿಟ್ಟೆನ್ನದ, ಜನರೇ ಇಂದು ಪ್ರಾಯಶ್ಚಿತ್ತವನ್ನು ಅನುಭವಿಸುತಿದ್ದಾರೆ. ಜರ್ಮನರು ಕದ್ದೊಯ್ದ ಟ್ರ್ಯಾಕ್ಟರು, ದನಕರುಗಳಲ್ಲಿ ಕೆಲವನ್ನು ಮಾತ್ರ ಇಂದು ರಶಿಯನ್ನರು ಕಸಿದುಕೊಂಡಿದ್ದಾರೆ. ತಮ್ಮ ಹಾಳಾದ ಕಾರಖಾನೆಗಳಲ್ಲಿ ಕೆಲವನ್ನು ಮಾತ್ರ ಜರ್ಮನ್ ಯಂತ್ರಗಳಿಂದ ಪುನರುಜ್ಜೀವನಗೊಳಿಸುತಿದ್ದಾರೆ.

ಜರ್ಮನಿಯಿಂದ ೬೦೦ ಕೋಟಿ ಡಾಲರ ಪರಿಹಾರವನ್ನು ರಶಿಯಾಕ್ಕೆ ಮಂಜೂರು ಮಾಡಲಾಗಿದೆ. ಜರ್ಮನರು ತಮ್ಮ ನೆರೆಹೊರೆಯವರ ನಾಶಕ್ಕಾಗಿ ತಮ್ಮ ಸರಕಾರಕ್ಕೆ ಕೊಟ್ಟ ಹಣಕ್ಕಿಂತ ಎಷ್ಟೋಪಾಲು ಕಡಿಮೆ ಇದು. ಹಂಗೇರಿ, ರುಮಾನಿಯಾ, ಫಿನ್ಲಂಡುಗಳಿಂದ ಮತ್ತೆ ೪೦ ಕೋಟಿ ಡಾಲರ ಪರಿಹಾರ ದ್ರವ್ಯ ಅವರಿಗೆ ಸಿಗುತ್ತಿದೆ. ಇಟಲಿಯಿಂದಲೂ ೧೦ ಕೋಟಿ ದೊರೆಯುವದು. ಆದರೆ ಇದೆಲ್ಲ ಸೇರಿ "ನಮ್ಮ ಬಡ ಜರ್ಮನರ" ಹಿತಕ್ಕಾಗಿ ಬ್ರಿಟಿಶ ಮತ್ತು ಅಮೇರಿಕನ್ ನಾಗರಿಕರು ಉಸಿರೆತ್ತದೆ ಕೊಡಬೇಕಾಗುವ ಹಣದಷ್ಟು ಆಗುವದಿಲ್ಲ. ಪ್ರಾಯಶ್ಚಿತ್ತ ಇದಕ್ಕಿಂತ ಹತ್ತು ಪಾಲು ಭಾರವಾಗಿದ್ದರೂ ರಶಿಯನ್ನರಿಗೆ ಅವರ ಸುಟ್ಟ ಮನೆ, ಕಳವಾದ ಕಾಲ್ಮರಿ, ಹಳಿಗಾಲದ ಅಂಗಿ, ಸತ್ತ ಮಕ್ಕಳನ್ನು ತಿರುಗಿ ಕೊಡಲಾರವು.

—ಓ ನೇ ಪುಟಕ್ಕೆ



Witty Tales of Badshah and Birbal

by M. S. Patel M.A., T.D. (Lond) M.B.S.T. Lecturer in Education Secondary Traning College, Baroda pp 233. Price 6-12-0

Publishers:- N. M. Thakkar & Co. 140 Princess Street Bombay 2

ಅಕಬರ ಬಾದಶಹ ಹಾಗೂ ಬೀರಬಲ್ಲನ ವಿನೋದಪೂರ್ಣ ಕಥೆಗಳ ಇಂಗ್ಲ ಅನುವಾದ ಇದು. ಮುಂಬಯಿ ಮಾಧ್ಯಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಶ್ರೀ ಎಂ. ಎಸ್. ಪಟೇಲರು ಈ ಕಥೆಗಳನ್ನು ಇಂಗ್ಲ ಭಾಷೆಗೆ ಪರಿವರ್ತಿಸಿರುವರು. ಬೀರಬಲ್ಲನ ಮತ್ತು ಅಕಬರನ ಕಥೆಗಳನ್ನು ಅರಿಯದ ಹಿಂದಿಯನೇ ಇಲ್ಲ. ಈ ಕತೆಗಳಲ್ಲಿ ಹುದುಗಿದ ಹುರುಕಾದ ವಿನೋದ, ಸೂಕ್ಷ್ಮ ವ್ಯವಹಾರ ಜ್ಞಾನ ಇವು ವಿಶ್ವಸಾಹಿತ್ಯದಲ್ಲಿಯೇ ಒಂದು ಮಹತ್ವದ ಸ್ಥಾನವನ್ನು ಪಡೆದಿವೆ. ಬೀರಬಲ್ಲನು ಕೇವಲ ಒಬ್ಬ ಸಾಮಾನ್ಯ ವಿದೂಷಕನಾಗಿರದೆ ಚತುರ ಮುತ್ಸದ್ದಿ ಯಾಗಿದ್ದಿರಬೇಕೆಂಬುದನ್ನು ಈ ಕಥೆಗಳು ಚೆನ್ನಾಗಿ ನಿದರ್ಶಿಸುತ್ತಿವೆ. ಅದರಿಂದ ಬೀರಬಲ್ಲನ ಹೆಸರು ಹಿಂದುಸ್ಥಾನದಲ್ಲಿ ಮನೆಮಾತಾಗಿ ಬಿಟ್ಟಿದೆ. ಪಂಚತಂತ್ರ, ಹಿತೋಪದೇಶ ಇವುಗಳ ನೀತಿಗಳ ಮಾಲಿಕೆಯಲ್ಲಿಯೇ ಬೀರಬಲ್ಲನ ಕಥೆಗಳನ್ನು ಬಲ್ಲವರು ಪಠಣಿಸಿ ಹೇಳುವದುಂಟು. ಎಳೆಮಕ್ಕಳ ಬುದ್ಧಿಯನ್ನು ಹರಿತಗೊಳಿಸಲು ಈ ಕಥೆಗಳು ಬಹಳ ಉಪಯುಕ್ತವಾಗಿವೆಯಾಗುದರಿಂದ ಹಿಂದಿನ ಹಿರಿಯರು ಮಕ್ಕಳ ವಿದ್ಯಾಭ್ಯಾಸಕ್ಕೆ ಪೋಷಕವಾಗುವಂತೆ ಮನೆಗಳಲ್ಲಿ ಈ ಕಥೆಗಳನ್ನು ಹೇಳುತ್ತಿದ್ದರು. ಆದರೆ ಇತ್ತೀಚೆಗೆ ಆ ಸಂಪ್ರದಾಯ ಅಳಿದುಹೋದುದರಿಂದ ಆ ಕಥೆಗಳನ್ನು ಅಚ್ಚುಗೊಳಿಸಿ ವಿದ್ಯಾರ್ಥಿಗಳ ಕೈಯಲ್ಲಿ ಅವುಗಳನ್ನಿಡುವದು ಅವಶ್ಯವಾಗಿದೆ. ಅಕಬರ ಬಾದಶಹನಂಥ ಮಹಾಸಮ್ರಾಟನ ಕೂಡ ಅತ್ಯಂತ ಸಲುಗೆಯಿಂದ ನಡೆದುಕೊಂಡರೂ ಪರಸ್ಪರ ಗೌರವಾದರಗಳನ್ನು ಕಾಪಾಡಿಕೊಂಡು ಬಂದ ಬೀರಬಲ್ಲನ ಜಾಣ್ಮೆಯ ಮಾತಿನ ಪವಗಳು ಯುವಕರಿಗೆ ಆದರ್ಶಪ್ರಾಯವಾಗಿವೆ. ದೊಡ್ಡ ಅರಸನ ಕೂಡ ಸರಸಸಲ್ಲಾಪ ಮಾಡುವಾಗ ಸ್ವಾಭಿಮಾನಕ್ಕೆ ಧಕ್ಕೆ ತಗಲಿದರೆ ಅದನ್ನು ಕುಶಲತನದಿಂದ ರಕ್ಷಿಸಿಕೊಂಡ ಬೀರಬಲ್ಲನ ಜಾಣ್ಮೆಗೆ ಎಂಥಹವರೂ ತಲೆದೂಗದೇಕಾಗುವದು. ಈ ದೃಷ್ಟಿಯಿಂದ ಬೀರಬಲ್ಲನ ಕಥೆಗಳಿಗೆ ನಮ್ಮ ಸಾಂಸ್ಕೃತಿಕ ಶಿಕ್ಷಣದಲ್ಲಿ ಒಂದು ದೊಡ್ಡ ಎಡೆಯಿದೆಯೆಂದು ಹೇಳಬಹುದು. ಬೀರಬಲ್ಲನ ಸಮಯಸೂಚಕತೆ, ಪರಿಹಾಸಪ್ರಿಯತೆ, ನಯವಾದ ಮಾತಿನರೀತಿ, ಸ್ವಾಭಿಮಾನಜಾಗೃತಿ, ಇವುಗಳ ಪರಿಚಯಕ್ಕೆ ಈ ಕಥೆಗಳು ಬಹಳ ಉತ್ತಮ ಸಾಧನಗಳಾಗಿವೆ. ಆಂಗ್ಲ ಭಾಷೆಗೆ ಈ ಕಥೆಗಳನ್ನು ಪರಿವರ್ತಿಸಿದ್ದುದಕ್ಕೆ ಶ್ರೀ ಪಟೇಲರು ಅಭಿನಂದನಾರ್ಹರಾಗಿರುವರು. ಪುಸ್ತಕದ ಅಚ್ಚು ಮತ್ತು ಕಟ್ಟುಗಳು ಸಮಾಧಾನಕರವಾಗಿದ್ದರೂ ಇನ್ನೂ ಅಂದವಾಗಿದ್ದರೆ ಒಳಿತಾಗುತ್ತಿತ್ತೆಂದು ಹೇಳದಿರೆವು. ಪುಸ್ತಕದ ಬೆಲೆ ಮಾತ್ರ ವಿದ್ಯಾರ್ಥಿಗಳ ಅಳವಿನಾಚೆಗಿರುವದೆಂದು ವಿಷಾದದಿಂದ ಹೇಳಬೇಕಾಗಿದೆ. ಶ್ರೀ ಪಟೇಲರು ಮುಂದಿನ ಮುದ್ರಣಕಾಲಕ್ಕೆ ಅದನ್ನು ಇಳಿಸಿ ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆವಂತೆ ಮಾಡುವರೆಂದು ಹಾರೈಸುತ್ತೇವೆ.

Dale Carnegie's Biographical Roundup

(Highlights in the lives of thirty nine Famous people)
Publishers:- Vora & Co. L'd. 3, Round Building, Kalbadevi Road, Bombay 2
pp 192 Price 5-12-0.

ಈ ಪುಸ್ತಕದಲ್ಲಿ ಜಾರ್ಜ ಬರ್ನಾರ್ಡಶಾ, ಜನರಲ್ ಜೇಮ್ಸ ಡೂಲಿಟ್ಲ, ಮದಾಮ ಕ್ಯೂರಿ, ಜನರಲ್ ಜಾರ್ಜ ಮಾರ್ಶಲ್, ಮಾರ್ಕ ಟ್ವೇನ, ಜನರಲ್ ಪಿಂಗೇಟ, ಜಾಕ ಡೆಂಪ್ಸಿ, ವಿನ್‌ಸ್ಟನ್ ಚರ್ಚಿಲ್, ಎಲಿಕಲ್ಬರ್ಟಸನ್, ಸ್ಟಾಲಿನ್, ಕ್ಲಾರ್ಕ ಗೇಬಲ್, ಜನರಲ್ ಕ್ಲೇರಚೆನಾಲ್ಟ, ಗ್ಲೆನ್ ಮಾರ್ಟಿನ್, ಲಾರ್ಡ ಮಾಂಟಬ್ಯಾಟನ್, ಬಾಬ್ ಹೋಪ, ಕ್ಯಾಪ್ಟನ್ ರಿಕೆನ್‌ಬ್ಯಾಕರ, ಜಾನ್ ಬ್ಯಾರಿಮೂರ, ಓಲಿವ್ಹರ ವೆಂಡೆಲ್ ಹೋಮ್ಸ, ಸ್ಕಾಟ್, ಬರ್ನಾರ್ಡ ಬಾರುಕ, ಜನರಲ್ ಬ್ರ್ಯಾಡ್ಲೆ, ಅಡ್ಮಿರಲ್ ನಿಮಿಟ್ಝ್, ಪ್ಯಾಟರ್ಸನ್ ಚಿಯಾಂಗ-ಕೈಶೇಕ, ಜನರಲ್ ಕ್ಲಾರ್ಕ, ಜನರಲ್ ಐಸೆನ್‌ಹಾವರ, ಲೊವೆಲ್ ಥಾಮಸ್, ಕ್ಯಾಪ್ಟನ್ ಎಲ್ಬರ್ಗ, ಅಯರ್ವಿಂಗ ಬರ್ಲಿನ್, ಜನರಲ್ ಮ್ಯಾಕಾರ್ಥರ, ಡೊರೊಥಿ ಡಿಕ್ಸ, ಮುಸೋಲಿನಿ, ಬಿಂಗ ಕ್ರಾಸ್ಬಿ, ಮೊಂಟಗಾಮೆರಿ, ಸ್ಮಿಥ್, ಲಾರ್ಡ ಬೀವರ್ ಬ್ರುಕ್, ಜನರಲ್ ಡಿಗಾಲ್, ಕಾರ್ಡೆಲ್ ಹಲ್, ಹೆನ್ರಿ ಕೈಸರ ರಾಯಿಟ ಬ್ರದರ್ಸ, ಇವರ ಚಿಕ್ಕ ಜೀವನ ಚರಿತ್ರೆಗಳು ಕೊಡಲಾಗಿವೆ. ಮೇಲೆ ಕೊಟ್ಟ ಮೂವತ್ತೊಂಬತ್ತು ಜನರೆಲ್ಲ ಒಂದಿಲ್ಲೊಂದು ಬಗೆಯಿಂದ ಜಾಗತಿಕ ಇತಿಇತಿಹಾಸದಲ್ಲಿ ಸಂಸ್ಮರಣೀಯ ಸ್ಥಾನಗಳನ್ನು ಪಡೆದಿರುವದರಿಂದ ಅವರ ಚರಿತ್ರಗಳ ಜ್ಞಾನವು ಮುಂದಿನ ಪೀಳಿಗೆಯ ಮುನ್ನಡೆಗೆ ಅತ್ಯಗತ್ಯವಾಗಿದೆ. ಕಾರ್ಲೈಲ್‌ನು ಹೇಳಿದಂತೆ ಇತಿಹಾಸವೆಂದರೆ ಮಹಾ ವ್ಯಕ್ತಿಗಳ ಜೀವನ ಚರಿತ್ರೆಯೇ ಸರಿ. ಮಹಾವ್ಯಕ್ತಿಗಳ ಕೃತಿಗಳು ಸನ್ನಿವೇಶದ ಮೇಲೆ ಅದ್ಭುತ ಪ್ರಭಾವವನ್ನು ಬೀರಿ ಇತಿಹಾಸಕ್ಕೆ ಒಂದು ನವಚೈತನ್ಯವನ್ನು ಕೊಡುತ್ತವೆಂಬ ಮಾತು ಅನುಭವಸಿದ್ಧವಾಗಿದೆ. ಈ ದೃಷ್ಟಿಯಿಂದ ಡೇಲ ಕಾರ್ನೆಗಿಯವರು ಮಾಡಿದ ಜೀವನ ಚರಿತ್ರೆಗಳ ಈ ಸಂಕಲನವು ತರುಣರಿಗೆ ಅತ್ಯಂತ ಮಾರ್ಗದರ್ಶಕವಾಗಿದೆಯೆಂದು ನಿರಾತಂಕವಾಗಿ ಹೇಳಬಲ್ಲೆವು. ವಿಶೇಷತಃ ಕಾರ್ನೆಗಿಯವರು ತಮ್ಮದೇ ಆದ ಒಂದು ವಿಚಿತ್ರ ಬರಹದ ಪದ್ಧತಿಯಿಂದ ಈ ಚರಿತ್ರೆಗಳನ್ನು ಬಹಳ ಆಕರ್ಷಕವಾಗಿಸಿರುವರು. ಉದಾಹರಣೆಗಾಗಿ ಪರಿವಿಡಿಯಲ್ಲಿ ಅವರು ಚರಿತ್ರನಾಯಕರ ಗುಣಾನುವಾದ, ರಹಸ್ಯರೂಪಿಯಾಗಿ ಒಂದೆರಡು ವಾಕ್ಯಗಳಲ್ಲಿ ಇಡೀ ಜೀವನದ ಸಾರ್ಥ್ಯವನ್ನು ಅಭಿವ್ಯಕ್ತಪಡಿಸುವ ಅವರ ಬರಹದ ಬಗೆಯು ಬಹು ಮುದ್ದಾಗಿದೆ, ಮೋಹಕವಾಗಿದೆ. "ಗೆಳೆಯರನ್ನು ಕಾಣಲು ಹುದುಗಿಕೊಂಡು ಮುಖಹೀನನಾಗಿದ್ದ ಬರ್ನಾರ್ಡ ಶಾನು ಲೋಕವಿಖ್ಯಾತ ಉಪನ್ಯಾಸಕನಾದನು" ಎಂದು ಬಣ್ಣಿಸಿದ ಬಗೆ, ಹಾಗು "ಗಣಿತವೆಂದರೆ ಹೆದರುತ್ತಿದ್ದ ಚರ್ಚಿಲ್ಲನು ಹಣಕಾಸಿನ ಮಂತ್ರಿಯಾದನು" "ಹುಡಿಗೆಯರನ್ನು ಕಂಡರೆ ಕ್ಲಾರ್ಕ ಗೇಬಲ್ಲನು ಹೆದರುತ್ತಿದ್ದನು; ಆದರೆ ಆತನನ್ನು ನೋಡಲು ಅರ್ಧ ದಿವಸದ ವರೆಗೆ ಕೆಲಸಬಿಟ್ಟು ಹುಡಿಗೆಯರು ನಿಲ್ಲುವರು." "ಬ್ರಿಟಿಷ ಧ್ವಜದಡಿಯಲ್ಲಿ ಮಕ್ಕಳನ್ನು ಹಡೆಯಲೊಪ್ಪದ ಹೆಂಡತಿಯನ್ನು ಸ್ಕಾಟ್ಸನು ಮದುವೆಯಾದನು." ಗಂಡಂದಿರನ್ನು ಹೇಗೆ ದೊರಕಿಸಬೇಕೆಂಬುದನ್ನು ಲಕ್ಷಾಂತರ ಹುಡುಗೆಯರಿಗೆ ಉಪದೇಶಿಸಿದ ಡೊರೊಥಿ ಡಿಕ್ಸಳು" "ಏಳು ವರ್ಷ ಮಾತ್ರ ಸಾಲೆಗೆ ಹೋಗಿ ಆರು ವಿಶ್ವವಿದ್ಯಾಲಯಗಳ ಪದವಿಗಳನ್ನು ಪಡೆದ ಅಲ್ಫ್ರೆಡ್ ಸ್ಮಿಥ್" "ಹನ್ನೆರಡು ನಿಮಿಷಗಳಲ್ಲಿ ಇತಿಹಾಸವನ್ನು ಮಾಡಿದ ರಾಯಿಟ ಬ್ರದರ್ಸ" ಈ ಬಗೆಯಾಗಿ ಆಕರ್ಷಕ ಉಪಶೀರ್ಷಿಕೆಗಳಿಂದ ಕಾರ್ನೆಗಿಯವರು ತಮ್ಮ ಗ್ರಂಥದ ಉಪಯುಕ್ತತೆಯನ್ನು ಬೆಳೆಸಿರುವರು. ಪುಸ್ತಕದ ಉಪಯುಕ್ತತೆಯನ್ನು ಮನದಂದರೆ ಈಗಿಟ್ಟ ಬೆಲೆ ಬಹಳ ಹೆಚ್ಚೆಂದೆನಿಸದು. ಒಟ್ಟಿನಲ್ಲಿ ಇದೊಂದು ಸಂಗ್ರಾಹ್ಯ ಪುಸ್ತಕವೆಂದು ಹೇಳಬಲ್ಲೆವು.

ಒಂದು ಸಮಸ್ಯೆ

ಈ ಕೆಳಗಿನ ಸಮಸ್ಯೆಯನ್ನು ನೀವು ಬಿಡಿಸಬಲ್ಲಿರಾ ನೋಡಿರಿ?

ನನ್ನಲ್ಲಿ ನೋಡಲು ಒಂದೇ ಗಾತ್ರದ ಎಂಟು ಚೆಂಡುಗಳಿವೆ. ಅದರಲ್ಲೊಂದು ಮಾತ್ರ ಉಳಿದವುಗಳಿಗಿಂತ ಸ್ವಲ್ಪ ಹಗುರಾಗಿದೆ. ಆದರೆ ನೋಟಕ್ಕೆ ಏನೂ ಹೆಚ್ಚುಕಡಿಮೆ ಕಾಣುವದಿಲ್ಲ. ಆ ಹಗುರಾದ ಚೆಂಡು ಯಾವುದೆಂದು ನೀವು ಎರಡೇ ಬಾರಿ ತೂಕ ಮಾಡಿ ಕಂಡು ಹಿಡಿಯಬಲ್ಲಿರಾ? (ಉತ್ತರಕ್ಕೆ ೧೬ ನೆ ಪುಟ ನೋಡಿರಿ)

ಪ್ರಾಣಿಶಾಸ್ತ್ರಿಗಳ ಕಲ್ಪನಾವೈಖರಿ

ಭಾವೀ ಮನುಷ್ಯನ ರೂಪ—ರೇಷೆ

ದುಂಡು ತಲೆ---ಸೆಕ್ಕಿದ ಮುಖ---ನಿಡು ಮೂಗು---ಚೂಚುಗದ್ದ---೨೮ ಹಲ್ಲು---ನಾಲ್ಕು ಬೆರಳಿನ ಪಾದ



ಮಾನವನ ಮುತ್ತಜ್ಜ ಮಂಗನಾಗಿದ್ದನೆಂದು ಡಾರ್ವಿನ್ನನು ಸಿದ್ಧಾಂತಕ್ಕೆ ಬಂದುದು ನಮಗೆಲ್ಲ ಗೊತ್ತು. ಅವನೊಡನೆ ನಾವು ಸಹಮತರಾಗಬಹುದು, ಆಗದಿರಬಹುದು. ಆದರೆ ಆದಿಮಾನವ ಈಗಿನ ಮಾನವನಿಗಿಂತ ಎಷ್ಟೋ ಬೇರೆಯಾಗಿದ್ದನೆಂಬಲ್ಲಿ ಯಾವುದೇ ಸಂಶಯವಿಲ್ಲ. ಮೇಲಿನ ಚಿತ್ರದಲ್ಲಿ ಮೊದಲನೆ ರುಂಡ ಆದಿಮಾನವನ ಸ್ವರೂಪದ ಕಲ್ಪನೆಯನ್ನು ಕೊಡುತ್ತದೆ.

ಅಂದಿನಿಂದ ಸುಮಾರು ಅರವತ್ತು ಲಕ್ಷ ವರ್ಷಗಳಲ್ಲಿ ಮಾನವನ ಸಾಮಾನ್ಯ ಸ್ವರೂಪ ನಡುವಿನ ಚಿತ್ರದ ಆಕಾರಕ್ಕೆ ಬಂದಿದೆ. ಇದನ್ನು ನೋಡಿ ಪ್ರಾಣಿಶಾಸ್ತ್ರಜ್ಞರು ಮುಂದಿನ ಮಾನವನ ಕಲ್ಪನೆಯನ್ನು, ಅನೇಕ ಲಕ್ಷ ವರ್ಷದಾಚೆಗಿನ ಮನುಷ್ಯನ ಭಾವೀ ರೂಪವನ್ನು ನಾನಾ ವಿಧವಾಗಿ ಕಲ್ಪಿಸಿಕೊಳ್ಳುತಿದ್ದಾರೆ.

ಕೆಲವರು ತರ್ಕಿಸುತ್ತಾರೆ: ಮಾನವನ ಪಶುರೂಪ ಅಳಿಯುತ್ತಳಿಯುತ್ತ ಹೋಗಿ ಮೆದುಳು ಬೆಳೆಯುವದು. ಕೂದಲಿಲ್ಲದ ದೊಡ್ಡ ದುಂಡು ತಲೆ, ಕೀಟ ಸಮಾನ ಕೈಕಾಲು, ಕಣ್ಣಲ್ಲಿ ಕನ್ನಡಕ, ಬಾಯಲ್ಲಿ ಬೀಜಗಣಿತ ಭಾಷೆ, ಹೊಟ್ಟೆಗೆ ಆಹಾರ ಮಾತ್ರೆಗಳು—ಈ ಬಗೆಯಾಗಿ ವಿಜ್ಞಾನದ ವಿಜಯ ಸ್ವರೂಪನಾದ ಮಾನವನ ಅಕರಾಳ ವಿಕರಾಳ ರೂಪ ಮೈಗೆ ಮುಳ್ಳುಬರಿಸುವಂತಿದೆ.

ಶರೀರ ಸೊರಗುವದಿಲ್ಲ

ಆದರೆ ಈ ಗಂಡಾಂತರವಿಲ್ಲೆಂದು ಉಳಿದವರು ಸಂತೈಸುತ್ತಾರೆ. ಮನುಷ್ಯ ದೊಡ್ಡ ಪ್ರಾಣಿ. ಅವನ ದೇಹಾಕಾರ ಅವನಿಗೆ ಬಹಳ ಸಹಾಯಕವಾಗಿದೆ. ಅಂದ ಮೇಲೆ ಅವನ ಕೈಕಾಲು ಎದೆ ಹೊಟ್ಟೆ ಸೊರಸೊರಗುತ್ತ ಹೋಗುವ ಭಯವಿಲ್ಲ. ಅವನ ಶರೀರ ಸುಸ್ಥಿತಿಯಲ್ಲಿ ಸುದೃಢವಾಗಿ ಉಳಿದೇ ತೀರುವದು. ಅದ್ದರಿಂದ ನಿರುಪಯುಕ್ತ ಕೀಟದೇಹದ ನಡೆಯುವ ಮೆದುಳಾಗಿ ಮನುಷ್ಯ ವಿಕೃತಗೊಳ್ಳುವ ಭಯವಿಲ್ಲ.

ಆದರೆ ಮನುಷ್ಯನ ರೂಪ ಬದಲಾಯಿಸಲಿಕ್ಕಿಲ್ಲವೆಂದು ಮಾತ್ರ ಯಾರೂ ಭ್ರಮಿಸತಕ್ಕದಲ್ಲ. ಅವನ ಇತಿಹಾಸದ ಸುಮಾರು ೬೦ ಲಕ್ಷ ವರ್ಷಗಳಲ್ಲಿ ಅವನಲ್ಲಾದ ಬದಲಾವಣೆ ಬೇರಾವ ಪ್ರಾಣಿಗಿಂತಲೂ ಅಧಿಕವಾಗಿದೆ. ಹತ್ತು ಲಕ್ಷ ವರ್ಷಗಳಲ್ಲಿ ಅವನ ದವಡೆ ಒಂದು ಇಂಚಿನಷ್ಟು ಕುಗ್ಗಿದೆ. ಇದೇನು ಮಹಾ ಎಂದು ನಿಮಗೆನ್ನಿಸಬಹುದು. ಆದರೆ, ಪ್ರಾಣಿ ಜೀವನದ ಉತ್ಕ್ರಾಂತಿಯಲ್ಲಿ ಇದು ಅಭೂತಪೂರ್ವ ಓಟವೇ ಸರಿ. ಮನುಷ್ಯ ಈಗ ನಾಗರಿಕನಾಗಿ ಬಿಟ್ಟಿದ್ದಾನೆ, ಇನ್ನು ಅವನಲ್ಲಿ ಬದಲಾವಣೆ ಆಗುವ ಸಂಭವವಿಲ್ಲ ಎಂಬಂತೆಯೂ ಇಲ್ಲ. ನಾಗರಿಕತೆಯಿಂದ ಅವನ ಉತ್ಕ್ರಾಂತಿಯ ಬಿರುಸು ಹೆಚ್ಚಾಗುವ ಸಂಭವವೇ ಹೆಚ್ಚು.

ಮನುಷ್ಯನ ಭಾವೀ ಉತ್ಕ್ರಾಂತಿಯನ್ನು ಊಹಿಸುವದು ಅಸಾಧ್ಯಪ್ರಾಯವಾದ ಕೆಲಸವೇ ಸರಿ. ಆದರೂ ಕೆಲವು ಸಾಮಾನ್ಯ ಊಹೆಗಳನ್ನು ಮಾಡಬಹುದು:-

ಎತ್ತರ ಹೆಚ್ಚುವದು

ಮನುಷ್ಯನ ಎತ್ತರ ಹೆಚ್ಚುವದೆಂದು ಡಾ. ಹೆನ್ರಿ ಶಾಕೋ ಎಂಬ ಪ್ರಸಿದ್ಧ ಪ್ರಾಣಿ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಈಗೊಂದು ಶತಮಾನದಿಂದ ಮನುಷ್ಯನ ಆಕಾರ ಎತ್ತರವಾದುದು ನಿಜ. ಆದರೆ ಇದು ಒಳ್ಳೆಯ ಆಹಾರ, ವೈದ್ಯಕೀಯ ಶುಶ್ರೂಷೆಯ ಪರಿಣಾಮವಾಗಿರಬೇಕು. ಆದಿ ಮಾನವರಲ್ಲೊಂದು ಜಾತಿ ಈಗಿನ ಯುರೋಪಿಯನ್ನರಿಗಿಂತಲೂ ಎತ್ತರವಾಗಿದ್ದುದನ್ನೂ ಮರೆಯಕೂಡದು. ನಿಗ್ರೋಕುಲದವರು ಮೊದಲಿಗಿಂತ ಎಷ್ಟೋ ಕುಳ್ಳರಾಗಿಬಿಟ್ಟಿದ್ದಾರೆ.

ಅದ್ದರಿಂದ ಇದು ಉತ್ಕ್ರಾಂತಿಯ ಫಲವಲ್ಲ. ಕೇವಲ ಸ್ಥಾನಿಕ ಪರಿಸ್ಥಿತಿಯ ಪರಿಣಾಮ. ಈಗಿನಂತೆ ಮನುಷ್ಯನ ಎತ್ತರ ಹೆಚ್ಚುತ್ತ ಹೋದರೂ ಅದು ಬೇಗನೆ ಮಿತಿಯನ್ನು ಮುಟ್ಟದಿರದು. ಎತ್ತರದಲ್ಲೇನಾದರೂ ವಿಪರೀತ ಹೆಚ್ಚಳವಾಯಿತೆಂದರೆ ಅದು ಮಾನವನಿಗೆ ಪ್ರತಿಕೂಲವೇ ಆದೀತು. ಅಸ್ಥಿ ಪಂಜರಕ್ಕೆ, ಮುಖ್ಯವಾಗಿ ಪಾದಕ್ಕೆ ಅದರಿಂದ ಅನವಶ್ಯಕ ಶ್ರಮ ಹೆಚ್ಚಿ ಮನುಷ್ಯನ ಬೆನ್ನು ಬಗ್ಗೀತು. ಮೇಲಾಗಿ ಅಂಥ ಅಗಾಧ ರಕ್ಕಸಾಕಾರದಿಂದ ಅವನಿಗೆ ಆಗಬೇಕಾದುದೂ ಏನೂ ಇಲ್ಲ. ಅಂಥ ದೇಹದಿಂದ ಅವನು ಎದುರಿಸಬೇಕಾದ ಶತ್ರುವೂ ಇಲ್ಲ.

ಮೆದುಳು ಬೆಳೆದೀತೆ ?

ಇದರಿಂದ ನಾವು ಕುಳ್ಳರಾಗುವೆವೆಂದು ತಿಳಿದುಕೊಳ್ಳಬಾರದು. ಸಣ್ಣ ಪ್ರಾಣಿಗಳ ಮೆದುಳೂ ಸಣ್ಣದಾಗಿರಬೇಕಾಗಿರುವದರಿಂದ ಬುದ್ಧಿ ಜೀವಿ ಮಾನವನಿಗೆ ಈ ಭಯವಿಲ್ಲ. ಅಂತೂ ಈಗಿರುವ ಗಾತ್ರವೇ ನಮಗೆ ಯೋಗ್ಯ, ಅನುಕೂಲವಾಗಿರುವದರಿಂದ ಅದೇ ಉಳಿಯುವ ಸಂಭವ ಹೆಚ್ಚು.

ಮನುಷ್ಯನ ಮೆದುಳು ಉತ್ಕ್ರಾಂತಿಯಲ್ಲಿ ಬೆಳೆಯುತ್ತ ಬಂದಿರುವದೇನೋ ನಿಜ. ಅಂದ ಮಾತ್ರಕ್ಕೆ ಅದರ ಗಾತ್ರ ಹೆಚ್ಚುತ್ತಲೇ ಹೋದೀತೆಂಬ ನಂಬಿಕೆಯಿಲ್ಲ ಉದಾಹರಣೆಗಾಗಿ ಮೃಗರೂಪಿ ಸರ್ಪಗಳಲ್ಲಿ ಮೊದಲು ರಕ್ತದ ಬಿಸಿ ಏರಿದ ಪ್ರಮಾಣದಲ್ಲಿ ಲೆಕ್ಕಹಾಕಿದರೆ ಅದಿಂದು ಕುದಿಯುತಿರಬೇಕಾಗಿತ್ತು. ಆದರೆ ೯೮ ಅಂಶಕ್ಕೆ ಬಂದೊಡನೆ ಬಿಸಿಯು ಏರಿಕೆ ನಿಂತುಹೋಯಿತು. ಹಾಗೆ ಕೇಳಿದರೆ ಶಿಲಾಯುಗದ ಮನುಷ್ಯನ ಮೆದುಳು ಇಂದಿನವನಿಗಿಂತ ದೊಡ್ಡದಿತ್ತು.

ಆದರೆ ಮನುಷ್ಯನ ಬುದ್ಧಿ ಈಗಿರುವಂತೆ ಅಪೂರ್ಣವಾಗಿಯೆ ಉಳಿದೀತೆಂಬುದು ಕಲ್ಪನಾತೀತ. ಈಗಿರುವ ಮೆದುಳಿನ ಪೂರ್ಣ ಉಪಯೋಗವನ್ನು ನಾವಿನ್ನೂ ಮಾಡಿ ಮುಗಿಸಿಲ್ಲವೆಂದು ತೋರುತ್ತದೆ. ಈಗಿರುವ ಮೆದುಳಿನಲ್ಲಿ ಸುಧಾರಣೆಯಾಗುವ ಸಂಭವವಿದೆ. ಅದರೂ ಮೆದುಳಿನ ಗಾತ್ರ ಬೆಳೆಯುವದೇ ಕೊನೆಯ ಉಪಾಯವೆನ್ನಬಹುದು.

ದೇಹ, ಮೆದುಳುಗಳ ಗಾತ್ರದ ವಿಷಯ ಬಿಟ್ಟರೆ, ಉಳಿದ ವಿಚಾರಗಳನ್ನು ನೋಡೋಣ. ಒಟ್ಟಿನ ಮೇಲೆ ಅವನ ಮೈ ಅವನನ್ನು ನೆಟ್ಟಗಿರಿಸಲು ಸಾಕಷ್ಟು ಅನುಕೂಲವಾಗಿ ವಿಕಾಸ ಹೊಂದಿದ್ದು ಈಗ ಉಳಿದಿರುವದು ಅಲ್ಲೊಂದು ಇಲ್ಲೊಂದು ಚಿಲ್ಲರೆ ಅಪರ್ಯಾಪ್ತಿ ಮಾತ್ರ. ಗಂಟಲ ಎಲುಬು, ಎದೆ, ಬೆನ್ನು, ಟೊಂಕದೆಲುಬು ಕಾಲು, ಪಾದ ಇವೆಲ್ಲವೂ ಅವನಿಗೆ ಪೂರ್ಣ ಉಪಯುಕ್ತವಾಗುವಂತೆ ಉತ್ಕ್ರಾಂತಿ ಹೊಂದಿವೆ. ಅವನ ಕೈಯೂ ಹಸ್ತವೂ ಅತ್ಯಂತ ತೃಪ್ತಿಕರವಾಗಿವೆ. ಇವೆಲ್ಲ ಬಹಳ ದೂರ ಭವಿಷ್ಯತ್ತಿನವರೆಗೆ ಬದಲಾಗುವ ಲಕ್ಷಣವಿಲ್ಲ.

ಆಸನಭಾಗದ ದೌರ್ಬಲ್ಯಗಳು

ನಮ್ಮ ದೇಹದಲ್ಲಿರುವ ಅತಿ ದುರ್ಬಲ ಭಾಗವೆಂದರೆ ಕಿಬ್ಬೊಟ್ಟೆ ಭಾಗದ ಅಂಗಳು. ಟೊಂಕದ ಮೇಲಿನ ಭಾರವನ್ನೆಲ್ಲ ಹೊತ್ತು ನೆಟ್ಟಗಿರಿಸಬೇಕಾದ ಬೆನ್ನುಹುರಿಯ ಕೆಳಭಾಗ ಬಹಳ ದುರ್ಬಲವಾಗಿರುವದರಿಂದ ಈಗಾಗಲೆ ಮಾನವನಿಗೆ ಭಾರ ಹೊರಲು ಮತ್ತು ಶ್ರಮಾವಹ ಕೆಲಸಗಳನ್ನು ಮಾಡಲು ಕಠಿನವಾಗಿದೆ. ಅದುದರಿಂದ ಈ ಭಾಗದ ಬೆನ್ನುಹುರಿ ಎಲುಬು ಇನ್ನಷ್ಟು ಕುಳ್ಳ ಹಾಗು ದಪ್ಪನಾಗಬಹುದು.

ದುಂಡು ತಲೆ

ನಮ್ಮ ತಲೆ ಮತ್ತು ಮುಖದ ರೂಪ ಹೇಗಾಗಬಹುದೆಂದು ಊಹಿಸುವದು ಕಠಿನ. ತಲೆಯ

(೧೬ ನೇ ಪುಟ ನೋಡಿರಿ)

ಮೈಸೂರ ಸತ್ಯಾಗ್ರಹ ಮತ್ತು ಅರ್ಕಾಟರು

ಮೈಸೂರಿನ ಭವಿತವ್ಯದ ಬಗೆಗೆ ವಿಚಾರ ಮಾಡಲು ನಮಗೆ ಶಾಂತವಾತಾವರಣ ಬೇಕು; ಆದುದರಿಂದ ಸತ್ಯಾಗ್ರಹವನ್ನು ಈಗ ಹೂಡುವದಯೋಗ್ಯವೆಂದು ದಿವಾಣರಾದ ಸರ್ ರಾಮಸ್ವಾಮಿಯವರು ನುಡಿದಿರುವರು. ಮೈಸೂರ ದಿವಾಣರು ಶಾಂತರೀತಿಯಿಂದ ಬೇಗ ಅಲ್ಲಿಯ ಪ್ರಜೆಗಳ ಬೇಡಿಕೆಗಳ ವಿಚಾರವನ್ನು ಮಾಡುವರೆಂಬ ವಿಶ್ವಾಸವು ಜನತೆಗೆ ಇದ್ದರೆ ಅಲ್ಲಿಯ ಧುರೀಣರು ಸತ್ಯಾಗ್ರಹವನ್ನು ಹೂಡುವ ಗೋಜಿಗೇ ಹೋಗುತ್ತಿರಲಿಲ್ಲ. ಅದರ ಮಾತನ್ನು ಕೂಡ ಎತ್ತುತ್ತಿರಲಿಲ್ಲ. ಆದರೆ ಮೈಸೂರ ದಿವಾಣರು ಕೇವಲ ಕಾಲಹರಣ ಮಂತ್ರವನ್ನು ಪಠಿಸುತ್ತಿರುವರೆಂಬ ಸಂಶಯ ಬಂದುದರಿಂದ ಅವರನ್ನು ತೀವ್ರ ಕಾರ್ಯಪ್ರವೃತ್ತರನ್ನಾಗಿಸುವ ಉದ್ದೇಶದಿಂದ ಸತ್ಯಾಗ್ರಹದ ಬ್ರಹ್ಮಾಸ್ತ್ರವನ್ನು ದೂಡಿಯಿಂದ ಹೊರದೆಗೆಯುವ ವಿಚಾರವು ಕಾಂಗ್ರೆಸಿಗರಿಗೆ ಬಂದಿದೆ. ಸರ್ ಅರ್ಕಾಟ ರಾಮಸ್ವಾಮಿಯವರಿಗೆ ಮೈಸೂರ ಪ್ರಜೆಗಳ ಬೇಡಿಕೆಗಳ ವಿಷಯದಲ್ಲಿ ನಿಜವಾದ ಕಳಕಳಿಯಿದ್ದರೆ ಅವರು ಅಧಿಕಾರ ಸ್ವೀಕಾರ ಮಾಡಿದ ಕೂಡಲೆ ಆ ಕೆಲಸಕ್ಕೆ ತೊಡಗುತ್ತಿದ್ದರು; ತೊಡಗುವದು ಅವರ ಕರ್ತವ್ಯವಾಗಿದ್ದಿತು. ಯಾಕಂದರೆ ಮೈಸೂರಿನ ರಾಜಕಾರಣದ ಪೂರ್ವಪರಿಚಯವಿಲ್ಲದೆ ಅವರು ದಿವಾಣ ಪದವಿಯನ್ನಲಂಕರಿಸಿರುವರೆಂದು ಹೇಳಲಿಕ್ಕಾಗುವದಿಲ್ಲ. ಅವರಿಗೆ ಮೈಸೂರು ಕಾಂಗ್ರೆಸಿನ ಹಾಗೂ ಸರಕಾರದ ನಡುವಿನ ತಿಕ್ಕಾಟಗಳ ಅರಿವು ಇಲ್ಲವೆಂಬ ಮಾತು ನಿಜವಾದರೆ ದಿವಾಣ ಪದವಿಯಂತಹ ಹೊಣೆಗಾರಿಕೆಯ ಸ್ಥಾನವನ್ನಲಂಕರಿಸಲು ಅವರು ಅನರ್ಹರೆಂದೇ ಹೇಳಬೇಕಾದೀತು. ಹಾಗೆ ಹೇಳಲು ಸರ್ ರಾಮಸ್ವಾಮಿಯವರ ಪೂರ್ವಾಪರಗಳನ್ನು ಬಲ್ಲವರಿಗೆ ಧೈರ್ಯವಾಗಲಾರದು. ಅಂತರರಾಷ್ಟ್ರೀಯ ಸಭೆ-ಸಮ್ಮೇಲನಗಳಲ್ಲಿ ಸುಂದರ ಹಾಗು ವಕ್ತೃತ್ವಪೂರ್ಣ ಉಪನ್ಯಾಸ ಮಾಡುವ ಸರ್ ಅರ್ಕಾಟರಿಗೆ ಮೈಸೂರ ಪ್ರಜೆಗಳ ಆಕಾಂಕ್ಷೆಗಳ ಪರಿಚಯವಿಲ್ಲೆಂದು ನಂಬುವದು ಕಷ್ಟ. ಅಂದಬಳಿಕ ಅಧಿಕಾರ ಸ್ವೀಕಾರ ಮಾಡಿದಂದಿನಿಂದ ಇಂದಿನ ವರೆಗೆ ಮೌನವ್ರತವನ್ನು ಧರಿಸಿ ಸುಮ್ಮನಿದ್ದು ಸತ್ಯಾಗ್ರಹದ ಮಾತನ್ನು ಕಾಂಗ್ರೆಸ ಧುರೀಣರೆತ್ತಿದ ಕೂಡಲೆ ಶಾಂತ ವಾತಾವರಣವು ಬೇಕೆಂದು ಹೇಳುವದು ಡಂಭಾಚಾರದ ಮಾತೇ ಹೊರತು ಕಳಕಳಿಯ ನುಡಿಯಲ್ಲೆಂಬುದು ಸ್ಪಷ್ಟವಾಗುತ್ತದೆ. ದಿವಾಣರು ಮನಸು ಮಾಡಿದರೆ ಅರೆ ನಿಮಿಷದಲ್ಲಿ ಮೈಸೂರಿನ ರಾಜಕೀಯ ಸಮಸ್ಯೆಯನ್ನು ಬಿಡಿಸಬಲ್ಲರು. ಬ್ರಿಟಿಶ ಸಾಮ್ರಾಜ್ಯ ಸರಕಾರದ ಮುಖ್ಯಮಂತ್ರಿಗಳಾದ ಮೇಜರ ಅಟ್ಲಿಯವರು ಧೈರ್ಯದಿಂದ ಫೆಬ್ರುವರಿ ೨೦ನೇ ದಿನಾಂಕದಲ್ಲಿ ಅಧಿಕಾರತ್ಯಾಗದ ನಿಶ್ಚಿತ ತಿಥಿಯನ್ನು ಸಾರಿ ಪ್ರಪಂಚವನ್ನೇ ದಂಗುಬಡಿಸಿದರು. ಈ ಮಾತಿನ ಜ್ಞಾನವು ಸರ್ ಅರ್ಕಾಟರಿಗೆ ಸರಿಯಾಗಿ ಆದಂತೆ ತೋರುವದಿಲ್ಲ. ಆದುದರಿಂದಲೇ ಅವರು ಇನ್ನು ಮೈಸೂರಿನ ಪ್ರಜೆಗಳನ್ನು ತಮ್ಮ ವಿಶ್ವಾಸದಲ್ಲಿ ತೆಗೆದುಕೊಂಡು ಜವಾಬದಾರ ಸರಕಾರದ ಘೋಷಣೆಯನ್ನು ಮಾಡಲು ಒಪ್ಪುತ್ತಿರುವದಿಲ್ಲ.

ಮೈಸೂರಿನ ದಿವಾಣರಿಗೆ ಶಾಂತ ವಾತಾವರಣವು ನಿಜವಾಗಿ ಬೇಕಾಗಿದ್ದರೆ ಕೂಡಲೆ ಅಲ್ಲಿ ಜವಾಬದಾರ ಸರಕಾರದ ಘೋಷಣೆಯನ್ನೂ ಅದರ ಸ್ಥಾಪನೆಗೆ ಯೋಗ್ಯ ಎತ್ತುಗಡೆಗಳನ್ನೂ ಮಾಡುವದುತ್ತಮ. ಇದುವೇ ಶಾಂತ ವಾತಾವರಣ ಸ್ಥಾಪನೆಯ ಸರಿಯಾದ ಮಾರ್ಗವಲ್ಲದೆ ಬೇರೆ ಯಾವುದೂ ಅಲ್ಲ. ಶ್ರೀಮನ್ಮಹಾರಾಜರು ಗಂಭೀರವಾದ ಸನ್ನಿವೇಶವನ್ನು ಚೆನ್ನಾಗಿ ಪರಾಮರ್ಶಿಸಿ ಸರ್ ಅರ್ಕಾಟರ ಕಡೆಯಿಂದ ಬುದ್ಧಿ ಹೇಳಿಸಿಕೊಳ್ಳುವ ಪ್ರಸಂಗವನ್ನು ತಂದುಕೊಳ್ಳದೆ ಸ್ವಯಂ ಪ್ರೇರಣೆಯಿಂದ ಜವಾಬದಾರ ರಾಜ್ಯ ಪದ್ಧತಿಯ ಸ್ಥಾಪನೆಗೆ ಒಪ್ಪಬೇಕೆಂದು ಸೂಚಿಸುತ್ತೇವೆ.

ಆಹಾರಮಂತ್ರಿಗಳ ಆಶಾವಾದ

ನಡುಗಾಲ ಸರಕಾರದಲ್ಲಿ ಆಹಾರ ಮಂತ್ರಿಗಳಾಗಿರುವ ಡಾ. ರಾಜೇಂದ್ರಪ್ರಸಾದರು ಮುಂಬಯಿಗೆ ಬಂದಾಗ ಆಹಾರ ಪರಿಸ್ಥಿತಿಯ ಸಮಾಲೋಚನೆಯನ್ನು ಮಾಡಿ ಈ ವರ್ಷ ಕಳೆದವರ್ಷದಷ್ಟು ಪರಿಸ್ಥಿತಿಯು ಚಿಂತಾಜನಕವಾಗಿಲ್ಲೆಂದು ಹೇಳಿದರು. ಮುಂಬಯಿ ಪ್ರಾಂತದ ಜನರಿಗೆ ರಾಜೇಂದ್ರ ಬಾಬುಗಳು ಹೇಳಿದ ಈ ಮಾತಿನಿಂದ ಬಹಳ ಸಮಾಧಾನವಾಗಲು ಸಾಕು. ಯಾಕಂದರೆ ಈಗಿದ್ದ ಸೀದಾಪ್ರಮಾಣವು ಕಡಿಮೆ ಆಗ ಬಹುದೆಂಬ ಭೀತಿಯುಂಟಾಗಿದ್ದಿತು. ಆ ಅಂಜಿಕೆಯು ಆಹಾರ ಮಂತ್ರಿಗಳ ಅಶ್ವಾಸನದಿಂದ ದೂರಾದುದು ಸಂತೋಷದ ಸಂಗತಿ. ಅದಕ್ಕಾಗಿ ರಾಜೇಂದ್ರಬಾಬುಗಳನ್ನು ನಾವು ಮನಸಾರೆ ಹಾಡಿಹರಸುತ್ತೇವೆ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಇದೇ ಸಂಬಂಧದಲ್ಲಿ ಅವರು ನಿಯಂತ್ರಣ ಮತ್ತು ಕಳ್ಳಪೇಟೆಗಳ ವಿಷಯದಲ್ಲಿ ಎತ್ತಿದ ವಿಚಾರಗಳ ಊಹಾಪೋಹವನ್ನು ನಾವು ಮಾಡದಿರಲಾರೆವು. ಆಹಾರ ಧಾನ್ಯದ ಹುಟ್ಟುವಳಿ ಹೆಚ್ಚಾದ ಹೊರತು ಸದ್ಯದ ನಿಯಂತ್ರಣಗಳನ್ನು ಸಡಿಲಿಸಲಿಕ್ಕಾಗದೆಂಬ ಮತವು ಶ್ರೀ ರಾಜೇಂದ್ರಪ್ರಸಾದರದಿದ್ದಂತೆ ತೋರುತ್ತದೆ. ಪರದೇಶಗಳಿಂದ ಬರುವ ಆಹಾರಧಾನ್ಯದ ಮೇಲೆಯೇ ಕೊನೆಯವರೆಗೆ ಕೈಯೂರಿ ಕುಳಿತು ಕೊಳ್ಳುವದು ಸಾಧ್ಯವೂ ಇಲ್ಲ; ಉಚಿತವೂ ಇಲ್ಲ. ಈ ಬಗೆಗೆ ಇಮ್ಮತವೇ ಇಲ್ಲ. ಆದರೆ ಧಾನ್ಯದ ಹುಟ್ಟುವಳಿಯನ್ನು ಹೆಚ್ಚಿಸಲು ಕೈಕೊಂಡ ಉಪಾಯಗಳು ಉತ್ಸಾಹಪ್ರದವಾಗಿಲ್ಲೆಂದು ದುಃಖದಿಂದ ನುಡಿಯಬೇಕಾಗಿದೆ. ಕಾಂಗ್ರೆಸ ಮಂತ್ರಿಮಂಡಲಗಳ ಕೈಗೆ ಅಧಿಕಾರ ಬಂದ ನಂತರವೂ ಒಕ್ಕಲತನದ ಶಾಲೆಗಳು ಹಳೆಯ ದಾರಿಯಲ್ಲಿಯೇ ನಡೆಯುತ್ತಿವೆ. ಜಿಲ್ಹೆಗಳಲ್ಲಿಯ ಆಹಾರ ಸಮಿತಿಗಳು ಕೇಕೇವಲ ಅಧಿಕಾರಸ್ಥರಿಗಾಗಿ ಹಪಾಪಿಸುವ ಜನರ ಸಮಿತಿಗಾಗಿ ಬಿಟ್ಟಿವೆ. ಈ ಮನೋವೃತ್ತಿ ಅಳಿದು ಅವು ಕಾರ್ಯಕ್ಷಮವಾಗಬೇಕಾದರೆ ಹಳ್ಳಿಯಲ್ಲಿ ಜನರನ್ನು ಎದುರಿಸುತ್ತಿರುವ ಸಮಸ್ಯೆಗಳ ಪರಿಶೀಲನೆ ಅತ್ಯಂತ ವ್ಯಾವಹಾರಿಕ ದೃಷ್ಟಿಯಿಂದ ಆಗುವದವಶ್ಯ. ಹಳ್ಳಿಗಳಲ್ಲಿ ಈಗ ಒಕ್ಕಲತನದ ಹೋರಿಗೆ ಬಂದ ಕುತ್ತೆಂದರೆ ದುಡಿಮೆಗಾರರ ಕೊರತೆ. ಈ ಪ್ರಶ್ನೆಯನ್ನು ಬಿಡಿಸದೆ ಒಕ್ಕಲತನದ ಏಳಿಗೆಯಾಗದು.

ನಿಯಂತ್ರಣಗಳ ವಿಷಯ ಬಹಳ ಉದ್ವೇಗಜನಕವಾಗಿದೆ. ಅಧಿಕಾರಿಗಳು ನಿಯಂತ್ರಣಗಳನ್ನು ತೆಗೆದರೆ ಆಹಾರ ಪರಿಸ್ಥಿತಿಯು ಕೆಡುವದೆಂದು ಹೆದರಿಸುತ್ತಿರುವರು. ಹಳ್ಳಿಗಳಲ್ಲಿ ವಸ್ತುಸ್ಥಿತಿಯನ್ನು ನೋಡಿದರೆ ನಿಯಂತ್ರಣಗಳಿಂದಾವ ಉಪಯೋಗವೂ ಆಗಿಲ್ಲೆಂದೆನಿಸುತ್ತದೆ. ನಿಯಂತ್ರಣದಿಂದ ಲಂಚಗುಳಿತನ ಲಾಭಬಡಕತನಗಳು ಮಾತ್ರ ಬೆಳೆದಿವೆ. ಹೀಗೆ ಆಹಾರಪರಿಸ್ಥಿತಿ, ಒಂದು ಸುಳಿಯಲ್ಲಿ ಸಿಕ್ಕು ಅಲ್ಲಿಯೇ ಗಿರಿಗಿರಿ ತಿರುಗುತ್ತದೆ. ಅದನ್ನು ದುಡುವಿನಿಂದ ಪಾರು ಮಾಡದೆ ಗತ್ಯಂತರವಿಲ್ಲ. ನಮ್ಮ ಅಭಿಪ್ರಾಯದ ಮೇರೆಗೆ ನಿಯಂತ್ರಣಗಳನ್ನು ತೆಗೆದು ಹಾಕಿಬಿಡುವದೇ ಯೋಗ್ಯಮಾರ್ಗವೆಂದು ಹೇಳಬಯಸುತ್ತೇವೆ. ಅದು ಸಾಧ್ಯವಾಗದಿದ್ದರೆ ಜಿಲ್ಹೆ ಜಿಲ್ಹೆಗಳ ನಡುವಿನ ಕಾಳುಕಡಿಗಳ ಸಾಗಾಟಕ್ಕಿರುವ ತೊಂದರೆಗಳನ್ನು ನಿವಾರಿಸಿ ಧಾನ್ಯದ ಸಾಗಾಟಕ್ಕೆ ದಾರಿಯನ್ನು ತೆರವುಮಾಡಿಕೊಡಬೇಕೆಂದು ಸೂಚಿಸುತ್ತೇವೆ.

ಭಟಕಳ ಮಹಾಬಂದರ

ಈ ಪ್ರಶ್ನೆಯು ಕರ್ನಾಟಕದ ಪ್ರಗತಿಯ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಬಂದರಗಳ ತಾಂತ್ರಿಕ ಸಮಿತಿಯೊಂದು ಕಳೆದ ಮೇ ತಿಂಗಳಲ್ಲಿ ಹಿಂದುಸ್ತಾನದ ಬಂದರಗಳನ್ನು ಕುರಿತು ತನ್ನ ವರದಿಯನ್ನು ಒಪ್ಪಿಸಿತು. ಅದರಲ್ಲಿ ಭಟಕಳ ಬಂದರವನ್ನು ಮಹಾಬಂದರವನ್ನಾಗಿ ಮಾಡುವದರಿಂದ ಮೈಸೂರ ಸಂಸ್ಥಾನ ಹಾಗೂ ಕರ್ನಾಟಕದ ಇತರಭಾಗಗಳಿಗೆ ಉಪಯೋಗವಾಗುವದೆಂದು ಹೇಳಿರುವದು. ಈ ಸಮಿತಿಯ ವರದಿಯನ್ನು ಪರಾಮರ್ಶಿಸಿ ಹಿಂದುಸ್ತಾನ ಸರಕಾರದವರು ಕೆಲವು ನಿರ್ಣಯಗಳನ್ನು ಮಾಡಿರುವರು. ಮುಂಬಯಿ ಸರಕಾರದವರೂ ಈ ವಿಷಯಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನಿಯಮಿಸಿದ್ದುದು ಸ್ವಾಗತಾರ್ಹವಾಗಿದೆ.

ಬ್ರಿಟಿಷ ಹಿಂದುಸ್ತಾನ ಹಾಗೂ ಸಂಸ್ಥಾನೀ ಹಿಂದುಸ್ತಾನವೆಂದು ಭೇದ ಮಾಡುವದುಚಿತವಲ್ಲೆಂದು ಬಂದರಗಳ ತಾಂತ್ರಿಕ ಸಮಿತಿಯು ವ್ಯಕ್ತಪಡಿಸಿದ ಅಭಿಪ್ರಾಯವು ಬಹಳ ಯೋಗ್ಯವಾಗಿದೆ. ಈ ದೃಷ್ಟಿಯಿಂದ ಮೈಸೂರು ಮತ್ತು ಬ್ರಿಟಿಷ ಕರ್ನಾಟಕ ಭಾಗಕ್ಕೆ ಉಪಯೋಗವಾಗುವ ಒಂದೇ ಬಂದರವು ಮೊದಲು ಆಗುವದುಚಿತವೆಂದು ನಮ್ಮದಾದರೂ ಅಭಿಪ್ರಾಯ. ಆದುದರಿಂದ ಕರ್ನಾಟಕದ ಪ್ರತಿನಿಧಿಗಳು ಭಟಕಳ ಮಹಾಬಂದರದ ನಿರ್ಮಾಣಕ್ಕೆ ತಮ್ಮ ಬೆಂಬಲವನ್ನು ಏಕಕಂಠದಿಂದ ಕೊಟ್ಟು ಬೇಗ ಆ ಕಾರ್ಯವನ್ನು ಸಾಧಿಸಿಕೊಳ್ಳದೇ ಇಲ್ಲದೆ ಕಾರವಾರವೂ ಆಗಲಿ ಭಟಕಳವೂ ಆಗಲಿ ಎಂದು ಬೇಡುತ್ತ ಹೋಗಬಾರದೆಂದು ಹೇಳಬಯಸುತ್ತೇವೆ.

ಕರ್ನಾಟಕ ವಿಶ್ವವಿದ್ಯಾಲಯ

ಈ ವಿಷಯವನ್ನು ಕೂಲಂಕಷವಾಗಿ ವಿಚಾರಿಸಿ ವರದಿಯನ್ನು ಇದೇ ಡಿಸೆಂಬರ ಕೊನೆಯೊಳಗಾಗಿ ಒಪ್ಪಿಸಲು ಮುಂಬಯಿ ಸರಕಾರದವರು ಒಂದು ತಜ್ಞ ಸಮಿತಿಯನ್ನು ನಿಯಮಿಸಿರುವರು. ನ್ಯಾ. ಮೂ. ಲೋಕೂರರು ಅದರ ಅಧ್ಯಕ್ಷರಾಗಿರುವರು. ತಡವಾದರೂ ಒಮ್ಮೆ ಈ ಸಮಿತಿಯನ್ನು ನಿಯಮಿಸಿದ್ದುದು ಸಮಾಧಾನದ ಸಂಗತಿ.

ಮೈಸೂರಲ್ಲಿ ಈಗೊಂದು ವಿಶ್ವವಿದ್ಯಾಲಯವಿದೆ. ಮುಂಬಯಿ ಕರ್ನಾಟಕದಲ್ಲಿ ಆಗುವ ವಿಶ್ವವಿದ್ಯಾಲಯವು ಕರ್ನಾಟಕದ ಎರಡನೇ ವಿಶ್ವವಿದ್ಯಾಲಯ. ಸ್ವತಂತ್ರ ಭಾರತ ಮತ್ತು ಪ್ರಾಂತೀಕೃತ ಕರ್ನಾಟಕದಲ್ಲಿ ಈ ಹೊಸ ವಿಶ್ವವಿದ್ಯಾಲಯವಾಗುತ್ತಿರುವದು ಶುಭಲಕ್ಷಣ. ಸಮಿತಿಯ ಸದಸ್ಯರು ನವಕರ್ನಾಟಕದ ದೃಷ್ಟಿಯಿಂದ ವಿಶ್ವವಿದ್ಯಾಲಯದ ರಚನೆ, ಕ್ಷೇತ್ರ, ವ್ಯಾಪ್ತಿ ಮೊದಲಾದ ವಿಚಾರಗಳನ್ನು ವಿಮರ್ಶಿಸುವದುಚಿತ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಹಳೆಯ ವಿಶ್ವವಿದ್ಯಾಲಯಗಳ ವರದಿಗಳು ನಮಗೆ ಬಹಳ ಮಾರ್ಗದರ್ಶಕವಾಗಲಾರವು. ಆದುದರಿಂದ ಹೊಸಬಾಳಿಗೆ ತಕ್ಕಂತೆ ಹೊಸ ಸ್ವರೂಪದ ವಿಶ್ವವಿದ್ಯಾಲಯದ ವ್ಯವಸ್ಥೆಯನ್ನು ನಾವು ಮಾಡಬೇಕಾಗುವದು. ನ್ಯಾ. ಮೂ. ಲೋಕೂರರ ಗೌರವ, ಡಾ. ನಂದೀಮಠರ ಉದ್ಯೋಗಶೀಲತೆ, ಪ್ರೊ. ಬಸವನಾಳರ ಕನ್ನಡ ಪ್ರೇಮ, ಶ್ರೀ ಹಳದಿಪುರರ ವ್ಯವಹಾರಜ್ಞಾನ, ಶ್ರೀ ಕರಮರಕರರ ಧೋರಣೀ ಸ್ವಭಾವ, ದಿವಾಕರರ ನವದೃಷ್ಟಿ ಹಾಗು ಅಷ್ಟಾವಧಾನಿತ್ವ, ದಾತಾರರ ಕಾಯದೆ ಪಾಂಡಿತ್ಯ, ಮೆನೆಜಿಸರ ಕವಿಸಹಜ ಸೌಂದರ್ಯಪ್ರೀತಿ, ಕಿತ್ತೂರರ ವಿಶಾಲ ಸಹಕಾರ ಮನೋಭಾವ, ಶ್ರೀ ಜಹಾಗಿರದಾರರ ಸೌಜನ್ಯ ವಿಶಾಲದೃಷ್ಟಿ, ಪರಮಶಿವಯ್ಯನವರ ವಿಜ್ಞಾನ ದೃಷ್ಟಿ ಇವೆಲ್ಲ ಕರ್ನಾಟಕದ ಹೊಸ ವಿಶ್ವವಿದ್ಯಾಲಯವು ಸುಂದರವಾಗಲು ನೆರವಾಗುವವೆಂದು ನಂಬಿದ್ದೇವೆ.

ಮದ್ರಾಸ ಶಾಸನ ಸಭೆಯ ಮುನ್ನಡೆ

ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ಮುಂಬರುವ ಘಟನಾಸಮಿತಿಯ ಅಧಿವೇಶನದಲ್ಲಿ ಕೈಕೊಳ್ಳಬೇಕೆಂದು ಸೂಚಿಸುವ ಗೊತ್ತುವಳಿಯನ್ನು ಮುಂಬಯಿ ಶಾಸನ ಸಭೆಯಲ್ಲಿ ಸ್ವೀಕೃತ ಮಾಡಿಸಬೇಕಾದರೆ ಕುರಿಕೋಣ ಬಿದ್ದತೆಂಬುದು ಅದರಲ್ಲಿ ದುಡಿದವರಿಗೆ ಗೊತ್ತು. ಆದರೆ ಮದ್ರಾಸ ಶಾಸನ ಸಭೆಯಲ್ಲಿ ಡಾ. ಸುಬ್ಬರಾಯನರು ಸ್ವತಃ ಇದಕ್ಕೂ ಮಾರುದ್ದ ಮುಂದೆ ಜಿಗಿಯುವ ಗೊತ್ತುವಳಿಯನ್ನು ಮಂಡಿಸಿರುವರು. ಹೊಸ ಘಟನೆಯಲ್ಲಿ ಕರ್ನಾಟಕ, ಆಂಧ್ರ, ಕೇರಳ, ತಮಿಳನಾಡು ಇವು ಪ್ರತ್ಯೇಕ ಪ್ರಾಂತಗಳೆಂದು ಈಗಲೆ ನಿರ್ದೇಶಿಸಿ, ಗಡಿನಿರ್ಣಯದ ಬಗ್ಗೆ ನೇಮಿಸತಕ್ಕ ಸೀಮಾ ಸಮಿತಿ ಮುಂತಾದವುಗಳ ವ್ಯವಸ್ಥೆಯನ್ನು ಯೋಗ್ಯ ಕಾಲಕ್ಕೆ ಆದಷ್ಟು ಬೇಗನೆ ಮಾಡಬೇಕೆಂದು ಅವರ ಗೊತ್ತುವಳಿ ಹೇಳುವದು. ಇನ್ನು ಈ ಪ್ರಶ್ನೆಯನ್ನು ಕುರಿತು ಮೀನಮೇಷ ಮಾಡುತ್ತ ಕೂಡುವದರಲ್ಲಿ ತಾತ್ಪರ್ಯವಿಲ್ಲ. ಹಿಂದೀಯರ ಕೈಗೆ ಸತ್ತಾಂತರವಾಗಲು ಈ ಪ್ರಶ್ನೆ ಕೈಕೊಂಡ ಮೂಲಕ ಅಡ್ಡಿಯಾಗಬಾರದು ಎಂಬ ಮಾತೂ ಈಗ ಉಳಿದಿಲ್ಲ. ಆಳುವವರು ಅಡ್ಡಿ ಮಾಡಬಹುದೆಂಬುದೊಂದು ಸಂಶಯ. ಆದರೆ ಅವರು ಇನ್ನೂ ಅನೇಕ ಮಾತುಗಳಿಗೆ ಅಡ್ಡಿ ಮಾಡಬಲ್ಲರು. ಅದರ ಮುಲಾಜಿಗಂಜಿ ಪ್ರಾಂತರಚನೆಯು ಹಿಂದೆ ಬೀಳಬಾರದು. ಕನಿಷ್ಠ ಪಕ್ಷ

ಪಡೆಯಬೇಕಾದರೆ ಹಾಲು ಒಂದು ಪಕ್ಷ ಸರ ಮುಂಚಿತ ಇರಬಾರದು. ಆದುದರಿಂದ ಈ ಪ್ರಶ್ನೆ ದ್ಯಮಿಕ ಗತಿಯಿಂದ ಬಿಡಿಸಲು ಅವಶ್ಯವಿದ್ದ ಕ್ರಮಗಳನ್ನು ಘಟನಾಸಮಿತಿಯವರು ಕೈಕೊಳ್ಳುವದು ಅವಶ್ಯವೆಂದು ಇನ್ನೊಮ್ಮೆ ಇಲ್ಲಿ ಹೇಳದೆ ಇರಲಾರೆವು.

ಒಪ್ಪಾಯದ ಶಿಕ್ಷಣ

ಒಪ್ಪಾಯದ ಪ್ರಾಥಮಿಕ ಶಿಕ್ಷಣವನ್ನು ಜೂನ ತಿಂಗಳಿನಿಂದ ಒಂದು ಸಾವಿರ ಜನವಸತಿಯುಳ್ಳ ಹಳ್ಳಿಗಳಲ್ಲೆಲ್ಲ ಬಳಕೆಯಲ್ಲಿ ತರಬೇಕೆಂದೂ ಅದಕ್ಕೆ ತಗಲುವ ವೆಚ್ಚದಲ್ಲಿ ಅರ್ಧದಷ್ಟು ಭಾರವನ್ನು ವಹಿಸುವದು ಸರಕಾರವು ಹೊಣೆವಾಗಿ ತಿಳಿಸಿರುವ ಸುದ್ದಿಯು ಪತ್ರಿಕೆಗಳಲ್ಲಿ ಬಂದಿದೆ. ಒಪ್ಪಾಯದ ಪ್ರಾಥಮಿಕ ಶಿಕ್ಷಣವನ್ನು ಸರಕಾರದವರು ಇಷ್ಟು ತೀವ್ರ ಬಳಕೆಯಲ್ಲಿ ತರಲು ನಿರ್ಧರಿಸಿದ್ದುದು ಸಂತೋಷದ ಸಂಗತಿ. ಅದಕ್ಕಾಗಿ ಸರಕಾರದವರನ್ನು ನಾವು ಅಭಿನಂದಿಸುತ್ತೇವೆ. ಆದರೆ ಒಪ್ಪಾಯದ ಪ್ರಾಥಮಿಕ ಶಿಕ್ಷಣವು ನಿಜವಾಗಿ ಯಶಸ್ವಿಯಾಗಬೇಕಾದರೆ ಸರಕಾರದವರು ಸ್ಕೂಲ ಬೋರ್ಡುಗಳ ಕೈಯಿಂದ ಶಿಕ್ಷಣದ ಸೂತ್ರಗಳನ್ನು ಸಂಪೂರ್ಣವಾಗಿ ತಮ್ಮ ಕಡೆಗೆ ತೆಗೆದುಕೊಳ್ಳುವದಗತ್ಯ. ಈ ಮಾತಿನ ಬಗೆಗೆ ಶಿಕ್ಷಣ ತಜ್ಞರೂ ಪತ್ರಿಕೆಗಳೂ ಅನುಕೂಲ ಅಭಿಪ್ರಾಯವನ್ನು ಸೂಚಿಸಿ ಶಿಕ್ಷಣ ಮಂತ್ರಿಗಳಿಗೆ ಸಲಹೆಯನ್ನಿತ್ತಿದ್ದರೂ ಸರಕಾರವು ತನ್ನ ಧೋರಣವನ್ನು ನಿಶ್ಚಿತವಾಗಿ ನಿರ್ಧರಿಸದಿದ್ದುದು ವಿಷಾದಕರವೆಂದು ಹೇಳದಿರೆವು. ಮೊನ್ನಿನ ಅಧಿವೇಶನದಲ್ಲಿಯೇ ಒಂದು ಯೋಜನೆಯು ಬಂದು ಸ್ಕೂಲಬೋರ್ಡುಗಳ ಅಧಿಕಾರವನ್ನು ಕಡಿಮೆ ಮಾಡಲಾಗುವದೆಂದು ಸುದ್ದಿ ಹಬ್ಬಿತ್ತು. ಆದರೆ ಮಧ್ಯಂತರದಲ್ಲಿ ವಿನಾಯಕೋ ಏನೋ ಈ ವಿಷಯವಿನ್ನೂ ನನೆಗುದಿಗೆ ಬಿದ್ದಿದೆ. ಸರಕಾರದವರು ಬೇಗ ಈ ವಿಷಯವನ್ನು ಪರಾಮರ್ಶಿಸಿ ತೀರ್ಮಾನಿಸುವದು ಶಿಕ್ಷಣದ ಏಳಿಗೆಯ ದೃಷ್ಟಿಯಿಂದ ಅವಶ್ಯವಾಗಿದೆ.

ಇನ್ನು ಎರಡನೆಯದಾಗಿ ಒಪ್ಪಾಯದ ಶಿಕ್ಷಣ ಪ್ರಯೋಗವು ಸಫಲವಾಗಲಿಕ್ಕೆ ತರಬೇತಿಯನ್ನು ಹೊಂದಿದ ಶಿಕ್ಷಕರ ಸಂಖ್ಯೆ ಬೆಳೆವುದಗತ್ಯ. ತರಬೇತಿಹೊಂದಿದ ಶಿಕ್ಷಕರ ಕೊರತೆ ಈಗ ಬಹಳವಾಗಿದೆ. ಈ ಮಾತನ್ನರಿತೇ ಸರಕಾರದವರು ಪ್ರಾ. ಶಿ. ಟ್ರೇನಿಂಗ ಕಾಲೇಜುಗಳನ್ನು ತೆರೆಯಲು ಬೇರೆ ಬೇರೆ ವಿದ್ಯಾಸಂಸ್ಥೆಗಳಿಗೆ ಅನುಮತಿಯನ್ನಿತ್ತಿರುವರೆಂದು ನಮಗೆ ತೋರುತ್ತದೆ. ಇದು ಸ್ವಾಗತಾರ್ಹವಾದ ಸುಚಿಹ್ನವೇ ಸರಿ. ಟ್ರೇನಿಂಗ ಕಾಲೇಜುಗಳ ಸಂಖ್ಯೆ ಒಮ್ಮೆಲೆ ಬೆಳೆಯಲು ಸರಕಾರದವರು ಆ ಕಾಲೇಜುಗಳಲ್ಲಿ ಸೇರುವ ಶಿಕ್ಷಕ ವಿದ್ಯಾರ್ಥಿಗಳಿಗೆ ಮಾಸಿಕ ವೇತನವನ್ನು ಕೊಡುವರು ಎಂಬ ಭಾವಕೆ ಸಂಸ್ಥೆಗಳ ಚಾಲಕರಲ್ಲಿ ನೆಲೆಗೊಂಡಿರುವದೇ ಮುಖ್ಯ ಕಾರಣವಾಗಿರುವದೆಂಬದನ್ನು ಸರಕಾರದ ಗಮನಕ್ಕೆ ನಾವು ತರಬಯಸುತ್ತೇವೆ. ಆದರೆ ಇತ್ತೀಚೆಗೆ ಶಿಕ್ಷಣ ಅಧಿಕಾರಿಗಳು ಈ ಬಗೆಯ ವೇತನದ ಆಶ್ವಾಸನವನ್ನು ಸರಕಾರವು ಕೊಟ್ಟಿರುವದಿಲ್ಲೆಂದು ಹೇಳಹತ್ತಿರುವದರಿಂದ ಟ್ರೇನಿಂಗ ಕಾಲೇಜ ಸ್ಥಾಪಕರ ಮನಸ್ಸು ವಿಷಣ್ಣವಾಗಿದೆ. ವೇತನವನ್ನು ಕೊಡುವ ಇಚ್ಛೆ ಸರಕಾರಕ್ಕಿರದಿದ್ದರೆ ಆ ಬಗೆಯ ಭಾವನೆಯು ಜನರಲ್ಲಿ ಉಂಟಾಗಲು ಯಾರು ಕಾರಣರಾದರು ಮತ್ತು ಯಾವ ಮಾತುಗಳಿಂದ ಆ ಅಭಿಪ್ರಾಯಕ್ಕೆ ಪುಷ್ಟಿ ದೊರೆಯಿತು ? ಎಂಬುದನ್ನು ಪರ್ಯಾಲೋಚಿಸುವದಗತ್ಯ. ಹಾಗೆ ತಪ್ಪು ತಿಳುವಳಿಕೆಯಾಗುವಂತೆ ಮಾತುಗಳು ಸರಕಾರದಾಯಿಂದ ಹೊರಬಿದ್ದಿದ್ದರೆ ಅವನ್ನು ಸಕಾಲಕ್ಕೆ ಯಾಕೆ ತಿದ್ದಿಕೊಳ್ಳಲಿಲ್ಲ? ಈ ಬಗೆಯಾಗಿ ಜನತೆಯಲ್ಲಿ ಭಾವನೆಯುಂಟಾಗುವಂತೆ ಮಾಡಿದ ನಂತರ ಹಾಗೆ ಅಭಿಪ್ರಾಯವಿದ್ದಿಲ್ಲೆಂದು ಹೇಳುವದು ಸರಿಯಾಗಲಾರದೆಂದು ನಮ್ಮ ಅಭಿಪ್ರಾಯ. ಮತ್ತು ಒಂದು ಸಮಯ ಹಾಗೆ ಸರಕಾರದ ಅಭಿಪ್ರಾಯ ಇದ್ದಿಲ್ಲೆಂಬ ಮಾತು ಸರಕಾರದ ಪತ್ರ ಪ್ರಕಟನೆಗಳಿಂದ ಸಿದ್ಧವಾದರೂ ಅದು ಶಿಕ್ಷಣದ ಅಭಿವೃದ್ಧಿಯ ದೃಷ್ಟಿಯಿಂದ ಮೆಚ್ಚತಕ್ಕ ವಾಣಿಯಲ್ಲ. ಯಾಕಂದರೆ ಶಿಕ್ಷಣದ ನಿಜವಾದ ವಿಕಾಸವಾಗಬೇಕೆಂದು ಸರಕಾರಕ್ಕನಿಸುತ್ತಿದ್ದರೆ ವೇತನಗಳ ಆಶ್ವಾಸನವನ್ನು ಕೊಟ್ಟು ಜಾತಿ ಮತಭೇದಗಳನ್ನು ಲೆಕ್ಕಿಸದೆ ಕೇವಲ ಗುಣಾನುಕ್ರಮವಾಗಿ ಯೋಗ್ಯ ಉಮೇದವಾರರನ್ನು ಕಾಲೇಜುಗಳಿಗೆ ಆರಿಸಬೇಕು. ಇಲ್ಲದಿದ್ದರೆ "ಒಣ ಮಾತಿಗೆ ಕರುಬಿಗೆ ಹಾಲಿಲ್ಲ" ಎನ್ನುವ ಆಪಾದನೆಗೆ ಸರಕಾರವು ಗುರಿಯಾಗಬೇಕಾದೀತೆಂದು ಇಲ್ಲಿ ಸರಕಾರವನ್ನು ಎಚ್ಚರಿಸಬಯಸುವೆವು.

ಭಾರತದ ವಿಭಜನೆಗೆ ಕಾಂಗ್ರೆಸ್ಸಿನ ಅಡ್ಡಿಯಿಲ್ಲ

ಆದರೆ ಬಂಗಾಲ-ಪಂಜಾಬ ವಿಭಜನೆ ಆಗಬೇಕು—ಮೇ ತಿಂಗಳಲ್ಲಿ ಬ್ರಿಟಿಶ ನಿರ್ಣಯ ?— "ಉಭಯಸತ್ತೆ" ಯನ್ನು ನಡುಗಾಲದಲ್ಲಿ ಸ್ಥಾಪಿಸಲಾಗುವದು ?— ಹೊಸ ಭಾರತ ಮಂತ್ರಿಗಳ ನೇಮಕ

ವಾಯಿಸರಾಯ ಲಾರ್ಡ ಲುಯಿ ಮೌಂಟಬ್ಯಾಟನ್ನರು ಹಿಂದೀ ಪಕ್ಷಗಳ— ಕಾಂಗ್ರೆಸ್, ಲೀಗ, ಸೀಖ— ಮುಂದಾಳುಗಳೊಡನೆ ಮಾತಾಡಿ ಪರಿಸ್ಥಿತಿಯ ನಾಡಿಯನ್ನರಿತುಕೊಂಡು ಮುಗಿಸಿದ್ದಾರೆ. ಆ ಪರಿಸ್ಥಿತಿ ಸಾಧಾರಣವಾಗಿ ಮೂರು ಪ್ರಬಲ ಪಕ್ಷಗಳಲ್ಲಿರುವ ಮತಭೇದವನ್ನು ಹೋಗಲಾಡಿಸುವದು ಅಸಾಧ್ಯವೆಂಬದನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಂತಿದೆ. ಅದೀಗ ಹೊಸದಿಲ್ಲಿಯಿಂದ ಹೊರಬರುತ್ತಿರುವ ಸುದ್ದಿಗಳ ಸಾರವಾಗಿದೆ. ಜಿನ್ನಾ ಸಾಹೇಬರೂ ಅವರ ಮುಸ್ಲಿಂಲೀಗೂ ಪಾಕಿಸ್ತಾನಕ್ಕೆ ಪಟ್ಟು ಹಿಡಿದು ಅಂಟಿಕೊಂಡಿದ್ದಾರೆಂಬುದು ನಿಚ್ಚಳವಾಗಿದೆ. ಹೀಗಾಗಿ ಕಾಂಗ್ರೆಸ್—ಲೀಗ್ ಐಕ್ಯದ ಆಸೆಯೆಲ್ಲ ಮಣ್ಣಾಗಿದೆ. ಕಾಂಗ್ರೆಸ್ಸು ಬಾರಿ ಬಾರಿಗೂ ಲೀಗಿನೊಡನೆ ಮಾತುಕತೆ ನಡೆಸಲು ಅಪೇಕ್ಷೆ, ಬಿನ್ನಹಗಳನ್ನು ಹೊರೆಡಿಸಿದ್ದರೂ ಪ್ರತಿಯೊಂದು ಬಾರಿಯೂ ಲೀಗು ಅದನ್ನು ತಿರಸ್ಕರಿಸಿ ಬ್ರಿಟಿಶರ ಮುಖವನ್ನೇ ನೋಡುತ್ತ ಬಂದಿದೆ. ಈ ಪ್ರಕಾರ ಯಾವುದೇ ವಿಧವಾಗಿ ಪರಸ್ಪರ ಸಮ್ಮತವಾದ ಯೋಜನೆಯನ್ನು ರೂಪಿಸುವ ಅವಕಾಶವೇ ಒದಗಿಲ್ಲ. ಪರಿಣಾಮವಾಗಿ ಮುಂದಿನ ಹೆಜ್ಜೆಯಿಡುವ ಪಾಳಿ ವಾಯಿಸರಾಯರಿಗೆ ಬಂದಿದೆ.

ವಿಭಜನೆಗೆ ವಿರೋಧವಿಲ್ಲ

ದೇಶದ ವಿವಿಧ ರಾಜಕೀಯ ಪಕ್ಷಗಳು ತಮ್ಮ ಮತಭೇದಗಳನ್ನು ಬಗೆಹರಿಸಲಾರದೆ ಮೂರನೆಯವನ ತೀರ್ಮಾನಕ್ಕೆ ತಮ್ಮ ಭವಿತವ್ಯವನ್ನು ಬಿಟ್ಟುಕೊಡಬೇಕಾಗಿ ಬಂದ ಪರಿ ಕಾಂಗ್ರೆಸ್ಸಿಗೆ ಸರ್ವಥಾ ಸಂತೋಷಕರವಾಗಿಲ್ಲ. ಅದಕ್ಕೋಸ್ಕರವೇ ಅದು ಪ್ರತಿಷ್ಠೆಯನ್ನು ಬದಿಗಿರಿಸಿ ಲೀಗಿನ ಸಹಕಾರವನ್ನು ಬೇಡಿತು. ಆದರೆ ಸ್ನೇಹ ಹಸ್ತವನ್ನು ಲೀಗು ತಳ್ಳಿದ ನಂತರ ಅದಕ್ಕಾದರೂ ಮೂರನೆಯವನ ತೀರ್ಮಾನವನ್ನು ಎದುರುನೋಡದೆ ವಿಧಿಯೇ ಇಲ್ಲದಂತಾಗಿದೆ. ಜಿನ್ನಾ ಸಾಹೇಬರು ಯಾವಾಗಲೂ ತಾವು ಸಿಗಿದೀಳದೆ ಉಳಿದವರನ್ನು ಸಿಗಿಸುವ ಚಾಣಾಕ್ಷರು. ತಮ್ಮನ್ನು ಮೊದಲು ಎತ್ತಿಕಟ್ಟಿದ ಬ್ರಿಟಿಶರ ಮೇಲೆಯೂ ಅದನ್ನು ಪಯೋಗಿಸಿ ಜಿನ್ನಾ ಸಾಹೇಬರು ಗೆದ್ದರು. ಕಾಂಗ್ರೆಸ್ ಮತ್ತು ಗಾಂಧೀಜಿಯನ್ನೂ ಅವರು ಸಾಕಷ್ಟು ಬಾರಿ ಬಲೆಯಲ್ಲಿ ಕೆಡಹಿದ್ದಾರೆ. ಮೊದಲು "ಪಾಕಿಸ್ತಾನದ ತಳಹದಿಯ ಮೇಲೆ ಮಾತ್ರ" ಕಾಂಗ್ರೆಸ್ಸಿನೊಡನೆ ಮಾತಾಡುವೆವೆಂದಿದ್ದ ಅವರು ಈಗ "ಸರಿಯಾದ ಪಾಕಿಸ್ತಾನ" ತಳಹದಿಯನ್ನು ಅಪೇಕ್ಷಿಸುತ್ತಾರೆ. ಅದ್ದರಿಂದ ಅವರೊಡನೆ ಮಾತುಕತೆ ನಡಸಿ ಯಾವುದಾದರೂ ರೀತಿಯಲ್ಲಿ ಹಿಂದುಸ್ತಾನದ ಅಖಂಡತೆಯನ್ನು ಕಾಯ್ದುಕೊಳ್ಳಬಹುದೆಂಬ ಆಸೆಯನ್ನು ಕಾಂಗ್ರೆಸ್ಸು ಬಿಟ್ಟುಕೊಟ್ಟದೆಯೆಂದು ಕಾಣುತ್ತದೆ. ಕರಾರಿಲ್ಲದೆ ಅಸಾಮು ಪ್ರಾಂತ "ಕ" ಗುಂಪಿನಲ್ಲಿ ಸೇರುವದೆಂದು ಕಾಂಗ್ರೆಸ್ಸು ಭರವಸೆಕೊಟ್ಟರೆ ಮಾತ್ರ ಜಿನ್ನಾರು ತಮ್ಮ ಮನಸನ್ನು ಬದಲಿಸಲು ಒಪ್ಪಬಹುದೋ ಏನೊ. ಆದರೆ ಈ ಬಗೆಯಾಗಿ ಅವರನ್ನು ಒಪ್ಪಿಸುವ ಹಂಬಲವನ್ನು ಕಾಂಗ್ರೆಸ್ಸು ಈಗ ಬಿಟ್ಟುಕೊಟ್ಟದೆ. ದೇಶದ ವಿಭಜನೆ ಅನಿವಾರ್ಯವಾಗಿದ್ದರೆ ಹಾಗೆಯೆ ಆಗಲೆಂದು ಕಾಂಗ್ರೆಸ ನಾಯಕರು ಕೈಬಿಟ್ಟಿದ್ದಾರೆ. ದೇಶದಲ್ಲಿ ಎಲ್ಲರಿಗೂ ಒಂದಲ್ಲ ಒಂದು ಬಗೆಯ ವಿಭಜನೆ ಆಗಿಯೆ ತೀರುವದೆಂದು ಅನಿಸತೊಡಗಿದೆ. ಹಿಂದೂ ಮಹಾಸಭೆಯವರು ಕೂಡ ವಿಭಜನೆಯ ಪ್ರಶ್ನೆಗೆ ತೀಕ್ಷ್ಣ ವಿರೋಧವನ್ನು ಬಿಟ್ಟುಕೊಟ್ಟು ಬಂಗಾಲ ಪಂಜಾಬಗಳ ಹಿಂದೂ ಅಂಶಗಳನ್ನು ಪಾಕಿಸ್ತಾನದಿಂದ ಕಸಿದುಕೊಳ್ಳುವದರಲ್ಲಿ ತಮ್ಮ ಶಕ್ತಿಯನ್ನು ಕೇಂದ್ರೀಕರಿಸತೊಡಗಿದ್ದಾರೆ. ಡಾ. ಶ್ಯಾಮಪ್ರಸಾದ ಮುಕರ್ಜಿಯವರೂ ಪ್ರಸಿದ್ಧ ಬಂಗಾಲಿ ಹಿಂದೂ ಮಹಾಸಭೆಯ ಮುಂದಾಳುಗಳಾದ ಶ್ರೀ ಎನ್ ಸಿ ಚಟರ್ಜಿಯವರೂ ತಮ್ಮ ಎಲ್ಲ ವೇಳೆಯನ್ನು ಬಂಗಾಲದ ವಿಭಜನೆಯ ಚಳವಳಿಗಾಗಿ ಮೀಸಲಿಟ್ಟದ್ದಾರೆ. ಹಿಂದೂ ಅಭಿಪ್ರಾಯವೂ ಬಂಗಾಲ ವಿಭಜನೆಯಗೆ ಅಧಿಕಾಧಿಕ ಬೆಂಬಲ ಕೊಡುತಿದೆ. "ಅಮೃತ ಬಝಾರ ಪತ್ರಿಕೆ" ಯವರು ನಡೆಸಿದ ಮತ ಸಂಗ್ರಹದಲ್ಲಿ ನೂರಕ್ಕೆ ೯೮ ಜನರು ಬಂಗಾಲದಲ್ಲಿ ಪ್ರತ್ಯೇಕ ಹಿಂದೂ ಭೂಮಿ ಬೇಕೆಂದು ಮತವಿತ್ತಿದ್ದಾರೆ.

ಹರಕುಮುರಕು ಪಾಕಿಸ್ತಾನ

ಪಂಡಿತ ಜವಾಹರಲಾಲ ನೆಹರೂ ಅವರು ಗ್ವಾಲಿಯರದಲ್ಲಿ ಸೇರಿದ ಅ. ಭಾ. ಪ್ರಜಾಪರಿಷತ್ತಿನಲ್ಲಿ ಕಳೆದವಾರ ಮಾಡಿದ ಭಾಷಣದಿಂದ ಕಾಂಗ್ರೆಸ್ಸು ಪಾಕಿಸ್ತಾನವನ್ನು ವಿರೋಧಿಸುವದಿಲ್ಲವೆಂಬ ಮಾತು ಇನ್ನಷ್ಟು ಸ್ಪಷ್ಟವಾಯಿತು. ಇಷ್ಟವಿಲ್ಲದವರನ್ನು ಹಿಂದೀ ಒಕ್ಕೂಟದಲ್ಲಿ ಇರಿಸಿಕೊಳ್ಳುವದು ಹೇಗೆ ತಮಗೆ ಒಪ್ಪಿತವಿಲ್ಲವೊ ಹಾಗೆಯೆ ಇಷ್ಟವಿಲ್ಲದವರನ್ನು ಪಾಕಿಸ್ತಾನದಲ್ಲಿ ಇರುವಂತೆ ಒತ್ತಾಯ ಗೊಳಿಸುವದನ್ನೂ ಕಾಂಗ್ರೆಸ್ಸು ಎದುರಿಸುವದೆಂದು ಸಾರಿದರು. ಅವರ ಮಾತಿನಿಂದ ಬಂಗಾಲ ಪಂಜಾಬಗಳ ವಿಭಜನೆಗಾಗಿ ಕಾಂಗ್ರೆಸ್ಸು ಒತ್ತಾಯಗೊಳಿಸುವದೆಂದು ಧ್ವನಿತವಾಗುತ್ತದೆ. ಮುಸ್ಲಿಂಲೀಗಾದರೂ ಜಿನ್ನಾಸಾಹೇಬರು ಹಿಂದೆ ವಹಿಸಿದ "ಹರಕುಮುರಕು ಪಾಕಿಸ್ತಾನ"ದ ಕಲ್ಪನೆಗೆ ಒಪ್ಪಿಕೊಳ್ಳುವ ಲಕ್ಷಣಗಳು ತೋರುತ್ತವೆ. ಪಂಜಾಬ ವಿಭಜನೆಗಂತೂ ಲೀಗು ವಿರೋಧಮಾಡುವಂತೆ ಕಾಣುವದೇ ಇಲ್ಲ ಈ ವರೆಗೆ ಬಂಗಾಲ ವಿಭಜನೆಗೆ ಅವರ ವಿರೋಧ ಪ್ರಬಲವಾಗಿದೆ. ಇದಕ್ಕೆ ಪಂಜಾಬಿ ಹಿಂದೂ—ಸೀಖರ ನಿರ್ಭಂತತೆಯಿಂದ ಪಾಕಿಸ್ತಾನದಲ್ಲಿ ಶಾಂತಿಯನ್ನುಳಿಸಿಕೊಳ್ಳುವ ಅಸಾಧ್ಯತೆ ಅವರಿಗೆ ಮನವರಿಕೆಯಾದುದೂ ಬಂಗಾಲಿ ಹಿಂದುಗಳು ಅಪಾತತಃ ಅಷ್ಟು ಪ್ರಬಲರಲ್ಲದಿರುವದೂ ಪಶ್ಚಿಮ ಬಂಗಾಲದ ಔದ್ಯೋಗಿಕ ಮಹತ್ವವೂ ಕಾರಣವಾಗಿರಬಹುದು. ಬ್ರಿಟಿಶರು ಬೇಗನೆ ಕೊಡಲಿರುವ ತೀರ್ಮಾನ ಬಂಗಾಲ ಪಂಜಾಬಗಳನ್ನು ವಿಭಜಿಸಿ ಕಲಕತ್ತೆಯ ಬಂದರವನ್ನು ಪಶ್ಚಿಮ ಬಂಗಾಲಕ್ಕೆ ಕೊಟ್ಟರೆ ಆಗ ಮಾತ್ರ ಜಿನ್ನಾಸಾಹೇಬರು ತಮ್ಮ ವಿಚಾರವನ್ನು ಬದಲಿಸಿ ಮೇ ೧೬ ರ ಘೋಷಣೆಯ ಮೇರೆಗೆ ಘಟನಾಸಮಿತಿಯಲ್ಲಿ ಸೇರಿ "ದುರ್ಬಲ ಕೇಂದ್ರ"ವುಳ್ಳ ಅಖಂಡ ಹಿಂದುಸ್ತಾನಕ್ಕೊಪ್ಪುವರೋ ಏನೊ. ಸದ್ಯಕ್ಕಂತೂ ಘಟನಾಸಮಿತಿಗೆ ಲೀಗು ತೀವ್ರ ದ್ವೇಷವನ್ನು ತೋರಿಸುತಿದೆ. ಸಂಸ್ಥಾನಿಕರಿಗೆ ಜವಾಹರಲಾಲರು ಕೊಟ್ಟ ಎಚ್ಚರಿಕೆಗೆ ಉತ್ತರಕೊಡುತ್ತ ಲೀಗ ಕಾರ್ಯದರ್ಶಿ ಲಿಯಾಕತ ಅಲ್ಲಿಖಾನರು ಘಟನಾಸಮಿತಿ "ಎಂದೆಂದೂ ಉತ್ಥಾನಗೊಳ್ಳಲಾರದಂತೆ ಪೂರ್ಣ ಸತ್ತುಹೋಗಿದೆ" ಎಂದು ಕೇಡುನುಡಿದಿದ್ದಾರೆ.

ಘಟನಾ ಸಮಿತಿಯ ಅಧಿವೇಶನ

ಈ "ಸತ್ತ ಘಟನಾ ಸಮಿತಿ"ಯನ್ನು ಸಜೀವ ಮತ್ತು ಕಾರ್ಯತತ್ಪರವಾಗಿ ಮಾಡಲು ಮಾತ್ರ ಕಾಂಗ್ರೆಸ್ಸು ಬದ್ಧಕಂಕಣವಾಗಿದೆ. ಆದಕಾಗಿ ಈ ವರೆಗೆ ಮುಸ್ಲಿಂ ಲೀಗು ಒಳಬರುವ ಆಸೆಯಿಂದ ಬೇಕೋ ಬೇಡವೋ ಎಂದು ಮಂದಗತಿಯಿಂದ ಸಾಗಿದ್ದ ಘಟನಾ ಸಮಿತಿ ನಾಳೆ ೨೮ ಕ್ಕೆ ಸೇರಿದಾಗ ದ್ರುತಗತಿಯಿಂದ ಮುನ್ನಡೆಯಲಿದೆ. ಅದು ಮೊದಲ ಕೆಲ ದಿನಗಳಲ್ಲಿ ವಿವಿಧ ಸಮಿತಿಗಳ ವರದಿಯನ್ನು ಪರಿಶೀಲಿಸುವದು ಮತ್ತು ಮೇ ೧೬ ರ ಘೋಷಣೆಯನ್ನು ಪ್ರಾಮಾಣಿಕವಾಗಿ ಅನುಸರಿಸುತ್ತ ಗುಂಪುಗಳಲ್ಲಿ ಒಡೆಯುವದು. ಈ ಒಡೆಯುವದೂ ಮುಸ್ಲಿಂ ಲೀಗಿನ ಸಹಕಾರದ ಆಸೆಗೆ ತಿಲಾಂಜಲಿ ಕೊಡುವದೂ ಏಕಕಾಲಕ್ಕೆ ಆಗುವದೆಂದು ರಾಜಕೀಯ ವರ್ಗಗಳು ಅಭಿಪ್ರಾಯಪಡುತ್ತವೆ. ಕಾಂಗ್ರೆಸ್ಸು ಘಟನಾ ಸಮಿತಿಯ ವಿಷಯದಲ್ಲಿ ತೀರ ಆತುರದಲ್ಲಿದೆ. ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಬ್ರಿಟಿಶರು ಹೊರಬೀಳುವ ದಿನ ತೀರ ಹತ್ತಿರವಾಗುತಿದೆ. ಅದಕ್ಕೆ ಮೊದಲೇ ಘಟನೆಯನ್ನು ಸಿದ್ಧಗೊಳಿಸಿ ಆದಕ್ಕೊಪ್ಪುವ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳ ಆಡಳಿತೆಯನ್ನು ಅಡೆತಡೆಯಿಲ್ಲದೆ ವಹಿಸಿಕೊಳ್ಳಲು ಸನ್ನದ್ಧರಾಗುವದೆ. ಮುಸ್ಲಿಂ ಲೀಗೇತರರಿಗೆ ಪರಮಾವಧಿ ಮಹತ್ವದ ಸಂಗತಿಯೆನಿಸುತ್ತಿದೆ. ಬ್ರಿಟಿಶರು ಹೊರಟುಹೋಗುವ ಮುನ್ನ ಆಡಳಿತೆ ವಹಿಸಿಕೊಳ್ಳುವ ಯಂತ್ರವನ್ನು ಸಿದ್ಧಗೊಳಿಸದಿದ್ದರೆ ಮುಂದೆ ಅನೇಕ ಅನಪೇಕ್ಷಿತ ದುರಂತಗಳೊದಗಬಹುದು. ಎರಡನೆಯದಾಗಿ ಅಲ್ಪಸಂಖ್ಯಾಕರ ಮತ್ತು ನರೇಂದ್ರರ ಭೀತಿಯನ್ನು ಹೋಗಲಾಡಿಸಿ ಭಾವೀ ಭಾರತದ ಶಾಂತಿಮಯ ಉತ್ಕರ್ಷದಲ್ಲಿ ಅವರ ಸಹಕಾರ ಪಡೆಯಲು ಕಾಂಗ್ರೆಸ್ಸು ಹೆಣಗುತಿದೆ. ಈ ಕಾರಣಗಳಿಂದ ಈ ವರ್ಷ ಮುಗಿಯುವ ಮೊದಲೇ ಘಟನೆಯನ್ನು ಮೇ ೧೬ ಘೋಷಣೆಯನ್ವಯ ರಚಿಸಿ ಸನ್ನದ್ಧವಾಗಿರಲು ಕಾಂಗ್ರೆಸ್ಸು ನಿರ್ಧರಿಸಿದೆ. ಘಟನಾಸಮಿತಿಯ ಕಾರ್ಯದ ಭಾರವನ್ನು ಆಹಾರ ಮಂತ್ರಿತ್ವದ ಹೊಣೆಯನ್ನೂ ಸೇರಿಯೆ ನಿರ್ವಹಿಸಲು ಸಾಧ್ಯವಿಲ್ಲದುದರಿಂದ ಡಾ. ರಾಜೇಂದ್ರ ಪ್ರಸಾದರು ನಡುಗಾಲ ಸರಕಾರದ ಮಂತ್ರಿಪದಕ್ಕೆ ರಾಜೀನಾಮೆ ಕೊಡುವರೆಂದೂ ಅವರ ಸ್ಥಾನದಲ್ಲಿ ಶ್ರೀ ಕೆ. ಎಂ. ಮುನಶಿಯವರು ನೇಮಿಸಲ್ಪಡುವರೆಂದೂ ಸುದ್ದಿ ಹಬ್ಬಿದೆ. ಘಟನೆ ರಚಿತವಾದ ನಂತರ—ಗುಂಪುಗಳ ಘಟನೆ ಕೂಡ ಇದ್ದ ಸದಸ್ಯರ ಸಹಕಾರದಿಂದ ಸಿದ್ಧವಾಗುವದು—ಯಾವ ಯಾವ ಪ್ರಾಂತಗಳು ಮತ್ತು ಸಂಸ್ಥಾನಗಳು ಇದಕ್ಕೆ ಒಪ್ಪುವವೋ ಅವುಗಳನ್ನೊಳಗೊಂಡ ಒಕ್ಕೂಟ ಸ್ಥಾಪಿಸಲ್ಪಡುವದು ಉಳಿದವು ಮನಸಿದ್ದರೆ, ಮನಸಾದಾಗ ಸೇರಬಹುದು. ಲೀಗು ಕೊನೆಗೂ ಮನಸು ಮಾಡದಿದ್ದರೆ ಪೂರ್ವ ಪಂಜಾಬ ಮತ್ತು ಪಶ್ಚಿಮ ಯುಕ್ತ ಪ್ರಾಂತಗಳನ್ನೊಳಗೊಂಡ ಹೊಸ ಪ್ರಾಂತವನ್ನು ರಚಿಸಬಹುದೆಂದು ನಂಬಲಾಗಿದೆ. ಆಗ ಗುಂಪುಗಳ ಪ್ರಶ್ನೆಯೇ ಉದಿಸುವದಿಲ್ಲ

ಸಂಸ್ಥಾನಗಳು ಮತ್ತು ಘಟನಾ ಸಮಿತಿ

ಕಾಂಗ್ರೆಸ್ ಮುಸ್ಲಿಂ ಲೀಗುಗಳು ಇನ್ನೂ ಒಪ್ಪಂದಕ್ಕೆ ಬಾರದಿದ್ದುದನ್ನು ನೋಡಿ ಸಂಸ್ಥಾನಿಕರಲ್ಲನೇಕರು ಈ ಪರಿಸ್ಥಿತಿಯ ಪ್ರಯೋಜನವನ್ನು ಹೇಸದೆ ತೆಗೆದುಕೊಳ್ಳುತಿರುವದು ಹಿಂದೀ ಪ್ರಗತಿಗೆ ಕಾಲ್ತೊಡಕಾಗಿದೆ. ಗ್ವಾಲಿಯರ, ಬಿಕಾನೇರ, ಜಯಪುರ, ಜೋಧಪುರ, ಪತಿಯಾಲಾ, ಬರೋಡಾ, ಕೊಚ್ಚಿ ಸಂಸ್ಥಾನಗಳು ಈಗಾಗಲೆ ತಮ್ಮ ಪ್ರತಿನಿಧಿಗಳನ್ನಾರಿಸಿದ್ದು ಆ ಸಂಸ್ಥಾನಗಳ ೨೪ ಪ್ರತಿನಿಧಿಗಳು ಘಟನಾ ಸಮಿತಿಯ ಈ ಅಧಿವೇಶನದಲ್ಲಿ ಭಾಗವಹಿಸುವರು. ಪೂರ್ವ ಮತ್ತು ಓಡಿಸಾ ಸಂಸ್ಥಾನಗಳೂ ಇದೇ ದಾರಿ ಹಿಡಿದು ಜೂನ ೨೫ ಕ್ಕೆ ತಮ್ಮ ನಾಲ್ಕು ಪ್ರತಿನಿಧಿಗಳನ್ನಾರಿಸಿ ಕಳಿಸುವವು. ರಾಮಪುರದ ನವಾಬರೂ ಘಟನಾ ಸಮಿತಿಯಲ್ಲಿ ಭಾಗವಹಿಸಬೇಕೆಂಬ ವಿಚಾರದಲ್ಲಿರುವರು. ಮುಸ್ಲಿಂ ಲೀಗ್ ಸುತ್ತು ಕೋಟೆಯ ನಡುವೆ ಇರುವ ಕಾಶ್ಮೀರ ಸಂಸ್ಥಾನವೂ ಬೆಳಕು ಕಂಡು ಬೇಗನೆ ತನ್ನ ಪ್ರತಿನಿಧಿಗಳನ್ನು ಕಳಿಸುವದೆಂದು ತಿಳಿಯುತ್ತದೆ. ಅಂತೂ ಸಂಸ್ಥಾನಗಳಲ್ಲಿ (ವಿಸ್ತಾರ ಪ್ರಮಾಣದಿಂದ) ತೃತೀಯಾಂಶದಷ್ಟು ಘಟನಾಸಮಿತಿಯಲ್ಲಿ ಸಹಕರಿಸುವವೆಂದಾಯಿತು. ಆದರೆ ಭೋಪಾಲ ನವಾಬರ ನೇತೃತ್ವದಲ್ಲಿ ಅನೇಕ ಪ್ರತಿಗಾಮಿ ಹಿಂದೂ ನರೇಂದ್ರರು ಘಟನಾ ಸಮಿತಿಯನ್ನು ಕೊಲ್ಲುವ ಒಳಸಂಚಿನಲ್ಲಿ ಮುಸ್ಲಿಂ ಲೀಗಿನೊಡನೆ ಸೇರಿಕೊಂಡಿದ್ದಾರೆ. ಉಳಿದ ಕೆಲವು ಹಿಂದೆಮುಂದೆ ನೋಡುತ್ತಿವೆ. ಇದೆಲ್ಲದಕ್ಕೆ ರಾಜಕೀಯ ಖಾತೆಯ ಗುಪ್ತ ಕುತಂತ್ರ ಕಾರಣವೆಂದು ಪಂಡಿತ ಜವಾಹರಲಾಲರು ಗ್ವಾಲೇರದ ಭಾಷಣದಲ್ಲಿ ಹೇಳಿದರು. ಅದೇ ಭಾಷಣದಲ್ಲಿ ಅವರು ಸಂಸ್ಥಾನಿಕರಿಗೆ ಎಚ್ಚರಿಕೆ ಕೊಡುತ್ತ ಹಿಂದೀ ಪ್ರಗತಿಯಲ್ಲಿ ಸಹಕರಿಸದಿದ್ದರೆ ನರೇಂದ್ರರು ತಮ್ಮ ಶತ್ರುಗಳೆಂದು ಹಿಂದೀಯರು ಭಾವಿಸುವರೆಂದು ಸಾರಿದರು. ಅದು ನರೇಂದ್ರರಿಗೇ ಹಾನಿಕರ. ಒಪ್ಪಂದದ ಸಲುವಾಗಿ ಘಟನಾ ಸಮಿತಿ ನರೇಂದ್ರರಿಗೆ ಕೆಲಮಟ್ಟಿಗೆ ಅಯೋಗ್ಯವಾದ ಸವಲತ್ತುಗಳನ್ನು ಕೊಟ್ಟದೆ. ಆದರೂ ಅವರು ಘಟನಾ ಸಮಿತಿಯಿಂದ ದೂರ ಉಳಿಯುವದು ತರವಲ್ಲವೆಂದು ಅವರು ನಿರ್ದಾಕ್ಷಿಣ್ಯವಾಗಿ ನುಡಿದರು. ನರೇಂದ್ರರನ್ನು ಲೀಗು ತನ್ನ ರೆಕ್ಕೆಯಡಿಯಲ್ಲಿ ತೆಗೆದುಕೊಂಡಿದೆಯೆಂಬ ಮಾತು ಈ ಭಾಷಣವಾಗಿ ನಲವತ್ತೆಂಟು ತಾಸುಗಳಲ್ಲಿ ಪ್ರಕಟವಾಯಿತು. ಲಿಯಾಕತ ಅಲ್ಲಿಖಾನರು "ಪಂಡಿತರ ಒಣ ಬೆದರಿಕೆ" ಯನ್ನು ನರೇಂದ್ರರು ಲೆಕ್ಕಿಸಬಾರದೆಂದೂ ಘಟನಾ ಸಮಿತಿಯಲ್ಲಿ ಸೇರಲು ಬಿಡಲು ನರೇಂದ್ರರಿಗೆ ಪೂರ್ಣ ಸ್ವಾತಂತ್ರ್ಯವಿದೆಯೆಂದೂ ಅಭಯ ಕೊಟ್ಟಿದ್ದಾರೆ. ಸಂಸ್ಥಾನಗಳಲ್ಲಿಯೂ ಹಿಂದೂ ನರೇಂದ್ರರು ಹಾಗು ಮುಸ್ಲಿಂ ನರೇಂದ್ರರು ಇಬ್ಬಣವಾಗುವ ಲಕ್ಷಣವಿದೆ.

ವಾಯಿಸರಾಯರ ಯೋಜನೆ

ಈ ಹಿನ್ನೆಲೆಯಲ್ಲಿ ಬರುವ ವಾರ ವಾಯಿಸರಾಯರು ಕಾಂಗ್ರೆಸ್-ಲೀಗ ಮುಂದಾಳುಗಳೊಡನೆ ಕೊನೆಯ ಚರ್ಚೆ ನಡೆಸಲಿರುವರೆಂದು ತಿಳಿಯುತ್ತದೆ. ಮೇ ಮಧ್ಯದ ಸುಮಾರಿಗೆ ಬ್ರಿಟಿಶ ನಿರ್ಣಯ ಹೊರಬೀಳುವದೆಂದೂ ತಿಳಿಯುತ್ತದೆ. ಆಗ ವೈಸರಾಯರು ಮೇ ೧೬ ರ ಘೋಷಣೆಯ ತಳಹದಿಯ ಮೇಲೆ ಘಟನಾ ಸಮಿತಿಯೊಡನೆ ಸಹಕರಿಸಲು ಲೀಗನ್ನು ಒಡಂಬಡಿಸುವ ಕೊನೆಯ ಪ್ರಯತ್ನ ಮಾಡುವರಂತೆ. ಅದು ಸಾಧ್ಯವಾಗದಿದ್ದರೆ ವಿಭಜನೆಯ ತಳಹದಿಯಲ್ಲಿ ಮಾತುಕತೆ ನಡೆಸಲು ದುಂಡು ಮೇಜಿನ ಪರಿಷತ್ತನ್ನು ಸೇರಿಸಲಾಗುವದು. ಅಂದಿನಿಂದ ಅಧಿಕಾರತ್ಯಾಗದ ದಿನದ ವರೆಗೆ ಆಡಳಿತೆಯನ್ನು ನಡೆಸಿಕೊಂಡು ಹೋಗಲು "ಉಭಯ ಸತ್ತೆ"ಯ ಪದ್ಧತಿಯಲ್ಲಿ ಕೇಂದ್ರ ಮಂತ್ರಿಮಂಡಲಕ್ಕೆ ಅಧಿಕಾರ ಕೊಡಲಾಗುವದು. ಅರ್ಥಾತ್ ನಡುಗಾಲ ಸರಕಾರದಲ್ಲಿ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಗುಂಪುಗಳನ್ನು ಮಾಡಿ ಮುಸ್ಲಿಂ ಬಹುಮತದ ಪ್ರಾಂತಗಳ ಬಗ್ಗೆ ಮುಸ್ಲಿಂಲೀಗ ಮಂತ್ರಿಗಳನ್ನೂ ಇತರ ಪ್ರಾಂತಗಳ ಬಗ್ಗೆ ಕಾಂಗ್ರೆಸ ಮಂತ್ರಿಗಳನ್ನೂ ಇಬ್ಬರಿಗೂ ಸಂಬಂಧಿಸಿದ ವಿಷಯಗಳಲ್ಲಿ ಉಭಯತರ ಜತೆ ಅಧಿವೇಶನವನ್ನೂ ಹೊಣೆ ಮಾಡುವ ವಿಚಾರದದೆಯಂತೆ. ಇದರ ಪರಿಣಾಮವಾಗಿ ಮುಸ್ಲಿಂ ಬಹುಮತದ ಭಾಗಗಳ ಗಡಿ ನಿರ್ಣಯವೇ ಮೊದಲಾದ ಕೆಲಸಕ್ಕೆ ಹಲವಾರು ಸಮಿತಿಗಳ ನೇಮಕವಾಗಬೇಕಾಗುವದು. ಹಿಂದೀ ಸೈನ್ಯದ ವಿಭಜನೆಯೂ ದೊಡ್ಡ ಸಮಸ್ಯೆಯಾಗುವದು.

ಶಾಂತಿ ಸಂದೇಶದ ಪರಿಣಾಮ

ಇತ್ತ ಪಂಜಾಬ, ಗಡಿನಾಡು, ಬಂಗಾಲ ಪರಿಸ್ಥಿತಿಗಳ ಮೇಲೆ ಗಾಂಧೀ-ಜಿನ್ನಾ ಜತೆ ಶಾಂತಿ ಸಂದೇಶದ ಪರಿಣಾಮ ಏನೂ ಆಗಿಲ್ಲವೆಂದು ತೋರುತ್ತದೆ. ಗಡಿನಾಡಿನ ದೆಹರಾ ಇಸ್ಮಾಯಿಲಖಾನ ನಗರದಲ್ಲಿ ಮುಸ್ಲಿಂ ಲೀಗ್ ಹಿಂಸಾಚಾರ ಇನ್ನೂ ಸಾಗಿದೆ. ಅಲ್ಲೊಂದೇ ಕಡೆ ೨ ಕೋಟಿ ರೂಪಾಯ ಹಾನಿಯಾಗಿದೆ. ಕಲಕತ್ತೆಯಲ್ಲಿಯೂ ಇರಿತಗಳು ನಡೆದೇ ಇವೆ. ಸ್ತ್ರೀಯರ ಮಾನರಕ್ಷಣೆಗೆ ಸಿದ್ಧರಾಗಿರೆಂದು ಹೆಣ್ಣುಮಕ್ಕಳು ಶಾಸನಸಭೆಯ ಮುಂದೆ ಪ್ರದರ್ಶನ ನಡೆಸಿದರು. ವಾಯಿಸರಾಯರು ಗಡಿನಾಡಿಗೆ ಭೆಟ್ಟಿ ಕೊಡುವವರಿದ್ದು ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಲೀಗ್ ಚಳವಳಿಯನ್ನು ಉಪಸಂಹರಿಸುವ ಪ್ರಶ್ನೆಯನ್ನು ಇದೀಗ ಬಿಡುಗಡೆಯಾಗಲಿರುವ ಲೀಗ್ ಚಳವಳಿಗಾರರೊಡನೆ ಚರ್ಚಿಸುವರು. ಅತ್ತ ಅಸಾಮದ ಮೇಲೆ ಬಂಗಾಲದ ಲೀಗ್ ಸ್ವಯಂಸೇವಕರು ತ್ರಿಶೂಲ ದಾಳಿಯನ್ನು ಕೈಕೊಳ್ಳುವ ಹಂಚಿಕೆ ಹೂಡಿದ್ದರ ಯೋಜನೆಗಳಿಗೆ ಸಂಬಂಧಿಸಿದ ಕಾಗದಪತ್ರಗಳು ದೊರೆತಿದ್ದು ಅಸಾಮು ಸರಕಾರದ ಗೃಹ ಮಂತ್ರಿಗಳಾದ ಬಸಂತ ಕುಮಾರ ದಾಸರು ಬಂಗಾಲ ಅಸಾಮ ಗಡಿಗೆ ಭೆಟ್ಟಿ ಕೊಟ್ಟರು. ದಿನವೂ ತಿಕೀಟಿಲ್ಲದೆ ಪ್ರಯಾಣ ಬೆಳಸಿ ಅನೇಕ ಮುಸ್ಲಿಮರು ಬಂಗಾಲದಿಂದ ಅಸಾಮಕ್ಕೆ ಪ್ರವೇಶಿಸುತಿದ್ದು ಬಖ್ತಿಯಾರ ಖಿಲಜಿ ೧೩ ನೇ ಶತಕದಲ್ಲಿ ಬಂಗಾಲದ ಮೇಲೆ ನಡೆಸಿದ ದಾಳಿಯಂತೆ ತ್ರಿಶೂಲಾಕಾರದ ಚಂಚು ಪ್ರವೇಶ ನಡೆದಿದೆಯೆಂದು ಅವರು ಹೇಳಿದ್ದಾರೆ. ಈ ದಾಳಿಗೆ ಸಿದ್ಧರಾಗಿ ನಿಂತ ಮುಸ್ಲಿಂ ಸ್ವಯಂಸೇವಕರ ಠಾಣೆಯನ್ನು ಕಿತ್ತುಹಾಕುವದಾಗಿ ಮಾತು ಕೊಟ್ಟಿದ್ದ ಬಂಗಾಲ ಸರಕಾರ ಈ ಬಗ್ಗೆ ಏನೂ ಮಾಡುತ್ತ ಇಲ್ಲವೆಂದು ಬದಲಿಗೆ ಅವರಿಗೆ ಅನುಕೂಲ ಒದಗಿಸುತ್ತಿದೆಯೆಂದೂ ಹೇಳಲಾಗಿದೆ. ಈ ದಾಳಿಯಿಂದ ವಿಶೇಷ ರಕ್ತಪಾತವಾಗದಿರದೆಂದು ತೋರುತ್ತದೆ.

ಹೊಸ ಭಾರತ ಮಂತ್ರಿ

ಭಾರತ ಮಂತ್ರಿಗಳಾಗಿದ್ದ ಲಾರ್ಡ ಪೆಥಿಕ್ ಲಾರೆನ್ಸರು ರಾಜೀನಾಮೆ ಕೊಟ್ಟಿದ್ದು ಪೋಸ್ಟ ಮಾಸ್ತರ ಜನರಲ್ಲರಾಗಿದ್ದ ಲಿಸ್ಟೋವೆಲ್ಲರನ್ನು ಅವರ ಸ್ಥಾನಕ್ಕೆ ನೇಮಿಸಲಾಗಿದೆಯೆಂದು ಬ್ರಿಟಿಶ ಮಂತ್ರಿಮಂಡಲದ ಪ್ರಕಟನೆ ಹೊರಟಿದೆ. ಅಧಿಕಾರತ್ಯಾಗದ ನಿರ್ಣಯದಿಂದ ಭಾರತ ಮಂತ್ರಿಯ ಕೆಲಸ ಬಹಳ ಭಾರವಾಗಿದ್ದು ವೃದ್ಧರಾದ ತಮ್ಮನ್ನು ಅದರಿಂದ ನಿವೃತ್ತಗೊಳಿಸಬೇಕೆಂದು ಪೆಥಿಕ್ ಲಾರೆನ್ಸರು ಕೇಳಿಕೊಂಡಿದ್ದರಿಂದ ಮುಖ್ಯ ಮಂತ್ರಿ ಅಟ್ಲಿಯವರು ಈ ಕ್ರಮತೆಗೆದುಕೊಂಡರು. ಈ ಬದಲಾವಣೆಗೆ ರಾಜಕೀಯ ಮಹತ್ವವೇನೂ ಇಲ್ಲ. ಲಿಸ್ಟೋವೆಲ್ಲರು ೫೦ರ ಕೆಳಗಿನವರಾಗಿದ್ದು ಹೊಸ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುವರೆಂದು ನಂಬಲಾಗಿದೆ. ಅವರು ಬೇಗನೆ ಹಿಂದುಸ್ತಾನಕ್ಕೆ ಭೆಟ್ಟಿಕೊಡಬಹುದು.

ಮಾಸ್ಕೋ ಪರಿಷತ್ತು

ಐದು ವಾರಗಳ ವಿಫಲ ಚರ್ಚೆ, ಪರಸ್ಪರ ದೋಷಾರೋಪಗಳನಂತರ ಮಾಸ್ಕೋದಲ್ಲಿ ವಿದೇಶ ಮಂತ್ರಿಗಳೂ ಅವರ ಸಹಯೋಗಿಗಳೂ ಈ ವಾರ ತಲ್ಪಮುಟ್ಟಿದ ಮುನ್ನಡೆಯನ್ನು ಸಾಧಿಸಿದ್ದಾರೆ. ಮುಖ್ಯವಾಗಿ ಆಸ್ಟ್ರಿಯಾದೊಡನೆ ಮಾಡಿಕೊಳ್ಳಬೇಕಾದ ಶಾಂತಿ ಒಪ್ಪಂದದ ಅನೇಕ ವಿವರಗಳ ಬಗ್ಗೆ ಏಕಮತ್ಯವಾಗಿದೆ. ಅದೇ ಪ್ರಕಾರ ಟ್ರೀಸ್ಟೆ ಆಡಳಿತದ ವಿಷಯದಲ್ಲಿಯೂ ಹಲಕೆಲವು ಮಾತು ತೀರ್ಮಾನಕ್ಕೆ ಬಂದವು. ಆದರೂ ಅನೇಕ ಮಹತ್ವದ ಮಾತುಗಳಲ್ಲಿ ಇನ್ನೂ ತೀವ್ರ ಭಿನ್ನಾಭಿಪ್ರಾಯ ಇದ್ದೇ ಇದೆ. ಅಂದ ಮೇಲೆ ವಿದೇಶ ಮಂತ್ರಿ ಪರಿಷತ್ತು ಮಹತ್ವದ್ದೇನನ್ನೂ ಸಾಧಿಸದೆ ಒಡೆಯುವ ಸಂಭವ ಇನ್ನೂ ದೂರವಾಗಿಲ್ಲ.

ಪಶ್ಚಿಮ ಜರ್ಮನಿಯ ಕಲ್ಲಿದ್ದಲಿ ಹಂಚುವಿಕೆಯ ಮತ್ತು ಯುರೋಪಿಯನ್ ದೇಶಗಳಿಗೆ ಅದರ ನಿರ್ಯಾತದ ವಿಷಯದಲ್ಲಿ ಆಂಗ್ಲೋ-ಅಮೇರಿಕನ್-ಫ್ರೆಂಚರ ನಡುವೆ ಒಂದು ಒಪ್ಪಂದದ ಕರಡು ಸಿದ್ಧವಾಗಿದ್ದು ಅದು ಪ್ರಸಿದ್ಧವಾಗಿದೆ. ಅದರಲ್ಲಿ ಫ್ರೆಂಚ ಬೇಡಿಕೆಗಳೆಲ್ಲ ಮಾನ್ಯ ಮಾಡಲ್ಪಟ್ಟಿಲ್ಲವಾದರೂ ಅನೇಕ ತೃಪ್ತಿಕರ ವಿಚಾರಗಳಿರುವ ಮೂಲಕ ಫ್ರೆಂಚ ವಿದೇಶ ಮಂತ್ರಿ ಬಿಡಾಲರು ಹೊಂದಿಕೊಂಡಿರಬೇಕು. ಈ ಒಪ್ಪಂದದ ಪರಿಣಾಮವಾಗಿ ಜರ್ಮನಿಯ ಆಂಗ್ಲೋ-ಅಮೇರಿಕನ್-ಫ್ರೆಂಚ ಈ ಮೂರೂ ಆಕ್ರಮಣ ವಿಭಾಗಗಳು ಆರ್ಥಿಕ ದೃಷ್ಟಿಯಲ್ಲಿ ಸಮಾವೇಶಗೊಳ್ಳಬಹುದು. ಈಗಾಗಲೆ ಬ್ರಿಟಿಶ ಮತ್ತು ಅಮೇರಿಕನ್ ವಿಭಾಗಗಳ ಸಮಾವೇಶವಾಗಿದೆ. ಫ್ರೆಂಚರೂ ಆ ಯೋಜನೆಯಲ್ಲಿ ಸೇರಿದರೆ ರಶಿಯನ್ನರು ತಮ್ಮ ಸ್ಥಿತಿಯ ದೌರ್ಬಲ್ಯವನ್ನು ಮನಗಂಡು ಹೆಚ್ಚು ತಡ ಮಾಡದೆ ಆರ್ಥಿಕ ಸಮಾವೇಶ ಯೋಜನೆಯಲ್ಲಿ ಸೇರಬಹುದು ಆದರೆ ತಮಗೆ ಸಲ್ಲಬೇಕಾದ ಪರಿಹಾರ ಧನವನ್ನು ದೈನಂದಿನ ಉತ್ಪಾದನೆಯಿಂದಲೆ ಕೊಡಬೇಕೆಂಬ ರಶಿಯನ್ನರ ಹಟ ಇನ್ನೂ ಹಾಗೆಯೇ ಇದೆ.

ಟ್ರೂಮನ್ನರ ಕಮ್ಯುನಿಸ್ಟ್ ವಿರೋಧ

ಹಿಂದಿನ ಉಪಾಧ್ಯಕ್ಷ ಹೆನ್ರಿ ವಾಲೇಸರು ಇಂಗ್ಲಂಡಿನಲ್ಲಿ ಪ್ರಚಾರ ಮುಗಿಸಿ ಯುರೋಪಿಯನ್ ರಾಷ್ಟ್ರಗಳಲ್ಲಿ ಅಮೇರಿಕೆಯ ರಶಿಯಾ-ವಿರೋಧಿ ಧೋರಣೆಯನ್ನು ಖಂಡಿಸುತ್ತ ಮತ್ತು ರಶಿಯಾದೊಡನೆ ಸ್ನೇಹವನ್ನು ಪ್ರತಿಪಾದಿಸುತ್ತ ಸಂಚರಿಸುತ್ತಿರುವ ಹೊತ್ತಿನಲ್ಲೇ ಅಮೇರಿಕೆಯಲ್ಲಿ ಅಧ್ಯಕ್ಷ ಟ್ರೂಮನ್ನರ ರಶಿಯಾ ವಿರೋಧಿ, ಕಮ್ಯುನಿಸ್ಟ್ ವಿರೋಧಿ ಧೋರಣೆ ಇನ್ನಷ್ಟು ತೀಕ್ಷ್ಣವೂ ಬಹಿರಂಗವೂ ಆಗಿ ಸಾಗುತ್ತಿದೆ.

● ಕಳೆದ ವಾರ ಟ್ರೂಮನ್ನರು ಅಮೇರಿಕೆಯ "ತಾಟಸ್ಥ್ಯ ಕಾಯದೆ"ಯಲ್ಲಿ ಅದ್ಯಂತ ಬದಲಾವಣೆಯಾಗಬೇಕೆಂದು ಕಾಂಗ್ರೆಸ್ಸಿಗೆ ಸಂದೇಶ ಕಳಿಸಿದರು. ಈಗಿರುವ ತಾಟಸ್ಥ್ಯ ಕಾಯದೆಯನ್ವಯ ಎಲ್ಲ ರಾಷ್ಟ್ರಗಳಿಗೂ ಅಮೇರಿಕೆ ಪರಿಭೇದವಿಲ್ಲದೆ ಶಸ್ತ್ರಾಸ್ತ್ರಗಳನ್ನು ಪೂರೈಸಬೇಕಾಗುವದು. ಇದು ಉಳಿದರೆ "ನಾಳೆ ನಮ್ಮ ಮೇಲೆಯೆ ತಿರುಗಿಬೀಳಬಹುದಾದ ರಾಷ್ಟ್ರಕ್ಕೆ ನಾವಿಂದು ಯುದ್ಧ ಸಾಮಗ್ರಿಗಳನ್ನೂ ಕಳಿಸಬೇಕಾಗುವದು" ಎಂದು ಟ್ರೂಮನ್ನರು ಹೇಳಿದ್ದಾರೆ. ಈ ಬದಲಾವಣೆ ಯಾರ ವಿರುದ್ಧವೆಂದು ಹೇಳಬೇಕಾಗಿಯೆ ಇಲ್ಲ.

● ವಿದೇಶ ಮಂತ್ರಿ ಜನರಲ್ ಮಾರ್ಶಲ್ಲರು ಮಾಸ್ಕೋದಿಂದ ಅಧ್ಯಕ್ಷ ಟ್ರೂಮನ್ನರಿಗೆ ತಂತಿ ಕೊಟ್ಟು ಗ್ರೀಸ, ತುರ್ಕಿಗಳಿಗೆ ಸಹಾಯವನ್ನು ತ್ವರಿತವಾಗಿ ಒದಗಿಸದೆ ವಿಧಿಯೆ ಇಲ್ಲವೆಂದು ಉಪದೇಶಿಸಿದ್ದಾರೆ.

● ಅಮೇರಿಕೆಯಲ್ಲಿ ಕಮ್ಯುನಿಸ್ಟರ ಪ್ರಭಾವ ಎಷ್ಟು ಮಟ್ಟಿಗೆ ಹಂಚು ಪ್ರವೇಶ ಮಾಡಿದೆಯೆಂದು ಕಂಡುಹಿಡಿದು ಅವರನ್ನು ಉಚ್ಚಾಟನೆಗೊಳಿಸುವ ಗೋಸುಗ ತೀಕ್ಷ್ಣ ಉಪಾಯಗಳನ್ನು ಕೈಕೊಳ್ಳಲು ದಂಡೋಪಾಯದ ಕಾಯಿದೆಗಳನ್ನು ಅಮೇರಿಕನ್ ಶಾಸನ ಸಭೆ ರಚಿಸುತ್ತಿದೆ.

● ರಶಿಯಾ ಮತ್ತು ಇತರ ಕೆಲವು ರಾಷ್ಟ್ರಗಳಿಗೆ ಕಡ ಒತ್ತೆ ಒಪ್ಪಂದದನ್ವಯ ಹೋಗಬೇಕಾಗಿದ್ದ ಸಾಮಗ್ರಿಗಳನ್ನು ಶಾಸನ ಸಭೆ ತಡೆಹಿಡಿದಿದೆ. ಮುಖ್ಯವಾಗಿ ರಶಿಯಾಕ್ಕೆ ಹೋಗಹೊರಟಿದ್ದ ಕಲ್ಲೆಣ್ಣೆ ಶುದ್ಧೀಕರಣದ ಸಾಧನಗಳು ಸ್ಥಗಿತವಾಗಿವೆ. ರಶಿಯಾದವರು ಕಡಒತ್ತೆ ಲೆಕ್ಕಾಚಾರವನ್ನು ಬಗೆಹರಿಸದಿದ್ದುದೇ ಈ ತಡೆಗೆ ಕಾರಣವೆಂದು ನೆವ ಹೇಳಲಾಗಿತ್ತು. ಈಗ ಆ ಬಗ್ಗೆ ಮಾತುಕತೆ ಪ್ರಾರಂಭವಾಗಿದ್ದರೂ ತಡೆ ಉಳಿದಿದ್ದುದರಿಂದ ಆರ್ಥಿಕ ಬಹಿಷ್ಕಾರವನ್ನು ಪ್ರತ್ಯಕ್ಷವಾಗಿ ರಶಿಯಾದ ವಿರುದ್ಧ ಉಪಯೋಗಿಸಲು ಅಮೇರಿಕೆ ಸಿದ್ಧವಾದಂತಾಗಿದೆ. ಇನ್ನು ರಶಿಯಾಕ್ಕೂ ಅದರ ಅನುಚರ ರಾಷ್ಟ್ರಗಳಿಗೂ ಹೋಗುವ ಪೂರೈಕೆಗಳನ್ನೆಲ್ಲ ಒಮ್ಮಿಂದೊಮ್ಮೆ ನಿಲ್ಲಿಸಿಬಿಡಲಾಗುವದಂತೆ.

ಅಂತರರಾಷ್ಟ್ರೀಯ

● ರಶಿಯಾವನ್ನು ಹಾದಿಗೆ ತರಲು ಅಧ್ಯಕ್ಷ ಟ್ರೂಮನ್ನರು ಡಾಲರಗಳನ್ನು ನೀರಿನಂತೆ ಸುರಿಯಲು ಸಿದ್ಧರಾಗಿದ್ದು ಗ್ರೀಸ, ತುರ್ಕಿಗಳಿಗೆ ಕೊಡಲಿರುವ ಸಹಾಯ ಅದರಲ್ಲಿ ಅಲ್ಪಾಂಶ ಮಾತ್ರ ಆಗಿದೆಯಂತೆ. "ಪ್ರಜಾತಂತ್ರ" ಸರಕಾರಗಳಿಗೆ ಎಲ್ಲೆಲ್ಲಿಯೂ ಕಮ್ಯುನಿಝಂ ವಿರುದ್ಧ ಸಹಾಯ ನೀಡಲು ಅವರು ಸಿದ್ಧರಾಗಿದ್ದಾರೆ.

● ಚರ್ಚಿಲ್ಲರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಟ್ರೂಮನ್ನರೂ ಯುರೋಪಿನ ರಾಷ್ಟ್ರಗಳ ಸಂಯುಕ್ತ ಘಟನೆಯಾಗಬೇಕೆಂದು ಪ್ರಚಾರ ಮಾಡುವರಂತೆ. ಈ ಬಗೆಯಾಗಿ ಸಂಯುಕ್ತ ಸ್ಥಾಪನೆ ರಶಿಯಾಕ್ಕೆ ಗಂಡಾಂತರರೂಪಿಯೆಂದು ರಶಿಯನ್ನರು ಮೊದಲಿಂದಲೂ ಬಗೆದಿದ್ದಾರೆ.

ರಾಜಕೀಯ ಆರಭಟೆಯೆ?

ಟ್ರೂಮನ್ನರ ಈ ಅರ್ಭಟಿ ಲೋಕೋದ್ಧಾರಾಪೇಕ್ಷೆಗಿಂತ ಆಂತರಿಕ ರಾಜಕೀಯ ಕಾರಣಗಳಿಂದಲೇ ಹೆಚ್ಚು ಪ್ರೇರಣೆಗೊಂಡಿದೆಯೆಂದು ಧೂರ್ತರು ತರ್ಕಿಸುತ್ತಾರೆ. ಕಳೆದ ನವೆಂಬರದ ಚುನಾವಣೆಗಳಲ್ಲಿ ಡೆಮಾಕ್ರೆಟರ (ಟ್ರೂಮನ್ನರ ಪಕ್ಷ) ಅಪಜಯವಾದೊಡನೆ ಈ ಬಗೆಯ ವಿದೇಶ ಧೋರಣೆ ನಿರೀಕ್ಷಿಸಲ್ಪಟ್ಟಿತ್ತು. ವಿರೋಧಿ ಪಕ್ಷದ ರಿಪಬ್ಲಿಕನರಿಗೆ ದೊರೆತ ಅಪೂರ್ವ ಯಶಸ್ಸಿಗೆ ಅವರ ಕಮ್ಯುನಿಸ್ಟ್ ದ್ವೇಷಪೂರಿತ ಪ್ರಚಾರವೂ ಒಂದು ಕಾರಣವಾಗಿತ್ತು. ಈಗ ಟ್ರೂಮನ್ನರು ಭಾರಿ ಬಂಡವಳಗಾರ ಪಕ್ಷವಾದ ರಿಪಬ್ಲಿಕನ್ ಪಕ್ಷವನ್ನೇ ಮರೆಸುವಷ್ಟು ಪ್ರಚಂಡ ಕಮ್ಯುನಿಸ್ಟ್ ದ್ವೇಷಿಗಳಾಗಿ ಬಿಟ್ಟದ್ದರಿಂದ ರಿಪಬ್ಲಿಕನ್ನರ ಕೈಲಿದ್ದ ಆಯುಧವನ್ನೇ ಅವರು ಕಸಿದುಕೊಂಡಂತಾಗಿದೆ. ಇಂದು ಅಮೇರಿಕೆಯಲ್ಲೆಲ್ಲ ಕಮ್ಯುನಿಸ್ಟ್ ದ್ವೇಷದ ಅವೇಗ ಹಬ್ಬಿದೆ. ಅಧ್ಯಕ್ಷ ಟ್ರೂಮನ್ನರ ಪಕ್ಷ ಬಹಳ ಬೆಳೆದುಬಿಟ್ಟಿದೆ. ಈ ಅವೇಗದ ರಭಸದ ಮುಂದೆ ಟ್ರೂಮನ್ನರ ಯೋಜನೆಗಳಲ್ಲಿ ಅಡಕವಾದ ಗಂಡಾಂತರವನ್ನು ಮನಗಂಡು ಅದನ್ನು ತಡೆಯಬೇಕೆಂಬ ಇಚ್ಛೆಯುಳ್ಳವರು ಕೂಡ ತಮ್ಮ ಜನಪ್ರಿಯತೆಗೆ ಧಕ್ಕೆ ಬಂದೀತೆಂದು ತಲೆ ಮರೆಸಿಕೊಳ್ಳುವ ಪಾಳಿ ಬಂದಿದೆ. ಡೆಮಾಕ್ರೆಟಿಕ ಪಕ್ಷದಲ್ಲಿ ಇಬ್ಬಣವಾಗಿ ವಾಲೇಸರ ಬೆಂಬಲಿಗರು ಹಂಗುದೊರೆದು ತಮ್ಮ ಪಕ್ಷದವರೇ ಆದ ಟ್ರೂಮನ್ನರನ್ನು ವಿರೋಧಿಸುತ್ತಿದ್ದಾರೆ. ಸದ್ಯ ಯುರೋಪಿನಲ್ಲಿರುವ ವಾಲೇಸರು ತಾವು ಮಂಡಿಸಿದ ಅಮೇರಿಕನ್ನರು ತಮ್ಮ ಮಾತಿಗೆ ಕಿವಿಗೊಡಬಹುದೆಂದು ಆಶೆಯನ್ನು ವ್ಯಕ್ತಗೊಳಿಸಿದ್ದರೂ ತಮ್ಮ ದೇಶದ ಸರಕಾರದ ವಿರುದ್ಧ ವಿದೇಶಗಳಲ್ಲಿ ಪ್ರಚಾರ ಮಾಡುತ್ತಿರುವ ಅವರು ದೇಶದ್ರೋಹಿಯೆಂದು ಈಗಾಗಲೆ ಅಪಪ್ರಚಾರ ಆರಂಭವಾಗಿಬಿಟ್ಟಿದೆ. ರಿಪಬ್ಲಿಕನ್ನರೂ ಒಳ್ಳೆ ಪೇಚಿಗೆ ಬಿದ್ದಿದ್ದಾರೆ. ರಶಿಯಾ ವಿರೋಧಿ ಯೋಜನೆಗಳಿಗೆ ಅಸಂಖ್ಯ ಹಣ ವೆಚ್ಚ ಮಾಡಲು ಅವರಿಗೆ ಮನಸಿಲ್ಲ. ಆದರೆ ಈಗ ಅವರು ಹಿಂದೆ ಮುಂದೆ ನೋಡಿದರೋ ಅವರ ವಿರೋಧಿಗಳು ಅವರ ಆಯುಧವನ್ನು ಅವರ ಮೇಲೆಯೇ ಪ್ರಯೋಗಿಸುವರು. ಆಂತರಿಕ ಪರಿಸ್ಥಿತಿಯಿಂದ ಪಾರಾಗಲು ಬಂಡವಳಗಾರ ರಾಜ್ಯಗಳು ವಿದೇಶಿ ಯುದ್ಧಕ್ಕೆ ತಮ್ಮ ಜನರನ್ನೆಳೆಯಬಹುದೆಂಬ ಕಮ್ಯುನಿಸ್ಟ್ ಸಿದ್ಧಾಂತ ಸತ್ಯವೇ ಆಗುವದೋ ಏನೊ.

ಆಂಗ್ಲೋ-ರಶಿಯನ್ ಒಪ್ಪಂದದಲ್ಲಿ ನೋಣ

ಪ್ರಚಂಡ ಶಕ್ತಿಗಳೆರಡರ ಈ ತಿಕ್ಕಾಟದಲ್ಲಿ, ಯುದ್ಧದಿಂದ ದ್ವಿತೀಯ ಸ್ಥಾನಕ್ಕಿಳಿದು ಹೋದ ಬ್ರಿಟನ್ನಿನ ಸ್ಥಿತಿ ಶೋಚನೀಯವಾಗಿಬಿಟ್ಟಿದೆ. ಹಲಬಗೆಯ ಋಣಾನುಬಂಧವುಳ್ಳ ಅಮೇರಿಕೆಯೊಡನೆ ಬ್ರಿಟನ್ನಿನ ಧೋರಣ ಅನಿವಾರ್ಯವಾಗಿ ಹೆಣೆದುಕೊಂಡಿದೆ. ಆದರೆ ಬ್ರಿಟಿಶ ಕೂಲಿಕಾರ ಸರಕಾರ ರಶಿಯಾದೊಡನೆಯೂ ಅನೇಕ ಕಾರಣಗಳಿಗಾಗಿ ತೀವ್ರ ದ್ವೇಷ ಕಟ್ಟಿಕೊಳ್ಳಲಾರದು. ರಶಿಯಾದೊಡನೆ ೫೦ ವರ್ಷಗಳ ಒಡಂಬಡಿಕೆ ಮಾಡಿಕೊಳ್ಳಬೇಕೆಂದು ಬೆವಿನ್ನರು ಪ್ರಯತ್ನಿಸಿದ್ದು ರಶಿಯಾ-ಅಮೇರಿಕೆಗಳ ನಡುವಣ ಕ್ಕಾಟದ ಕಾರಣದಿಂದಲೇ ಅಯಶಸ್ವಿಯಾಯಿತೆಂದು ತಿಳಿಯುತ್ತದೆ. ರಶಿಯಾದ ಮತ್ತು ಕಮ್ಯುನಿಝಂದ ವಿರುದ್ಧ ಬೇರೆ ರಾಷ್ಟ್ರಗಳು (ಅರ್ಥಾತ್ ಅಮೇರಿಕೆ) ಕೈಕೊಳ್ಳುವ ಉಪಾಯಗಳಲ್ಲಿ ಬ್ರಿಟನ್ನು ಭಾಗಿಯಾಗುವದಿಲ್ಲೆಂಬ ಒಂದು ಕಲಮನ್ನು ಸೇರಿಸಬೇಕೆಂದು ಈಚೆಗೆ ರಶಿಯನ್ನರು ಒತ್ತಾಯಗೊಳಿಸಿದರಂತೆ. ಇದಕ್ಕೆ ಅಮೇರಿಕೆಯೊಡನೆ ನಿಕಟ ಸಂಬಂಧವುಳ್ಳ ಬ್ರಿಟನ್ನು ಹೇಗೆ ಒಪ್ಪೀತು? ಅಂತೆಯೆ ಪೂರ್ಣ ರಶಿಯಾ ವಿರೋಧಿ ಮಾರ್ಗವನ್ನು ಹಿಡಿಯುವದೂ ಬ್ರಿಟನ್ನಿಗೆ ಸಾಧ್ಯವಿಲ್ಲ. ಕೂಲಿಕಾರ ಪಕ್ಷದಲ್ಲಿಯೆ ಪ್ರಬಲ ಪಂಗಡವೊಂದು ಬೆವಿನ್ನರ ವಿದೇಶ ಧೋರಣೆಗೆ ವಿರುದ್ಧವಾಗಿದೆ. ಈ ಪಂಗಡವನ್ನು ಧಿಕ್ಕರಿಸಿ ನಡೆಯೋಣೆಂದರೆ ಕೂಲಿಕಾರ ಸರಕಾರವನ್ನು ಹೇಗಾದರೂ ಉರುಳಿಸಬೇಕೆಂದು ಚರ್ಚಿಲ್ ಮಹಾಶಯರು ಸಿದ್ಧರಾಗಿ ನಿಂತಿದ್ದಾರೆ.

ಪಾಲಿಸ್ತಾನ ಮತ್ತು ಯುಕ್ತರಾಷ್ಟ್ರ

ಪಾಲಿಸ್ತಾನದ ಅರಬ-ಯಹೂದಿ ಸಮಸ್ಯೆಯನ್ನು ಬಿಡಿಸಲಾರದೆ ಬ್ರಿಟಿಶರು ಅದರ ಬಗ್ಗೆ ವಿಚಾರ ಮಾಡಲು ಯುಕ್ತರಾಷ್ಟ್ರ ಸಂಸ್ಥೆಯ ನೆರವು ಪಡೆದಿದ್ದು ಆ ಬಗ್ಗೆ ಎಪ್ರಿಲ ೨೮ಕ್ಕೆ ಯುಕ್ತರಾಷ್ಟ್ರ ಸಭೆಯ ವಿಶೇಷಾಧಿವೇಶನ ಸೇರುವದಿದೆ. ಅಲ್ಲಿ ಪಾಲಿಸ್ತಾನದ ಮೇಲೆ ಬ್ರಿಟಿಶರ ಅದಿಷ್ಠಾಧಿಕಾರವನ್ನು ಕೊನೆಗೊಳಿಸಿ ಅದನ್ನು ಸ್ವತಂತ್ರಗೊಳಿಸಬೇಕೆಂದು ಇಚಿಪ್ತು ಒಂದು ಗೊತ್ತುವಳಿ ಕಳಿಸಿದೆ. ಈ ಅಧಿವೇಶನದಲ್ಲಿ ಪೂರ್ವ ಪೀಠಿಕೆಯನ್ನಷ್ಟೆ ಸಿದ್ಧಗೊಳಿಸಿ ಮುಂದಿನ ಅಧಿವೇಶನದಲ್ಲಿ ಅದರ ಪೂರ್ಣ ಚರ್ಚೆ ಮಾಡಬೇಕೆಂಬ ಬ್ರಿಟಿಶ ವಿಚಾರವನ್ನು ತಲೆಕೆಳಗು ಮಾಡಿ ಈ ಅಧಿವೇಶನದಲ್ಲಿ ಪೂರ್ಣ ಚರ್ಚೆಯನ್ನು ತಂದೊಡ್ಡಬೇಕೆಂಬುದೇ ಇಚಿಪ್ತಿನ ಉದ್ದೇಶವೆಂದು ಹೇಳಿ ಇಂಗ್ಲಂಡೂ ಯಹೂದಿಗಳೂ ಅದನ್ನು ವಿರೋಧಿಸುವರು. ಪಾಲಿಸ್ತಾನದ ಸಮಸ್ಯೆಯ ವಿಚಾರಣೆಗಾಗಿ ನೇಮಿಸುವ ಯುಕ್ತರಾಷ್ಟ್ರ-ಸಮಿತಿಯಲ್ಲಿ ಅರಬ ರಾಷ್ಟ್ರಗಳಿಗೆ—ಅವು ಹಿತಸಂಬಂಧವುಳ್ಳ ರಾಷ್ಟ್ರಗಳಾದುದರಿಂದ— ಸ್ಥಾನವಿರಕೂಡದೆಂದು ಸೂಚಿಸಲಾಗಿದೆ. ಕನಿಷ್ಠ ಹಿಂದುಸ್ತಾನಕ್ಕಾದರೂ ಅದರಲ್ಲಿ ಸ್ಥಾನ ಕೊಡಬೇಕೆಂದು ಅರಬ ರಾಷ್ಟ್ರಗಳು ಒತ್ತಾಯಗೊಳಿಸಲಿದ್ದು ಈ ರಾಯಭಾರಿ ಅಸಫ ಅಲ್ಲಿಯವರೊಡನೆ ಈ ಸಂಬಂಧದಲ್ಲಿ ಮಾತುಕತೆ ನಡೆಸಿದ್ದಾರೆಂದು ತಿಳಿಯುತ್ತದೆ. ಅರಬ ರಾಷ್ಟ್ರಗಳು ಹಿಂದುಸ್ತಾನದಲ್ಲಿಟ್ಟಿರುವ ವಿಶ್ವಾಸ ಹಿರಿದಾಗಿದೆ.

ಗ್ರೂನರ ಗಲ್ಲಿಗೇರಿದನು

ಕೆಲತಿಂಗಳ ಹಿಂದೆ ಟೆಲಅವೀವ(ಪಾಲಿಸ್ತಾನ) ಪೋಲೀಸ ಠಾಣೆಯ ವಿಧ್ವಂಸಕ್ಕೆ ಕಾರಣರಾದವರಲ್ಲೊಬ್ಬನಾದ ೩೪ ವಯಸ್ಸಿನ ಯಹೂದ್ಯ ಕ್ರಾಂತಿಕಾರ ಗ್ರೂನರ ಮತ್ತು ಅವನ ಮೂವರು ಸಂಗಡಿಗರನ್ನು ಕಳೆದವಾರ ಬ್ರಿಟಿಶ ಜೇಲಧಿಕಾರಿಗಳು ಗಲ್ಲಿಗೇರಿಸಿದರು. ಇವನ ಮೇಲೆ ಮರಣ ದಂಡನೆಯ ತೀರ್ಪು ಪಾಸಾಗಿ ಎಷ್ಟೋ ವಾರಗಳಾಗಿ ಹೋಗಿದ್ದರೂ ಅವನ ಮೇಲರಿಕೆಯ ತೀರ್ಪು ಹೊರಬೀಳುವ ವರೆಗೆ ಅದನ್ನು ತಡೆಹಿಡಿಯಲಾಗಿತ್ತು. ಮೇಲರಿಕೆ ತಿರಸ್ಕರಿಸಲ್ಪಟ್ಟ ಮೇಲೆ ಎಲ್ಲ ನಿಷೇಧಗಳನ್ನು ಧಿಕ್ಕರಿಸಿ ಅವನನ್ನೂ ಅವನ ಸಂಗಡಿಗರನ್ನೂ ಗಲ್ಲಿಗೇರಿಸಲಾಯಿತು.

ಯಹೂದಿ ಕ್ರಾಂತಿಕಾರ ಸಂಸ್ಥೆ ಒಂದು ಘೋಷಣೆ ಹೊರಡಿಸಿ ಈ ನಾಲ್ವರು ಯಹೂದ್ಯರ ಪ್ರಾಣಗಳಿಗೆ ೪೦ ಬ್ರಿಟಿಶರನ್ನು ಬಲಿ ತೆಗೆದುಕೊಳ್ಳುವೆವೆಂದು ಶಪಥ ಮಾಡಿದೆ. ತಮ್ಮ ಬೆದರಿಕೆಯನ್ನು ಕಾರ್ಯರೂಪಕ್ಕೆ ತರಲು ತಡವನ್ನೂ ಮಾಡಲಿಲ್ಲ. ಗ್ರೂನರನನ್ನು ಗಲ್ಲಿಗೇರಿಸಿದ ಅಕೇತಾಸಿನೊಳಗೆ ಲಂಡನ್ನಿನಲ್ಲಿರುವ ಬ್ರಿಟಿಶ ಸಾಮ್ರಾಜ್ಯದ ಹೃದಯವೆನಿಸಿದ ವಸಾಹತುಭವನದಲ್ಲಿ ಇಡಿ ಕಟ್ಟಡವನ್ನು ಧ್ವಂಸಗೊಳಿಸಲು ಸಾಲುವಷ್ಟು ಭಯಾನಕವಾದ ಅವಧಿ ಬಾಂಬೊಂದನ್ನು ಯಾರೋ ಅಜ್ಞಾತ ಸುಂದರಿಯೊಬ್ಬಳು ಇಟ್ಟು ಹೋದಳು. ಸುದೈವದಿಂದ ಕಸ ಗುಡಿಸುವವಳಿಗೆ ಅದು ಸಿಕ್ಕಿದ್ದರಿಂದ ಅದನ್ನು ನಿರಪಾಯಿಯಾಗಿ ಮಾಡಲಾಯಿತು. ಅದರೆ ಮತ್ತೆ ನಾಲ್ಕು ದಿನಗಳಲ್ಲಿ ಯಹೂದ್ಯ ಕ್ರಾಂತಿಕಾರರು ಪಾಲಿಸ್ತಾನದಲ್ಲಿ ಬಾಂಬಿನ ಮೂಲಕ ಒಂದು ರೇಲುಗಾಡಿಯನ್ನು ಹಾರಿಸಿದ್ದರಲ್ಲಿ ಐವರು ಬ್ರಿಟಿಶ ಸೈನಿಕರನ್ನೊಳಗೊಂಡು ೮ ಜನರು ಸತ್ತಿದ್ದು ಅನೇಕರಿಗೆ ಗಾಯವಾಗಿದೆ.

ಟೆಕ್ಸಾಸ ಅನಾಹುತ

ಎರಡು ವರ್ಷ ಹಿಂದೆ ಮುಂಬಯಿಯ ಧಕ್ಕೆಯಲ್ಲಾದ ಸ್ಫೋಟದ ಪ್ರತಿಧ್ವನಿಯಂತಿದ್ದ ಸ್ಫೋಟವೊಂದು ಕಳೆದವಾರ ಅಮೇರಿಕೆಯ ಟೆಕ್ಸಾಸ ನಗರದಲ್ಲಿ ಸಂಭವಿಸಿತು. ಟೆಕ್ಸಾಸ ನಗರವೆಂದರೆ ಎಣ್ಣೆ ಕಂಪನಿಗಳ ಮತ್ತು ರಸಾಯನ ಕಂಪನಿಗಳ ನಗರ. ಟೆಕ್ಸಾಸ ಬಂದರದಲ್ಲಿ ನಿಂತಿದ್ದ ೧೭೬ ಟನ್ ಭಾರದ "ಗ್ರ್ಯಾಂಡ್ ಕ್ಯಾಂಪ್" ಎಂಬ ಹಡಗದಲ್ಲಿ ರಾಸಾಯನಿಕ ಗೊಬ್ಬರ ತುಂಬಿತ್ತು. ಅದರಲ್ಲಿ ಬೇರೆ ಸ್ಫೋಟಕ ಸಾಮಗ್ರಿಗಳೂ ಇದ್ದಿರಬೇಕು. ಅಕಸ್ಮಾತ್ತಾಗಿ ಅದಕ್ಕೆ ಉರಿಹತ್ತಿತು! ಅದನ್ನಾರಿಸುವ ಪ್ರಯತ್ನಗಳೆಲ್ಲ ವ್ಯರ್ಥವಾದವು. ಅದನ್ನು ನೀರಿನ ದೂರ ತಳ್ಳಿಬಿಡಲು ಯತ್ನಿಸುತ್ತಿದ್ದಂತೆ ಪ್ರಚಂಡ ಸ್ಫೋಟವೊಂದು ಸಂಭವಿಸಿತು. ಅನಂತರ ಹಡಗದಿಂದ ಹಡಗಕ್ಕೆ ಗೋದಾಮಿನಿಂದ ಬೆಂಕಿ ಹಬ್ಬಿ ಸ್ಫೋಟವಾಗಿ ನಗರವನ್ನು ಗಡಗಡ ನಡುಗಿಸಿತು. ಹೊಸತಾಗಿ ಕಟ್ಟಿದ ರಾಸಾಯನಿಕ ಗೊಬ್ಬರ ಕಾರ್ಖಾನೆಯೊಂದು ತಲೆ ಕೆಳಗಾಗಿ ನಿರ್ನಾಮವಾಗಿ ಹೋಯಿತು. ವಿಷಗಾಳಿ ಹಬ್ಬಿತು. ಎಣ್ಣೆ ಕೆರೆಗಳಿಗೆ ಬೆಂಕಿಹತ್ತಿತು. ಸ್ಫೋಟಗಳಿಂದ ಹೊರಟ ಒತ್ತಡದಿಂದ ನೂರಾರು ಜನ ಸತ್ತರು. ದುಂಡಗಳು ಚಂಡಾಡಿದವು. ಕೈಕಾಲುಗಳು ಹಾರಿದವು. ನಗರವೆಲ್ಲ ಹೊಗೆಯ ಸಾಮ್ರಾಜ್ಯವಾಯಿತು. ಕಬ್ಬಿಣದ ತೊಲೆಗಳು ಹದಿನೈದು ಮೈಲುಗಳಷ್ಟು ದೂರ ಹಾರಿದವು.

ಮರುದಿನ ಮತ್ತೆ ಅನೇಕ ಎಣ್ಣೆ ಟಾಂಕಿಗಳಿಗೆ ಬೆಂಕಿ ಹತ್ತಿತು. ಇಡಿ ನಗರವನ್ನೆ ಖಾಲಿ ಮಾಡಲಾಯಿತು. ೫೦೦ ಮಿಕ್ಕಿ ಜನರು ಸತ್ತು ೪೦೦೦ ಜನರಿಗೆ ಗಾಯವಾಗಿರಬಹುದು. ಕೆಲ ಭಾಗಗಳ ಉರಿ ಇನ್ನೂ ಆರಿಲ್ಲ.

ಮಹಾ ಪ್ರಯಾಸದಿಂದ ನಗರದ ಜೀವನವನ್ನು ಪುನಃ ಪ್ರಸ್ಥಾಪಿಸುವದು ಪ್ರಾರಂಭವಾದೊಡನೆ ಮೊದಲ ಸ್ಫೋಟವಾದ ಒಂದು ವಾರದಲ್ಲಿ ಮತ್ತೆರಡು ಸ್ಫೋಟಗಳಾಗಿ ನಗರವೆಲ್ಲ ಮತ್ತೆ ಬೆಂಕಿ ಹೊಗೆಗಳಿಂದ ಮುಚ್ಚಿ ಹೋಗಿದೆ. ಇಂಥ ಅನಾಹುತ ಅಮೇರಿಕೆಯಲ್ಲಿ ಕಳೆದ ೧೦ ವರ್ಷಗಳಾಗಿಲ್ಲವಂತೆ. ೫ ಕೋಟಿಯಿಂದ ೧೦ ಕೋಟಿ ಡಾಲರ ಹಾನಿಯಾಗಿರಬಹುದು.

× × ×

ಜನೇವರಿ ೧೫ ರಿಂದಲೂ ಅಸ್ವಸ್ಥನಾಗಿರುವ ಡೆನ್ಮಾರ್ಕಿನ ಅರಸನಾದ ಕ್ರಿಶ್ಚನ್ನನು (೭೭) ಮರಣಹೊಂದಿದ್ದಾನೆ. ಅವನ ಮಗ ಫ್ರೆಡರಿಕ (೪೮) ನನ್ನು ಪಟ್ಟಕ್ಕೇರಿಸಲಾಗಿದೆ.

× × ×

ಇಂಗ್ಲಂಡಿನ ಪರಮಾಣು ಕಾರಖಾನೆಯಲ್ಲಿ ಕೆಲಸ ಮಾಡುತ್ತಿರುವ ತಾಂತ್ರಿಕ ಕೂಲಿಕಾರರಲ್ಲಿ ಅಕಾರಣ ದೇಹಾಯಾಸವೂ ಲೈಂಗಿಕ ಅಭಿಲಾಷೆಯ ಹ್ರಾಸವೂ ಆಗಿದ್ದರಿಂದ ಪರಮಾಣು ಸಂಬಂಧಿ ಕೆಲಸದಿಂದ ನಪುಂಸಕತೆಯುಂಟಾಗಬಹುದೇ ಎಂದು ವಿಚಾರಣೆ ಮಾಡಬೇಕೆಂದು ಬಾಬ ಎಡ್ವರ್ಡ್ಸನೆಂಬ ಕೂಲಿಕಾರ ಮುಂದಾಳು ಕೇಳಿಕೊಂಡಿದ್ದಾನೆ.

× × ×

ಟ್ರಾನ್ಸವಾಲದಲ್ಲಿ ಹಿಂದೀ ವ್ಯಾಪಾರಿಗಳ ವಿರುದ್ಧ ಯುರೋಪಿಯನ್ ಬಹಿಷ್ಕಾರ ಚಳವಳಿ ಬೆಳೆದಿದ್ದು ಆ ಪ್ರಶ್ನೆ ಶಾಸನ ಸಭೆಯಲ್ಲಿ ಎತ್ತಲ್ಪಟ್ಟಿತು. ರಾಷ್ಟ್ರೀಯ ಪಕ್ಷದವರು ಬಹಿಷ್ಕಾರವನ್ನು ಎತ್ತಿ ಹಿಡಿದು ಮಾತಾಡಿದರು. ಎಲ್ಲರೂ ಹಿಂದುಸ್ತಾನ ಸರಕಾರ ಕೈಕೊಂಡ ಆರ್ಥಿಕ ಪ್ರತೀಕಾರೋಪಾಯಗಳೇ ಈ ಬಹಿಷ್ಕಾರಕ್ಕೆ ಕಾರಣವೆಂದು ಹಿಂದೀಯರನ್ನೆ ದೂರಿದರು. "ಕೂಲಿಗಳ (ದ. ಆಫ್ರಿಕೆಯಲ್ಲಿ ಯುರೋಪಿಯನ್ನರು ಹಿಂದೀಯರನ್ನು ಕರೆಯುವ ಹೆಸರು) ಗಂಟಲು ಮುರಿಯಬೇಕು ಮತ್ತು ಮುರಿದೇ ಬಿಡುವೆವು" ಎಂದು ಯುರೋಪಿಯನ್ನರು ಹಿಂಸಾ ಪ್ರಚೋದನೆ ಮಾಡುತ್ತಿದ್ದಾರೆ.

ನಮ್ಮ ಹೊಸ ಏಜಂಟರು
ಸಿ. ಎಚ್. ಸುಬ್ಬಯ್ಯ,
ಚನ್ನರಾಯಪ...

ರಶಿಯನ್ನರ ಚರ್ಯೆ ನಿಜವಾಗಿ ಆಯೋಗ್ಯವೆ ?

[ಮೊದಲನೇ ಪುಟದಿಂದ ಮುಂವರಿದುದು]

ಅವರೂ ರಶಿಯನ್ ಬೇಡಿಕೆಗಳು ಕೃತಜ್ಞತೆ ಸವನೇನು ಸಾವೆನ್ನುತ್ತೇವೆ. ಉತ್ಪಾದನ ಸಾಧನಗಳು ಕುಸಿತ್ತಿ ಕೆಲ ಜನರಿಗೆ ಆಶ್ರಯವಾಗಿ ಉಳಿದುದು, ಜರ್ಮನಿಯ ರಾಷ್ಟ್ರಗಳಿಗೆ ಉದಾಹರಣ ಬೇಕೆಂದ ಪ್ರಸಂಗಗಳು ಇರುವುದು. ರುಮೇನಿಯನ್ನರನ್ನು ಹಂಗೇರಿಯನ್ನರನ್ನು ಕಂಡು ನಮಗೆ ಕರುಣೆ ಬರುತ್ತದೆ. ಫ್ಯಾಸಿಸ್ಟ್ ಹಿಂಸೃತಿಯನ್ನು ಅನುಭವಿಸಿ ಅನಿವಾರ ನಾವು ತಮ್ಮ ತಳಿಯು ತತ್ತ್ವಗಳೊಡನೆ ಅವರ ಹೃದಯದಲ್ಲಿ ಪರಿವರ್ತನೆಯೂ ಗಡಿಷ್ಠದ ಗೆಳೆತನ ಮಾಡಲು ಸಿದ್ಧರಾಗಿದ್ದೇವೆ.

ಅಮೇರಿಕನ್ನರು ತಮ್ಮ ಔದಾರ್ಯವನ್ನು ಹೀಗೆ ತೋರಿಸುತ್ತಿರುವಾಗ ಬ್ರಿಟಿಶರೂ ಅಮೇರಿಕನ್ನರೂ ಹಿಂದಿನ ಶತ್ರುಗಳಿಗಿಂತ ಹೆಚ್ಚು ಸಹಾನುಭೂತಿಯನ್ನು ತಮ್ಮಲ್ಲಿ ತೋರುವದಿಲ್ಲೆಂದು ರಶಿಯನ್ನರಿಗೆ ಅನಿಸುತ್ತದೆ. ತನ್ನ ಹಾಸಿಗೆಯಲ್ಲಿ ಮಲಗಿ ನೋಡಿ ಅದರಲ್ಲಿರುವ ಮುಳ್ಳು ಹೇಗಿದೆ ಯೆಂದು ಇವರೇಕೆ ಅರಿತುಕೊಳ್ಳಕೊಡದೆಂದು ಅವನು ಆಕ್ಷೇಪಿಸುತ್ತಾನೆ. ಅರ್ನೆಸ್ಟ್ ಬೆವಿನ್ನರು ಜರ್ಮನಿಯೊಡನೆ ಪ್ರಣಯಯಾಚನೆ ಮಾಡುವಲ್ಲಿ ಚರ್ಚಿಲ್ಲರನ್ನೂ ಮಿಗಿಸುತ್ತಿರುವದನ್ನು, ಅತ್ಯಂತ ನಾಚಿಕೆಗೇಡವಾದ ಆಸ್ಥೆಯಿಂದ ಸವನ್ನು ಕಳೆದುಕೊಂಡ ಗೆಳೆಯನಂತೆ ಕಾಣುತ್ತಿರುವದನ್ನು ಅವನು ಕೇಳುತ್ತಾನೆ. ಕೂಲಿಕಾರ ಸಮ್ಮೇಲನದಲ್ಲಿ ಬೆವಿನ್ನರು ಮೂರು ಬಾರಿ ಜರ್ಮನಿಯಿಂದ ಆಕ್ರಮಿಸಲ್ಪಟ್ಟ ಫ್ರೆಂಚರು ಹೇಳುವದನ್ನು ಅರಿತುಕೊಳ್ಳುವದು ಕಷ್ಟವಲ್ಲವೆಂದೂ ಆದರೆ ರಶಿಯನ್ನರು ಹೇಳುವದರ ಅರ್ಥವೇ ತಮಗಾಗುವದಿಲ್ಲೆಂದೂ ಹೇಳಿದ್ದನ್ನೂ ಅವನು ಓದುತ್ತಾನೆ.

ಸಾಲದ ಧೋರಣೆಯಲ್ಲಿ ಪಕ್ಷಪಾತ

ರಶಿಯಾವನ್ನು ಮತ್ತೆ ಸರಿಪಡಿಸುವವರಾರು? ರಶಿಯಾದಲ್ಲಿ ಸುಖಜೀವನದ ಕಳಹದಿ ಹಾಕಲು ಕಾಲು ಶತಮಾನಕ್ಕಿಂತಲೂ ಹೆಚ್ಚು ಕಾಲ ಹಿಡಿದು, ಈಗ ಪುನಃ ಮೊದಲಿಂದ ಪ್ರಾರಂಭಿಸಬೇಕಾಗಿರುವ ಲಕ್ಷಾಂತರ ರಶಿಯನ್ ಸ್ತ್ರೀ ಪುರುಷರ ಭಾರವನ್ನು ಕಡಿಮೆ ಮಾಡುವವರಾರು? ರಶಿಯನ್ನರಿಗೆ ಅಮೇರಿಕೆ ೧೦೦೦, ಕೋಟಿ ಡಾಲರ ಸಾಲ ಕೊಡುವೆನೆಂದಿತೆ? ಬದಲಿಗೆ ಬ್ರಿಟನ್ನಿಗೂ ಫ್ರಾನ್ಸಿಗೂ ಸಾವಿರಾರ್ ಕೋಟಿ ಡಾಲರು ಸಾಲ ಕೊಡದೇಕಾದಲೆ, ಅಲ್ಲಿ ಸೋವಿಯಟ್ ವಿರೋಧಿ ಶಕ್ತಿಗಳನ್ನು ಸಬಲವಾಗಿಡಲು ಅದೊಂದೇ ಹಾದಿಯೆಂದು ಮೊದಲು ಮಾತ್ರ ಮಾಡಿಕೊಳ್ಳಲಿಲ್ಲವೆ? ಇದರಿಂದ ರಶಿಯಾಕ್ಕೆ ಯುರೋಪ ಖಂಡದಲ್ಲಿ ವಿನಿಮಯ ವ್ಯಾಪಾರದಿಂದ ತನ್ನ ಸ್ಥಿತಿ ಸುಧಾರಿಸಿಕೊಳ್ಳಲು ಅಡ್ಡಿಯಾಗಲಿಲ್ಲವೆ?

ಇವೆಲ್ಲ ಮಿಥ್ಯಾರೋಪಗಳೆಂದು ನಾವನ್ನುತ್ತೇವೆ. ಆಂಗ್ಲೊ-ಅಮೇರಿಕನ್ ಯುದ್ಧೋಪಕರಣಗಳ ಸಾಮ್ಯಸಾಧನೆಯ ಎತ್ತುಗಡೆ, ಭೂಮಧ್ಯ ಸಮುದ್ರದಲ್ಲಿ ಅವರಿಬ್ಬರ ಜತೆ ನೌಕಾ ಪ್ರದರ್ಶನ, ಡಾರ್ಡನೆಲ್ಸ ಮತ್ತು ಇರಾನ ಎಣ್ಣೆಯ ಪ್ರಶ್ನೆಗಳಲ್ಲಿ ಇಬ್ಬರ ಜತೆ ಧೋರಣೆ, ಪರಮಾಣು ಬಾಂಬಿನ ವಿಷಯದಲ್ಲಿ ಉಭಯತರ ಜತೆಗುತ್ತಿಗೆ, ಇವೆಲ್ಲದರಲ್ಲಿ ಆಂಗ್ಲೋ ಅಮೇರಿಕನ್ ಕೂಟವಿಲ್ಲ, ಬರಿ ದಾಂಪತ್ಯಪೂರ್ಣ ಜತೆಗಾರಿಕೆ ಮಾತ್ರವಿದೆ, ಎಂದರೆ ರಶಿಯನ್ನರು ನಂಬುವದಿಲ್ಲ.

ಅದೇ ಪ್ರಕಾರ ಚಾಪ್ಲ್ಟೆಪೆಕ್ ಒಪ್ಪಂದದ ಮೂಲಕ ನಾವು ದಕ್ಷಿಣ ಮತ್ತು ಮಧ್ಯ ಅಮೇರಿಕೆಯ ರಾಷ್ಟ್ರಗಳೊಡನೆ ಸಂಧಿಯನ್ನೆ ಮಾಡಿಕೊಂಡಿದ್ದೇವೆ. ಇದೆಲ್ಲ ವಿಶ್ವಶಾಂತಿಯ ಹಿತದೃಷ್ಟಿಯಿಂದಲೆ. ನಮ್ಮ ನೆರೆಹೊರೆಯವರಿಗೆ ಯುದ್ಧ ಸಾಮುಗ್ರಿಗಳನ್ನೊದಗಿಸುತ್ತೇವೆ, ಅವರಿಗೆ ಸೈನಿಕ ಶಿಕ್ಷಣ ಕೊಡುತ್ತೇವೆ, ವ್ಯಾಪಾರಿ ಒಪ್ಪಂದ ಮೊದಲಾದ ಬಂಧನಗಳನ್ನಿಟ್ಟು ಸಾಲ ಕೊಡುತ್ತೇವೆ ಇದೂ ವಿಶ್ವಶಾಂತಿಗಾಗಿ.

ಆದರೆ ರಶಿಯನ್ನರು ಮಾತ್ರ ಪೋಲಂಡ್, ಝೆಕೊಸ್ಲೊವಾಕಿಯಾ, ಯುಗೋಸ್ಲಾವಿಯಾಗಳೊಡನೆ ಯುದ್ಧ ಸಾಮುಗ್ರಿಗಳ ಸಾಮ್ಯಸಾಧನೆಯ ವ್ಯವಸ್ಥೆ ಮಾಡಿದರೆ, ಅಥವಾ ಕೃಷಿ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡರೆ ಅದು "ಅಧಿಕಾರ ಲಾಲಸೆಯ" ಧೋರಣೆಯೇಕೆ ಆಗಬೇಕೆಂಬುದೀಗ ರಶಿಯನ್ನರಿಗೆ ತಿಳಿಯುವದಿಲ್ಲ. ಫಿನ್ಲಂಡನ್ನು ಸೋಲಿಸಿದ ಬಳಿಕ ಕೆರೇಲಿಯವನ್ನು ಕಿತ್ತುಕೊಂಡ ರಶಿಯಾದ ಕೃತಿ ಮಾತ್ರ ದುಷ್ಟ ಕಾರ್ಯವಾಗಬೇಕೇಕೆ, ದಿವ ಜಪಾನಿ ದ್ವೀಪಗಳ ವಿಶ್ವಸ್ತ ವಿಶ್ವ ಅಮೇರಿಕೆಗೆ ಸೇರಿದ್ದೆಂದು ಅಧ್ಯಕ್ಷ ಟ್ರೂಮನ್ ಪತ್ರಕರ್ತರನ್ನು ಕೇಳದೆ ಘೋಷಿಸಿದರೆ ಅದು ಹಿಂದೆ ಅಟ್ಲಾಂಟಿಕ ಘೋಷಣೆಗೆ ಅನುಗುಣ ಹೇಗೆ, ಇದು ರಶಿಯನ್ನರಿಗೆ ಅರ್ಥವಾಗದು.

ಪ್ರತಿಬಂಧಾಧಿಕಾರದ ಪ್ರಶ್ನೆ

ಪೂರ್ವ ಯುರೋಪಿನ ರಾಷ್ಟ್ರಗಳ ಮುಂಜಾಗ್ರತೆವನ್ನು ಯುಕ್ತ ರಾಷ್ಟ್ರ ಸಭೆಯಲ್ಲಿ ರಶಿಯಾ ಪಡಿಸುವದು ಪ್ರತಿಗಾಮಿ ಧೋರಣೆಯಾಗಿರುವಾಗ ಚೀನ, ದ. ಅಮೇರಿಕಾ, ಬ್ರಿಟಿಶ್ ಸಾಮ್ರಾಜ್ಯ ಈ ರಾಷ್ಟ್ರಗಳ ಮುಂದಾಳ್ತನವನ್ನು ಅಮೇರಿಕೆ ವಹಿಸುವದಷ್ಟೇ ಜಾಗತಿಕ ಸುಧಾರಣೆಗೆ ಹಿತಕಾರಿಯೇಕಾದೀತೆಂದೂ ರಶಿಯನ್ನರಿಗೆ ತಿಳಿಯುವದಿಲ್ಲ. ಯುಕ್ತ ರಾಷ್ಟ್ರ ಸಂಘ ಶಾಂತಿಯನ್ನು ಸ್ಥಾಪಿಸುವದೆಂದು ಅವನಿಗೆ ಭರವಸೆಯುಂಟು. ಆದರೆ ರಶಿಯಾಕ್ಕೆ ಭದ್ರತಾ ಮಂಡಳದಲ್ಲಿ ಪ್ರತಿಬಂಧಾಧಿಕಾರ ಇರುವದು ಅವಶ್ಯವೆಂದಾತನು ನಂಬುತ್ತಾನೆ. ಇಲ್ಲದಿದ್ದರೆ ಎಲ್ಲ ಮಹತ್ವದ ಪ್ರಶ್ನೆಗಳಲ್ಲೂ ರಶಿಯಾವನ್ನು ಧಿಕ್ಕರಿಸಿ ಯುರೋಪಿಯಾದಲ್ಲಿ ಅಧಿಕಾರದ ತಕ್ಕಡಿ ಹಿಡಿದ ತನ್ನ ಸ್ಥಾನಮಾನವನ್ನೆ ನಾಶಗೊಳಿಸಬಹುದೆಂಬ ಭಯ ಅವನಿಗಿದೆ. ಅಮೇರಿಕೆಯು ರಶಿಯನ್ನರ ಸ್ಥಿತಿಯಲ್ಲಿದ್ದರೆ ಅದೆಂದೂ ಪ್ರತಿಬಂಧಾಧಿಕಾರವನ್ನು ಬಿಟ್ಟು ಕೊಡಲಾರದೆಂದು ರಶಿಯನ್ನರ ಭಾವನೆ.

ರಶಿಯನ್ ಬುದ್ಧಿಯ ಕುತರ್ಕಕ್ಕೆ ಸೌದಿ ಅರೇಬಿಯಾದ ೪ ಲಕ್ಷ ಚೌ. ಮೈಲಿನ ಕಲ್ಲೆಣ್ಣೆಯನ್ನು ಶೋಷಿಸುವ ಗುತ್ತಿಗೆಯನ್ನು ಅಮೇರಿಕೆ ತೆಗೆದುಕೊಂಡದ್ದೂ ರಶಿಯಾದ ನೆರೆಯಲ್ಲಿರುವ ಮೆಸೊಪೊಟೇಮಿಯಾದ ಎಣ್ಣೆ ಗುತ್ತಿಗೆ ಬ್ರಿಟನ್ನಿಗಿರುವದೂ "ಜಗತ್ತಿನ ಕಚ್ಚಾ ಸಾಮುಗ್ರಿಗಳ ಸುಯೋಗ್ಯ ವಿತರಣೆ"ಕ್ಕೆ ಅನುಕೂಲವೆಂದು ತೋರುವದಿಲ್ಲ. ಅದರಿಂದ ಪೂರ್ವ ಏಶ್ಯಿಯಾದಲ್ಲಿಯೂ ಉತ್ತರ ಇರಾಣದಲ್ಲಿಯೂ ರಶಿಯನ್ನರು ಎಣ್ಣೆಯ ಸವಲತ್ತು ಕೇಳಿದಾಕ್ಷಣ ಅದು "ಕೆಂಪು ಸಾಮ್ರಾಜ್ಯವಾದ" ವೇಕಾಗಬೇಕೆಂದು ಅವನು ಕೇಳುತ್ತಾನೆ. ಸ್ವೀಡನ್ನು ರಶಿಯಾಕ್ಕೆ ಯಂತ್ರಗಳನ್ನು ಕೊಳ್ಳುವ ಬಗ್ಗೆ ಕಾಲವಿತ್ತರೆ ಅಮೇರಿಕೆಯ ವಿದೇಶ ಕಚೇರಿ ಕ್ರೋಧದಿಂದ ಪ್ರತಿಭಟಿಸುತ್ತದೆ. ಆದರೆ ತಾನು ಮಾತ್ರ ಚಿಯಾಂಗ ಕೈಶೇಕರ ಏಕಪಕ್ಷೀಯ ಸರಕಾರಕ್ಕೆ ಒಂದು ನೂರು ಕೋಟಿ ಪೌಂಡ ಕಡ ಒತ್ತಿ ಸಹಾಯವನ್ನು, ಅದೂ ಚೀನದಲ್ಲಿ ಅಂತರ್ಯುದ್ಧವಿರುವಾಗ, ಕೊಡುತ್ತದೆ. ಇವೆಲ್ಲ ಪ್ರಜಾತಂತ್ರಕ್ಕೆ ಪ್ರೋತ್ಸಾಹ, ಜಾಗತಿಕ ಆರ್ಥಿಕ ಸ್ಥಿರತೆಗೆ ಪೋಷಕವೆಂದು ಅವನ ತಲೆಗೆ ಹೊಳೆಯುವದಿಲ್ಲ.

ಹಿಂದೆ ಎಂದೂ ಪ್ರಜಾತಂತ್ರ ಇಲ್ಲದಿದ್ದ ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಅನಿರ್ಬಂಧ ಪ್ರಜಾತಂತ್ರಾತ್ಮಕ ಚುನಾವಣೆಗಳಾಗಬೇಕೆಂದು ಹಟತೊಟ್ಟ ಅಮೇರಿಕನ್ ವಿದೇಶ ಖಾತೆ ಸ್ವದೇಶಕ್ಕೆ ಹತ್ತಿರವಾದ (ದ. ಅಮೇರಿಕನ್) ರಾಷ್ಟ್ರಗಳ ವಿಷಯದಲ್ಲಿ ಇಂಥ ಯಾವ ನಿಷೇಧಪತ್ರವನ್ನೂ ಹೊರಡಿಸದೆ ಇರುವದು ವಿಚಿತ್ರವೆಂದೂ ಸಾಮಾನ್ಯ ರಶಿಯನ್ನನಿಗೆ ತೋರುತ್ತದೆ.

ಇಂಡೋನೇಶಿಯಾದ ವಿರುದ್ಧ ಸಹಾಯ

ಇಂಡೋಚೀನ ಮತ್ತು ಇಂಡೋನೇಶಿಯಾದ ಕೋಟ್ಯಂತರ ಪ್ರಜೆಗಳನ್ನು ಪುನಃ ಗೆದ್ದುಕೊಳ್ಳುವದಕ್ಕಾಗಿ ಅಮೇರಿಕೆಯ ಯುದ್ಧಸಾಮುಗ್ರಿಗಳೂ ವಿಮಾನಗಳೂ ಉಪಯೋಗಿಸಲ್ಪಟ್ಟಾಗ ಮತ್ತು ಆ ಬಡಪಾಯಿ ಪ್ರಜೆಗಳು ಪ್ರತ್ಯಕ್ಷವಾಗಿ ಪ್ರಾರ್ಥನೆ ಮಾಡಿಕೊಂಡಾಗ ಟ್ರೂಮನ್ ಸಾಹೇಬರು "ಜನಮತಗ್ರಹಣ", "ಅನಿರ್ಬಂಧ ಚುನಾವಣೆ"ಗಳಾಗಬೇಕೆಂದು ಪ್ರತಿಪಾದಿಸಬಹುದೆಂದು ರಶಿಯನ್ನರು ನಿರೀಕ್ಷಿಸುತ್ತಿದ್ದರು. ಆದರೆ ಟ್ರೂಮನ್ನರೇನೂ ಹೇಳಲಿಲ್ಲ. ಚೀನದಲ್ಲಿ "ಮೋಲ್ಲಿಬಾರಣೆಯುಳ್ಳ ಚುನಾವಣೆ"ಗಳಾಗಬೇಕೆಂದು ಚಿಯಾಂಗ ಕೈಶೇಕರಿಗೆ ಅಮೇರಿಕೆ ಹೇಳಲಿಲ್ಲ. ಹಿಂದೀ ಸಂಸ್ಥಾನಗಳ ಪ್ರಜೆಗಳಿಗೂ ಮಲಯಾದ ಸ್ತ್ರೀ ಪುರುಷರಿಗೂ ಆಫ್ರಿಕಾದ ವಸಾಹತುಗಳ ಮೂಲನಿವಾಸಿಗಳಿಗೂ ಮತಾಧಿಕಾರ ಕೊಡಬೇಕೆಂದೂ ಅಮೇರಿಕನ್ ವಿದೇಶಖಾತೆ ಬೆವಿನ್ನರಿಗೆ ಹೇಳಲಿಲ್ಲ. ಅದರಿಂದ ಅಮೇರಿಕೆಗೆ ನಿಜವಾದ ಪ್ರಜಾತಂತ್ರದಲ್ಲಿ ಆಸ್ಥೆಯಿಲ್ಲ, ರಶಿಯಾದ ಗೆಳೆಯರು ಪ್ರಬಲರಾಗಿರುವರಲ್ಲಿ ರಶಿಯಾದ ಶತ್ರುಗಳ ಹಿತರಕ್ಷಣೆಗಷ್ಟೇ ಅದು ಆತುರಪಡುತ್ತದೆ ಎಂಬದಾಗಿ ರಶಿಯನ್‌ರು ಬಗೆಯುತ್ತಾರೆ.

ಕೆಂಪು ಸೇನೆ ಪೂರ್ವ ಯುರೋಪಿಯನ್ನರಿಗೆ ಹಿಂದೆಂದೂ ಗೊತ್ತಿಲ್ಲದಷ್ಟು ಸಮಾನತೆಯನ್ನು ದೊರಕಿಸಿಕೊಟ್ಟಿದೆಯೆಂದು ರಶಿಯನ್ನನು ಹೇಳುತ್ತಾನೆ. ಪಾಶ್ಚಿಮಾತ್ಯ ಪದ್ಧತಿಯ ಪ್ರಜಾತಂತ್ರ ರೂಢಿಯಲ್ಲಿದ್ದ ದೇಶಗಳೆಂದರೆ ಫಿನ್ಲಂಡ ಮತ್ತು ಝೆಕೊಸ್ಲೊವಾಕಿಯಾ ಮಾತ್ರ— ಅವೆರಡೂ ದೇಶಗಳಿಂದ ರಶಿಯನ್ ಸೈನಿಕರು ಹಿಂತೆಗೆಯಲ್ಪಟ್ಟು ಅಲ್ಲಿನ ರಾಜಕಾರಣ ಸ್ಥಾನಿಕರ ಕೈಗೇ ಒಪ್ಪಿಸಲ್ಪಟ್ಟಿತೆಂಬದನ್ನು ಎಲ್ಲರೂ ಒಪ್ಪಬೇಕು.

ಅದ್ಭುತ ವಿಸಂಗತಿ

ರುಮೇನಿಯಾ, ಹಂಗೆರಿ, ಬಲ್ಗೇರಿಯಾಗಳಲ್ಲಿ ಅನೇಕ ಪ್ರಾಮಾಣಿಕ ದೇಶಪ್ರೇಮಿಗಳು ಮತ್ತು ಫ್ಯಾಸಿಸ್ಟ ವಿರೋಧಿಗಳು ಕೇವಲ ಕಮ್ಯುನಿಸ್ಟರೊಡನೆ ಭಿನ್ನಾಭಿಮತರಾದುದರಿಂದ ಅವರ ವಿರುದ್ಧ ಪಕ್ಷಪಾತ ಮಾಡಲಾಗುತ್ತಿದೆಯೆಂಬ ಸಂಗತಿ ರಶಿಯನ್ ಜನಸಾಮಾನ್ಯನಿಗೆ ಗೊತ್ತಿಲ್ಲ. ಗೊತ್ತಿದ್ದರೆ ಅವನು ಅವರಲ್ಲಿ ಸಹಾನುಭೂತಿ ತೋರುತಿದ್ದ. ಆದರೆ ಅದೇ ಉಸಿರಲ್ಲಿ ಅವನು ತನ್ನ ಏಶಿಯಾಟಿಕ್ ಸಹಜ ಕುತರ್ಕದಿಂದ, ಬಾಲ್ಕನ್ ಮತ್ತು ಪೋಲಂಡುಗಳಲ್ಲಿ ಪ್ರಜಾತಂತ್ರದ ಬೆಂಬಲಿಗರಾದ ಅಮೇರಿಕನ್ನರು ಅಮೇರಿಕೆಯ ಸಂಯುಕ್ತ ಸಂಸ್ಥಾನದ ಕೆಲ ದಕ್ಷಿಣ ಸಂಸ್ಥಾನಗಳಲ್ಲಿ "ಪೋಲ ತೆರಿಗೆ"ಯ ಮೂಲಕ ಅಲ್ಪಸಂಖ್ಯಾಕ ರಾಜ್ಯವನ್ನು ಶಾಶ್ವತವಾಗಿ ಸ್ಥಾಪಿಸಿರುವದರ ಕಡೆಗೆ ಲಕ್ಷ ಹೊರಳಿಸಿ ಪೂರ್ಣ ಅನಿರ್ಬಂಧ ಚುನಾವಣೆಗಳಾಗುವಂತೆ ಪ್ರಯತ್ನಿಸುವದು ಒಳಿತಲ್ಲವೇ ಎಂದು ಕೇಳುವದು ಖಂಡಿತ.

ಹೊಸ ಒಪ್ಪಂದಗಳು ಪೂರೈಸಲ್ಪಟ್ಟ ಕೂಡಲೆ ಕೆಂಪು ಸೇನೆ ಉಳಿದ ಆಕ್ರಮಿತ ಪ್ರದೇಶಗಳಿಂದ ಹಿಂತೆಗೆಯಲ್ಪಡುವದೆಂದು ಅವನು ನಂಬಿದ್ದಾನೆ. ಆ ದೇಶಗಳನ್ನು ರಶಿಯಾದ ಮೇಲೆ ದಾಳಿಗೆ ಉಪಯೋಗಿಸದಂತೆ ಫ್ಯಾಸಿಸ್ಟರನ್ನೂ ಅವರಲ್ಲಿ ಸಹಾನುಭೂತಿಯುಳ್ಳವರನ್ನು ನಿಶ್ಶೇಷ ಅಥವಾ ನಿರ್ಬಲರಾಗಿ ಮಾಡಲಾಗಿದೆಯೆಂದೂ ಅವನು ಅರಿತುಕೊಂಡಿದ್ದಾನೆ. ಜಮೀನದಾರರೂ ಬಂಡವಲುಗಾರರೂ ಈ ಗುಂಪಿಗೆ ಸೇರಿದವರೆಂದು—ತಪ್ಪಾಗಿರಬಹುದು—ಅವನು ನಂಬಿದ್ದು ಭೂಮಿಯನ್ನು ರೈತರಲ್ಲಿ ಹಂಚುವ ಮತ್ತು ಮುಖ್ಯ ಉತ್ಪಾದನ ಸಾಧನಗಳನ್ನು ಸರಕಾರ ವಶ ಮಾಡುವ ಮೂಲಕ ಆ ಪ್ರತಿಗಾಮಿಗಳ ನಾಶ ಸುಲಭವಾಗಿದೆಯೆಂದು ಎಣಿಸಿದ್ದಾನೆ.

ರಶಿಯಾದ ಹೊಣೆಯಿರುವಲ್ಲೆಲ್ಲ ಫ್ಯಾಸಿಝಂನ ನಾಶವಾಗುತ್ತಿದೆಯೆಂದು ತೃಪ್ತಿಗೊಂಡ ಅವನಿಗೆ ಇತರ ಕೊರತೆಗಳ ಚಿಂತೆಯಿಲ್ಲ. ಜ. ಮ್ಯಾಕಾರ್ಥರರನ್ನು ನಮ್ಮ ಚಿಕಾಗೋ ಟ್ರಾಯಬ್ಯೂನ ಪತ್ರಿಕೆ ಟೀಕಿಸುವದೆಷ್ಟು ಅಸಂಭವವೋ ಅಷ್ಟೇ ಮಾಸ್ಕೋ ಪತ್ರಿಕೆಗಳು ಈ ಕೊರತೆಗಳನ್ನು ಟೀಕಿಸುವದು ಅಸಂಭವ. ಆದರೆ ಅಮೇರಿಕನ್ನರ ಲೋಪದೋಷಗಳು ಅವನಿಗೆ ಚನ್ನಾಗಿ ಗೊತ್ತಿವೆ. ಅದರಿಂದ ಅವನಿಗೆ ಹ್ಲಿಗಾಬರಿಯೂ ಆಗುತ್ತದೆ. ಬ್ರಿಟಿಶ ಆಯುಧ ಬಲದಿಂದ ಎಡಪಕ್ಷಗಳನ್ನು ಹತ್ತಿಕ್ಕಿ ಖೊಟ್ಟಿ ಚುನಾವಣೆಗಳನ್ನು ನಡೆಸಿದ ಸರಕಾರಕ್ಕೆ ಗ್ರೀಸಿನಲ್ಲಿ ಅಮೇರಿಕನ್ ಬೆಂಬಲವುಂಟೆಂದೂ ಇದಕ್ಕೂ ಏಜಿಯನ್ ಸಮುದ್ರದಲ್ಲಿ ತನ್ನ ಪ್ರಭಾವವನ್ನು ಶಾಶ್ವತವಾಗಿಟ್ಟು ಕಪ್ಪು ಸಮುದ್ರದಲ್ಲಿ ಡಾಡೆನೆಲ್ಸ ಜಲಸಂಧಿಯಾಚೆಗೆ ರಶಿಯನ್ ಹಡಗು ಪಡೆಯನ್ನು ಬಂಧಿಸಬೇಕೆಂಬ ಬ್ರಿಟಿಶ ಮಹತ್ವಾಕಾಂಕ್ಷೆಗೂ ಏನೋ ಸಂಬಂಧವುಂಟೆಂದೂ ಅವನು ಅನುಮಾನಿಸುತ್ತಾನೆ. ಇದಕ್ಕಾಗಿ ಬ್ರಿಟಿಶರು ರಶಿಯಾದ ವಿರುದ್ಧ ಕ್ರಿಮಿಯನ್ ಯುದ್ಧ ಹೂಡಿದ ಹಳೆಯ ಇತಿಹಾಸವನ್ನು ಅವನು ಮರೆತಿಲ್ಲ.

ರಶಿಯಾದ ವಿರುದ್ಧ ಯುದ್ಧಕ್ಕೆ ಪ್ರೋತ್ಸಾಹ

ಅಮೇರಿಕನ್ ರಕ್ಷಣೆಯಲ್ಲಿ "ಮಹಾಶೂರ" ಇಟಾಲಿಯನ್ನರಿಗೂ ಜಪಾನಿಗಳಿಗೂ ರಶಿಯಾದ ವಿರುದ್ಧ ಬೊಬ್ಬಾಟವೆಬ್ಬಿಸಲು ಅವಕಾಶವಿದೆಯೆಂದು ಅವನಿಗೆ ಗೊತ್ತಿದೆ. ಅಮೇರಿಕಾ ವಿರೋಧಿ ಜಪಾನಿ ಸರಕಾರದೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳಲು ಅಮೇರಿಕೆ ಖಂಡಿತ ಒಪ್ಪಲಾರದಾದರೂ ರಶಿಯಾ ವಿರೋಧಿ ಸರಕಾರವನ್ನು ಅದು ಸ್ವಾಗತಿಸಬಹುದೆಂದೂ ಅವನಿಗೆ ಗೊತ್ತಿದೆ. ತನ್ನ ದೇಶದ ಪತ್ರಿಕೆಗಳಲ್ಲಿ ಅಮೇರಿಕೆಯ ಮೇಲೆ ಯುದ್ಧ ಹೂಡಬೇಕೆಂದು ಬರೆದುದನ್ನು ಅವನೆಂದೂ ನೋಡಿಲ್ಲ. ಆದರೆ ಅಮೇರಿಕನ್ ಪತ್ರಿಕೆಗಳಲ್ಲಿ ರಶಿಯಾದ ವಿರುದ್ಧ ಯುದ್ಧ ಹೂಡಬೇಕೆಂದು ಸೈನ್ಯಾಧಿಕಾರಿಗಳಂಥವರು ಕೂಡ ಒತ್ತಾಯಗೊಳಿಸಿ ಬರೆದ ಪತ್ರಗಳು ಬರುತ್ತಿರುವದನ್ನು ಕೇಳಿ ಅವನಿಗೆ ಶಾಂತಿಯಲ್ಲಿದ್ದ ಭರವಸೆ ಹಾರಿ ಹೋಗುವದು.

ಬದಲಿಗೆ ಗ್ರೀಸಿನಲ್ಲಿ ಖೊಟ್ಟಿ ಚುನಾವಣೆಗಳಾಗುತಿದ್ದಾಗ್ಗೆ ಅಥೆನ್ಸ ಬಳಿ ಅಮೇರಿಕನ್ ನೌಕಾಪಡೆಯ ಪ್ರದರ್ಶನ, ಡಾರ್ಡನೆಲ್ಸ ಬಗ್ಗೆ ಮಾಂಟ್ರೂ ಒಪ್ಪಂದದ ಪುನರ್ವಿಮರ್ಶೆಯಾಗಬೇಕೆಂದು ರಶಿಯಾ ತುರ್ಕಿಯನ್ನು ಕೇಳಿದೊಡನೆ ತುರ್ಕಿಯ ತೀರಕ್ಕೆ ಅಮೇರಿಕನ್ ಯುದ್ಧ ಹಡಗಿನ ಪ್ರೀತಿಪ್ರದರ್ಶನ ಇವುಗಳಿಂದ ಅವನು ಚಿಂತಾಕ್ರಾಂತನಾಗುತ್ತಾನೆ. ಡಾರ್ಡನೆಲ್ಸ ಆಡಳಿತೆಯಲ್ಲಿ ಅಮೇರಿಕೆಗೂ ಪಾಲು ಸಿಗದಿದ್ದರೆ ಅದು ಪೂರ್ಣ ತುರ್ಕಿಯ ಆಡಳಿತೆಯಲ್ಲಿ ಇರಬೇಕೆಂದು ಕೇಳುವ ಅಮೇರಿಕೆ ಪನಾಮಾ ಜಲಸಂಧಿಯ ಆಡಳಿತೆಯ ಬಗ್ಗೆ ಅದೇ ಬಗೆಯ ಘೋಷಣೆ ಹೊರಡಿಸಿದೆಯೋ ಎಂದು ಅವನು ಆತುರದಿಂದ ನೋಡಿ, ಅದನ್ನು ಕಾಣದೆ ಬೇಸರಗೊಳ್ಳುತ್ತಾನೆ.

ರಶಿಯಾದೊಡನೆ ಅಮೇರಿಕೆಯ ವಿವಾದ ಯುರೋಪ, ಮಧ್ಯಪೂರ್ವ, ದೂರ ಪೂರ್ವ ಪ್ರದೇಶಗಳನ್ನೆಲ್ಲ ವ್ಯಾಪಿಸಿದೆಯೆಂದೂ ಸಾಮಾನ್ಯ ರಶಿಯನ್ನನಿಗೆ ಗೊತ್ತಿದೆ. ಕೋರಿಯಾ ಜಪಾನುಗಳಲ್ಲಿ ಸಂಚರಿಸಿಬಂದ ಅಮೇರಿಕನ್ ಪ್ರತಿನಿಧಿ ಸಭಾ ಸದಸ್ಯರು "ಅಮೇರಿಕನ್ ನಿಯಂತ್ರಣಕ್ಕೊಳಗಾದ ಪ್ರದೇಶಗಳ ಮೇಲೆ ರಶಿಯನ್ ಅತಿಕ್ರಮಣದ ಭೀತಿಯಿದೆ"ಯೆಂದೆಚ್ಚರಿಸುವದನ್ನೂ ಅವನು ಕೇಳಿದ್ದಾನೆ. ಅಟ್ಲಾಂಟಿಕದಲ್ಲಿ, ಶಾಂತಸಾಗರದಲ್ಲಿ, ಫಿಲಿಪಾಯಿನದಲ್ಲಿ ಅಲಾಸ್ಕಾದಲ್ಲಿ ಅಮೇರಿಕೆ ಠಾಣೆಗಳನ್ನು ಕಟ್ಟುತಿರುವ ಸುದ್ದಿಯೂ ಅವನಿಗೆ ಬಂದಿದೆ. ಬ್ರಿಟಿಶರೊಡನೆ ಕೆಲ ಠಾಣೆಗಳ ಪಾಲುಗಾರಿಕೆ ಅಮೇರಿಕನ್ನರಿಗಿರುವದೂ ಅಲೂಶಿಯನ್‌ನಲ್ಲಿಯೂ ಉತ್ತರ ಧ್ರುವದಲ್ಲಿಯೂ ಅಮೇರಿಕನ್ ಆಕಾಶ ಪಡೆ ಪ್ರಯೋಗ ನಡೆಸಿದ್ದೂ "ಜಗತ್ತಿನ ಸಮಸ್ತ ರಾಷ್ಟ್ರಗಳ ಶಕ್ತಿಗಿಂತ ಮಿಗಿಲಾದ ನೌಕಾ ಮತ್ತು ವಿಮಾನ ಶಕ್ತಿಯನ್ನು" ಇಟ್ಟುಕೊಳ್ಳಲು ಅಮೇರಿಕೆ ನಿರ್ಧರಿಸಿದ್ದೂ ಅವನಿಗೆ ತಿಳಿದಿದೆ. ಅಮೇರಿಕೆಗೆ ಹತ್ತಿರವಾದ ಕಾನಡಾ ಮೆಕ್ಸಿಕೋ ದಕ್ಷಿಣ ಅಮೇರಿಕೆಗಳ ಸಂಬಂಧದಲ್ಲಿ ತನ್ನ ಸರಕಾರಕ್ಕೂ ಅಮೇರಿಕೆಗೂ ವಿವಾದವಿಲ್ಲವೆಂದು ಅರಿತ ಅವನು "ಅಮೇರಿಕೆಯ ನಿಯಂತ್ರಣಕ್ಕೊಳಗಾದ ಪ್ರದೇಶ"ಗಳೆನಿಸಿರುವ ಭಾಗವೆಲ್ಲ ಸೋವಿಯಟ್ ಗಡಿಯಲ್ಲೆ ಇರುವದನ್ನು ಕಂಡು ತನ್ನ ರಾಜ್ಯವನ್ನು ಸುತ್ತುಗಟ್ಟುವ ಪ್ರಯತ್ನ ನಡೆದಿದೆಯೆಂದು ಭಾವಿಸಿಕೊಳ್ಳುತ್ತಾನೆ. ಅಮೇರಿಕನ್ನರು ಮಾಡುವದೆಲ್ಲ ರಶಿಯಾದ ಭದ್ರತೆಗೆಂದು ಅವನ ದಡ್ಡಬುದ್ಧಿಗೆ ಹೊಳೆಯುವದಿಲ್ಲ!

ಈ ಪರಮಾಣು ಯುಗದಲ್ಲಿ ಠಾಣೆಗಳು, ಸೈನ್ಯಗಳು, ಸಂಧಿಗಳು, ನೌಕಾ ಪಡೆಗಳೇ ಮೊದಲಾದವು ನಿರರ್ಥಕವಾಗಿರುವಾಗ ಆಂಗ್ಲೋ ಅಮೇರಿಕನ್ನರು ಅವುಗಳಿಗೆ ಅಂಟಿಕೊಂಡಿರುವದು ತನ್ನ ಹಿತಕ್ಕಾಗಿಯೆಂದು ಅವನಿಗೆ ತಿಳಿಯುವದಿಲ್ಲ. ಇನ್ನೊಂದು ಮುಗ್ಗಟ್ಟು ಬಂದರೆ ಅಮೇರಿಕನ್ "ಗುತ್ತಿಗೆಗಾರ ಬಂಡವಲಿಗರು" ಫ್ಯಾಸಿಸ್ಟ ರಾಜ್ಯಗಳಿಗೆ ಬೆಂಬಲವಿತ್ತು ರಶಿಯಾದ ಮೇಲೆ ಯುದ್ಧಕ್ಕೆ ಬಂದು ಗೃಹರಂಗದ ಉಪದ್ರವದಿಂದ ಪಾರಾಗಲು ಹೆಣಗಲಿಕ್ಕಿಲ್ಲೆಂದು ಅವನು ನಂಬುವದಿಲ್ಲ.

ಅಮೇರಿಕೆಯ ಕೈಯಲ್ಲಿಂದು ಪೂರ್ವಾರ್ಧ ಗೋಲವನ್ನು ಹೇಳಹೆಸರಲ್ಲದಂತೆ ಮಾಡಲು ಬೇಕಾದಷ್ಟು ಅಣು ಬಾಂಬುಗಳಿವೆ. ಇದು ರಶಿಯನ್ನರಿಗೆ ಗೊತ್ತಿದೆ. ಹಿರೋಶಿಮದ ಮೇಲೆ ಅಣು ಬಾಂಬ ದಾಳಿಯಾದ ಸುದ್ದಿ ಬಂದಾಗ ನಾನು ಮಾಸ್ಕೋದಲ್ಲಿದ್ದೆ. ಅದನ್ನು ಕೇಳಿ ಜನರ ಮುಖದಲ್ಲಿ ಭೀತಿ ಸಂಚಾರವಾದುದನ್ನು ನಾನು ಕಂಡೆ. ಮೊಲಟೋವ ಮಹಾಶಯರಾದರೂ ಇದರಿಂದ ಭೀತರಾಗಿದ್ದಾರೆ. ರಶಿಯಾಕ್ಕೆ ಮೆಕ್ಸಿಕೋ ಮತ್ತು ಕಾನಡಾಗಳಲ್ಲಿ ಠಾಣೆಗಳಿದ್ದವೆಂದಿಟ್ಟುಕೊಳ್ಳೋಣ. ೨೦೦ ಕೋಟಿ ಟನ್ ಟಿಎನ್‌ಟಿ ಕೆಲವೊಂದು ಚಿಕ್ಕ ಬಾಂಬುಗಳಾಗಿ ಮಾಡಲ್ಪಟ್ಟದ್ದು ರಶಿಯಾದ ಕೈಲೇ ಇತ್ತೆಂದುಕೊಳ್ಳೋಣ. ಆಗ ಅಮೇರಿಕನ್ನರು ಭಯಗೊಳ್ಳುತ್ತಿರಲಿಲ್ಲವೆ?

ನಿಜವಾಗಿ ರಶಿಯಾದ ಅನೇಕ ನೀತಿಗಳು ನ್ಯಾಯವೇ ಆಗಿವೆ. ಕೆಂಪು ಸೇನೆಯಲ್ಲಿ ನೂರಕ್ಕೆ ೬೦ ರಷ್ಟನ್ನು ವಿಸರ್ಜಿಸಲು ಸಿದ್ಧವಾದ ರಶಿಯಾ ಯುದ್ಧ ಸನ್ನಾಹ ಮಾಡುತಿದೆಯೆಂದು ಯಾರೂ ನಂಬಲಾರರು. ಆದರೆ ರಶಿಯನ್ನರು ತಮ್ಮ ಪಕ್ಷವನ್ನು ಮಂಡಿಸುವ ರೀತಿ ಸರಿಯಾಗಿಲ್ಲ. ಅದರಿಂದಲೇ ಈ ಎಲ್ಲ ತಪ್ಪು ತಿಳುವಳಿಕೆ.

೫೦ ಪ್ರಶ್ನೆಗಳು



೫೦ ಪ್ರಶ್ನೆಗಳನ್ನು ಬರೆದು ಕವರದಲ್ಲಿಟ್ಟು ಸೀಲ್ ಮಾಡಿ ಕಳುಹಿಸಿದರೆ ದೇವೀ ಮಹಿಮೆಯಿಂದ ಉತ್ತರ ರೂಪದಲ್ಲಿ ಭವಿಷ್ಯ ಬರೆದು, ಅದೇ ನಿಮ್ಮ ಕವರನೊಂದಿಗೆ ರೂ. ೩ಕ್ಕೆ ವ್ಹಿ. ಪಿ. ಮೂಲಕ ಲಾಗುವದು.

ಸಿದ್ಧಾಂತಿ ಎಂ. ಆರ್. ಸುಬ್ಬಯ್ಯಾ
ನಂ. ೧೨, ಕೆಂಚನಾಯಕನಗಲ್ಲಿ
ಗಾಣಿಗರಪೇಟೆ, ಬೆಂಗಳೂರು ಸಿಟಿ

ಕರ್ಮವೀರ ಹರಿಜನ ಪುರವಣಿ

ದೀರ್ಘಾವಧಿಯ ನಂತರ

ಹಲವು ದಶಕಗಳ ಚಳವಳಿಯ ನಂತರ ಸ್ಥಳೀಯ ಉಪ್ಪಿನ ಮೇಲಿನ ಅಬಕಾರಿ ಕರ ಮತ್ತು ಆಯಾತಮಾಡಲ್ಪಡುವ ಉಪ್ಪಿನ ಮೇಲಿನ ಜಕಾತಿಯು ಈಗ ತೆಗೆದುಹಾಕಲ್ಪಟ್ಟಿತು. ನಮ್ಮ ದೇಶದಂಥ ಉಷ್ಣ ದೇಶದಲ್ಲಿ ಬಹು ಜನರು ಮನೆಗಳ ಹೊರಗೆ ಕೆಲಸ ಮಾಡುತ್ತಿರುವದರಿಂದ ಆಹಾರದಲ್ಲಿ ಉಪ್ಪು ಅತ್ಯಂತ ಅವಶ್ಯಕ ಪದಾರ್ಥಗಳಲ್ಲಿ ಒಂದಾಗಿದೆ. ಶ್ರೀಮಂತ ಮನುಷ್ಯನಿಗೆ ಹೆಚ್ಚು ಉಪ್ಪು ಬೇಕಾಗುವುದಿಲ್ಲ. ಅವರು ತಮ್ಮ ಆಹಾರವನ್ನು ಉಗಿಯಾಗಿ ಮಾರ್ಪಡಿಸಿಬಿಟ್ಟರೆ ಹಲ್ಲೆ ಕಾಯಿಗಳನ್ನು ಕಾಯ್ದುಡುವುದಕ್ಕಾಗಿ ಮಾತ್ರ ಅವರಿಗೆ ಏನಾದರೂ ಬೇಕಾಗಬಹುದು. ನಿಜವಾಗಿ ಉಳಿದದ್ದಾವುದೂ ಬೇಕಾಗುವದಿಲ್ಲ. ಆದರೆ ಯಾರು ತಮ್ಮ ಕೆಲಸಕ್ಕಾಗಿ ವಿಪರೀತ ಬೆವರು ಸುರಿಸಬೇಕಾಗುವದೊ ಅವರಿಗೆ ಮೈದೊಗಲು ಹೊರಗೆಸೆದುದನ್ನು ತುಂಬಿಕೊಳ್ಳುವುದಕ್ಕಾಗಿ ನೀರು ಮತ್ತು ಉಪ್ಪು ಅವಶ್ಯ ಬೇಕಾಗುತ್ತವೆ. ಆದುದರಿಂದ ಹಣದ ಮಾತನ್ನು ಬಿಟ್ಟುಗೊಟ್ಟರೂ ನಮ್ಮ ದೇಶದಲ್ಲಿಯ ಬಡ ಜನರಿಗೆ ಇದರಿಂದ ಬಹಳ ಕಠಿನ ಹೋಗುತ್ತಿದ್ದಿತು. ಕೇಂದ್ರ ಸರಕಾರದ ಮುಂಗಾಣಿಯ ಮೇಲೆ ೮ ಕೋಟಿ ರೂಪಾಯಿ ಹೆಚ್ಚಿನ ಭಾರ ಬೀಳುವದೇನೋ ನಿಜ. ಆದರೆ ಇದರಿಂದ ಜನತೆಗೆ ಆಗುತ್ತಿರುವ ಲಾಭ ಅಮೂಲ್ಯವಾಗಿದೆ.

ಜನಸಾಮಾನ್ಯರು ತಮ್ಮ ಕಷ್ಟ ತೊಂದರೆಗಳನ್ನು ಸಮರ್ಥವಾಗಿ ಪ್ರತಿಪಾದಿಸಲು ಶಕ್ತರಾಗದಿದ್ದಲ್ಲೆಲ್ಲ ಉಪ್ಪಿನ ಕರದಂಥ ಅಪ್ರತ್ಯಕ್ಷ ಕರ ಬಹಳ ಸುಲಭವಾಗಿ ಹೇರಲ್ಪಟ್ಟದುಂಟು. "ಕೂಗು ಕೇಳದಂತೆ ಕೋಳಿಯ ರೆಕ್ಕೆ ಕಿತ್ತುವದು," ಈ ರೀತಿಯಾಗಿ ಪರಕೀಯ ಆಡಳಿತದಲ್ಲಿ ಹಿಂದುಸ್ತಾನದಲ್ಲಿ ಅಪ್ರತ್ಯಕ್ಷ ಕರಗಳು ಸಾಮಾನ್ಯವಾಗಿ ಪರಿಣಮಿಸಿವೆ.

ಪ್ರತ್ಯಕ್ಷ ಕರಗಳು

ಹಿಂದುಸ್ತಾನ ಸರಕಾರದ ಮೊದಲನೆ ಹಿಂದೀ ಅರ್ಥಿಕ ಮಂತ್ರಿಗಳಾದ ಮಾನ್ಯ ಲಿಯಾಕತ ಅಲ್ಲಿಖಾನರು ಮಂಡಿಸಿದ ಮುಂಗಾಣಿಯಲ್ಲಿ ಸರಕಾರದ ಕಾರ್ಯಕಲಾಪಗಳ ಧೋರಣದಲ್ಲಿ ಅನೇಕ ಬದಲಾವಣೆಯ ಲಕ್ಷಣಗಳು ಕಂಡುಬಂದವು. ಉಪ್ಪಿನ ಕರವನ್ನು ರದ್ದುಪಡಿಸಿದ್ದನ್ನು ನಾವು ಈಗಾಗಲೇ ಉಲ್ಲೇಖಿಸಿದ್ದೇವೆ. ಇದರಿಂದ ಹಲವು ಪ್ರತ್ಯಕ್ಷ ಕರಗಳನ್ನು ಹೇರಬೇಕಾಯಿತು. ಪ್ರಜಾಪ್ರಭುತ್ವ ಸರಕಾರದಲ್ಲಿ ಪ್ರತ್ಯಕ್ಷ ಕರ ಅತ್ಯವಶ್ಯವಾಗಿವೆ. ವಿಶೇಷತಃ ಇಂಥ ಪ್ರಜಾಪ್ರಭುತ್ವದ ಪ್ರಾರಂಭಾವಸ್ಥೆಯಲ್ಲಿ ಇಂಥ ಕರಗಳು ಬೇಕೇ ಬೇಕು. ಅಪ್ರತ್ಯಕ್ಷ ಕರಗಳು ಜನತೆಗೆ ಎಂದೂ ಗೊತ್ತಾಗುವದಿಲ್ಲ. ಆದರೆ ಪ್ರತ್ಯಕ್ಷ ಕರಗಳು ಜನತೆಗೆ ಬೇಗ ಗೊತ್ತಾಗುವವು. ಆ ಬಗ್ಗೆ ಅವರಲ್ಲಿ ಜಾಗ್ರತಿಯುಂಟಾಗುವದು ಸದ್ಯದ ಮುಂಗಾಣಿಯಲ್ಲಿ ಹೇರಲ್ಪಟ್ಟ ಪ್ರತ್ಯಕ್ಷ ಕರಗಳ ಬಗ್ಗೆ ಜನತೆ ನಡೆಸಿದ ಕೋಲಾಹಲವನ್ನು ನೋಡಿದರೆ ಈ ಮಾತು ಸ್ಪಷ್ಟವಾಗುವದು. ಕರ ಕೊಡುವವರಲ್ಲಿ ಒಮ್ಮೆ ಜಾಗ್ರತಿಯುಂಟಾಯಿತೆಂದರೆ, ತಮ್ಮ ಸ್ವಂತ ಹಿತಸಂಬಂಧಗಳ ಮೇಲೆ ಪರಿಣಾಮವಾಗುವದರಿಂದ, ಸರಕಾರದ ರೀತಿ ನೀತಿಗಳನ್ನ ಪ್ರಶ್ನಿಸಲಾಗುತ್ತಿದೆಯಲ್ಲದೆ ಸಾರ್ವಜನಿಕ ಟೀಕೆಯನ್ನೂ ಸರಕಾರ ಎದುರಿಸಬೇಕಾಗುತ್ತದೆ. ಸರಕಾರದ ಕರ ಧೋರಣೆಯ ಸಂಬಂಧದಲ್ಲಿ ಪತ್ರಿಕೆಗಳು ಆಳವಾದ ಲಕ್ಷ್ಯ ಪೂರೈಸುತ್ತಿರುವದು ಶುಭಲಕ್ಷಣಗಳು. ಸಾರ್ವಜನಿಕ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಬಯಸುವ ಯಾವದೇ ಸರಕಾರ ಬೇರೆ ಯಾವ ಕಾರಣಕ್ಕಾಗಿಯೊದರೂ ಪ್ರತ್ಯಕ್ಷ ಕರಗಳನ್ನೇ ಹೇರುವ ಧೋರಣವನ್ನು ಸ್ವೀಕರಿಸತಕ್ಕದ್ದು. ಕರಭಾರವನ್ನು ಸಹಿಸಲು ಶಕ್ತರಾಗಿರುವವರ ಮೇಲೆಯೇ ಸರಕಾರ ಕರವನ್ನು ಹೇರಬೇಕಲ್ಲದೆ ಸಮಾಜದಲ್ಲಿ ಹೆಚ್ಚು ಗದ್ದಲ ಮಾಡದಿದ್ದ ಮೂಕ ಜನತೆಯ ಮೇಲೆ ಅರ್ಥಿಕ ಉಪಾಯಗಳಿಂದ ಭಾರ ಬೀಳದಂತೆ ನೋಡಿಕೊಳ್ಳತಕ್ಕದ್ದು.

ಸರಕಾರದ ಹಣಕಾಸಿನಲ್ಲಿ ಮುಂಗಾಣಿಯು ತಳಹದಿಯೆಂದರೆ ಬಳಿಕೆ. ಸಾರ್ವಜನಿಕರು ಬಳಿಕೆಯ ಅಂಕಿ ಸಂಖ್ಯೆಗಳನ್ನು ಹೆಚ್ಚು ದಕ್ಷತೆಯಿಂದ ವಿಮರ್ಶಿಸಬೇಕು, ಕರಗಳಿಗಿಂತಲೂ ಒಂದೊಮ್ಮೆ ಇವನ್ನು ಹೆಚ್ಚು ದಕ್ಷತೆಯಿಂದ ಪರಾಮರ್ಶಿಸಬೇಕು. ಸರಕಾರದವರು ಸೂಚಿಸಿದ ಬೇರೆಬೇರೆ ಬಳಿಕೆಯ ಅಂಕಿ ಸಂಖ್ಯೆಗಳಿಗೆ ಜನತೆ ಒಪ್ಪಿದೆಯೆಂದ ಬಳಿಕ ಆ ಯೋಜನೆಗಳಿಗೆಲ್ಲ ಬೇಕಾಗುವ ಹಣವನ್ನು ಪೂರೈಸಿ ಕೊಡುವದು, ಅದರ ಕರ್ತವ್ಯವೆ ಆಗಿದೆ. ಅದ್ದರಿಂದ ಸರಕಾರದ ಅಂದಾಧುಂದಿ ವೆಚ್ಚವನ್ನು ನಿಯಂತ್ರಿಸಲು ಪ್ರತ್ಯಕ್ಷ ಕರಗಳು ಒಂದು ಬಗೆಯಿಂದ ಸಾಧನಗಳಾಗಿವೆ. ಸರಕಾರ ತಾನು ವೆಚ್ಚಮಾಡುತ್ತಿರುವ ಪ್ರತಿಯೊಂದು ರೂಪಾಯಿಯ ೧೯೨ ಪೈಗಳು ಜನತೆಗೇ ದೊರೆಯುತ್ತಿವೆಂಬ ಬಗ್ಗೆ ಮೊಟ್ಟಮೊದಲು ಜನತೆಯನ್ನು ಅದು ಸಮಾಧಾನಪಡಿಸಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಸದ್ಯದ ಮುಂಗಾಣಿಯು ಆ ವರೆಗೆ ಹತ್ತುವದೊ ಇಲ್ಲವೊ ನಮಗೆ ಸಂಶಯ. ಅದರ ಬಳಿಕೆಯೀಗ ೩೨೮ ಕೋಟಿ ರೂಪಾಯಿಗಳಿಗೇರಿದೆ. ಅಂದರೆ ಯುದ್ಧಪೂರ್ವದ ನಾಲ್ಮಡಿ ಈಗ ವೆಚ್ಚವಿದೆ. ಅತಿ ಪ್ರಸರಣದ ಪರಿಣಾಮವನ್ನು ಲಕ್ಷ್ಯದಲ್ಲಿ ಹಿಡಿದರೂ ವೆಚ್ಚ ಇಮ್ಮಡಿಯೆಂದು ಹಿಡಿಯಬೇಕಾಗುವದು. ಹೀಗಿರುವಾಗ ವೆಚ್ಚವನ್ನು ಕಡಮೆ ಮಾಡುವ ಯೋಜನೆಗಳನ್ನು ಕೈಕೊಳ್ಳಿರೆಂದು ಸರಕಾರಕ್ಕೆ ಕೇಳಿಕೊಳ್ಳುವದು ನ್ಯಾಯ್ಯವಾಗಿ ತೋರುತ್ತದೆ. ಸರಕಾರದ ಕಚೇರಿಗಳು ತೀರ ಭಾರದ್ದಾಗಿರುವವೆಂದು ತೋರುತದೆ. ಕರಕೊಡುವವನು ಅಪೇಕ್ಷಿಸುವಷ್ಟು ಪ್ರತಿಫಲ ಈ ವೆಚ್ಚದಿಂದ ಮರಳಿ ದೊರೆಯುವದಿಲ್ಲೆಂಬುದು ಸ್ಪಷ್ಟ. ಸರಕಾರದ ಪ್ರತಿಯೊಬ್ಬ ನವಕರ ತನಗೆ ದೊರೆಯತಕ್ಕ ಸಂಬಳಕ್ಕಾಗಿ ಪ್ರತಿ ದಿನ ೮ ಗಂಟೆ ಕೆಲಸ ಮಾಡುವನೊ ಇಲ್ಲವೊ ಎಂಬ ಪ್ರಶ್ನೆಯ ವಿಚಾರ ಮಾಡಿದ್ದಾದರೆ ಸೂಚಿತವಾದ ಅರ್ಥಿಕ ಸಮಿತಿಯ ನೇಮಕವು ಶುಭ ಲಕ್ಷಣವೆ ಸೈ; ಇನ್ನಷ್ಟು ದಕ್ಷವ್ಯವಸ್ಥೆಯಿಂದ ಕೆಲಸದ ಪರಿಮಾಣವನ್ನು ಕಡಮೆ ಮಾಡುವದು ಶಕ್ಯವಿದೆಯೆ ಎಂಬದನ್ನು ಈ ಸಮಿತಿಯು ವಿಚಾರ ಮಾಡಿದ್ದಾದರೆ ಅದರ ನೇಮಕವು ಸಾರ್ಥವಾಗಬಹುದು.

ಆದರೂ ಒಟ್ಟಾರೆ ಅರ್ಥಸಚಿವರು ತಮ್ಮ ಮುಂಗಾಣಿ ಸೂಚನೆಗಳಲ್ಲಿ ಸಾಮಾಜಿಕ ಧ್ಯೇಯ ಧೋರಣೆಗಳ ವಿಚಾರ ಮಾಡಲು ಪ್ರಯತ್ನಿಸಿದ್ದಕ್ಕಾಗಿ ಅಭಿನಂದನೀಯರಾಗಿರುವರು. ಈ ಅಲ್ಪಾರಂಭವು ರಾಷ್ಟ್ರವೆಂದು ನಾವಿಟ್ಟುಕೊಂಡ ಧ್ಯೇಯ ಸಾಧನೆಗೆ ಸಹಾಯಕವಾಗಲಿ; ಮತ್ತು ಏನಿಲ್ಲೆಂದರೂ ಉಪವಾಸ ಬಳಲುವ ಮತ್ತು ಅರೆಬತ್ತಲೆ ಜನರಿಗೆ ಜೀವನಾವಶ್ಯಕ ಪದಾರ್ಥಗಳನ್ನು ಒದವಿಸಿ ಕೊಡುವಲ್ಲಿ ಸಮರ್ಥವಾಗಲಿ.

ರೂಪಾಯಿಗೆ ಸ್ವರಾಜ್ಯ

ರೂಪಾಯಿ ಪೌಂಡಿನೊಡನೆ ಕಟ್ಟಿಕೊಂಡ ಕಾಳಿಯನ್ನು ಹರಿದುಕೊಂಡದ್ದರಿಂದ ಕಟ್ಟಕಡೆ ಮತ್ತೊಂದು ಸುಧಾರಣೆ ಅಮಲಿನಲ್ಲಿ ಬಂದಂತಾಯಿತು. ನಮ್ಮನ್ನು ರಸಾತಳಕ್ಕಿಳಿಸುವಂಥ ಶೀಸಕಡ್ಡಿಯ ಮತ್ತೊಂದು ತುದಿಯಲ್ಲಿ ನಮ್ಮ ಜೀವನ ರೇಷೆ ಜೋಡಿಸಲ್ಪಟ್ಟದ್ದರೆ ಆ ಜೀವನ ರೇಷೆಯ ಸಂಬಂಧವನ್ನು ಕಡೆದುಕೊಳ್ಳುವದು ಜಾಣತನದ್ದಾಗುವದೆಂಬ ಕಾಲವೊಂದಿದೆ. ನಮ್ಮ ರೂಪಾಯಿಗೆ ಮೇಳ ಹಾಕಲ್ಪಟ್ಟರುವ ಪೌಂಡು ಸುವರ್ಣ ಪರಿಮಾಣವನ್ನು ಬಿಟ್ಟುಗೊಟ್ಟದೆ. ಮತ್ತು ಕೆಲ ವರ್ಷಗಳಲ್ಲಿ ಶೀಸಿನ ಹೊರತು ಬೇರೆ ಯಾವ ಧಾತುವೂ ಇಲ್ಲೆಂಬುದಾಗಿ ಸಿದ್ಧವಾಗಿಬಿಟ್ಟದೆ. ಆದುದರಿಂದ ನಮ್ಮ ಕೊರಳಲ್ಲಿ ಬಿದ್ದಿರುವ ಈ ದೀಸೂಕಲ್ಲಿನಿಂದ ಮುಕ್ತರಾಗುವ ಸಮಯವೀಗ ಬಂದಿದೆ. ಸ್ವತಂತ್ರ ಚಲನನಾಣ್ಯವೆಂದು ರೂಪಾಯಿಯು ಭದ್ರ ತಳಹದಿಯಲ್ಲಿ ಸ್ಥಾನಾಪನ್ನವಾಗುವದೆಂದು ನಂಬಲಾಗಿದೆ. ಅನೇಕ ಸಂದರ್ಭಗಳಲ್ಲಿ ವರುಷಕ್ಕೊಂದೇ ಸಲ ಸುಗ್ಗಿಯಾಗುತ್ತಿರುವ ಒಕ್ಕಲತನದ ರಾಷ್ಟ್ರದಲ್ಲಿ ಒಕ್ಕಲಿಗನಿಗೆ ತನ್ನ ಕೊಳ್ಳುವ ಶಕ್ತಿಯನ್ನು ಸುಸ್ಥಿರಮಾಡಿಟ್ಟುಕೊಳ್ಳಬೇಕಾಗುತ್ತದೆ. ಈ ಕೊಳ್ಳುವ ಶಕ್ತಿ ಸುಗ್ಗಿಯ ನಂತರವೆ ಅವನಿಗೆ ಬರುತ್ತದೆ. ಪರದೇಶದ ತೇಜೀಮಂದಿಯಿಂದ ಆಕಸ್ಮಾತ್ತಾಗಿ ಬರುವ ಹಾನಿಗಳಿಂದ ಒಕ್ಕಲಿಗ ಕಷ್ಟಸಹಿಸಬಾರದಾಗಿದ್ದರೆ ಈ ಹನ್ನೆರಡು ತಿಂಗಳ ಕ್ರಯಶಕ್ತಿಯನ್ನು ಅವನು ಸ್ಥಿರಪಡಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ನಾವು ನಮ್ಮ ನಾಣ್ಯವನ್ನು ಬಹಳಮಟ್ಟಿಗೆ ಪೀತಧಾತುವಿನಲ್ಲಿಡುವದು ಉಪಯುಕ್ತವೆಂದೆನಿಸುತ್ತದೆ. ಸ್ಟರ್ಲಿಂಗ ಶಿಲಕುಗಳ ಸಂಬಂಧದಲ್ಲಿ ನಡೆದ ಮಾತುಕತೆಗಳು ಯಶಸ್ವಿಯಾಗಿ ನಮ್ಮ ಬಂಗಾರವೆಲ್ಲ ಮರಳಿ ನಮ್ಮ ದೇಶಕ್ಕೆ ಬಂದದ್ದಾದರೆ ಆ ಶಿಲಕನ್ನು ನೋಟುಗಳ ಬೆಂಬಲಕ್ಕಾಗಿ ಉಪಯೋಗಿಸಿಕೊಂಡದ್ದಾದರೆ ವಿಹಿತವೇ ಆಗುವದು.

೧೯೩೪ ನೇ ಇಸ್ವಿಯ ರಿಝರ್ವ ಬ್ಯಾಂಕ ಕಾಯದೆಯಲ್ಲಿ ಮಾಡಲಿರುವ ಸದ್ಯದ ತಿದ್ದುಪಡಿಗಳು ೪೦ ಮತ್ತು ೪೧ ನೇ ಕಲಮುಗಳಲ್ಲಿ ಈ ಬದಲಾವಣೆಗಳನ್ನು ಸೂಚಿಸುತ್ತದೆ. ಕಲಮು ೩೩ ಉಪ ಕಲಮು ೨ ರಲ್ಲಿ ನೋಟುಗಳ ಬೆಂಬಲದ ವಿಷಯವು ಚರ್ಚಿತವಾಗಿದೆ. ನಮ್ಮ ನೋಟುಗಳಿಗೆ ಬೆಂಬಲಕ್ಕಾಗಿ ಸ್ಟರ್ಲಿಂಗ ಸೆಕ್ಯೂರಿಟಿಗಳನ್ನು ಸ್ವೀಕರಿಸುವಂತೆ ಈ ಕಲಮುಗಳಲ್ಲಿ ಯೋಗ್ಯ ಮಾರ್ಪಾಡುಗಳನ್ನೂ ಮಾಡಬಹುದಾಗಿದೆ. ಈ ಕಲಮಿನ ದುರುಪಯೋಗವೆ ನಮ್ಮ ದೇಶದ ಚಲನ ಧೋರಣದಲ್ಲಿ ಅತಿಪ್ರಸರಣವಾಗಲು ಮುಖ್ಯ ಕಾರಣವಾಗಿದೆ. ಆದುದರಿಂದ ಈ ವಿಷಯಗಳೆಲ್ಲ ಚರ್ಚಿತವಾಗುತ್ತಿರುವಾಗಲೆ ಪೂರ್ಣವಾಗಿ ಎಲ್ಲ ಮಾರ್ಪಾಡುಗಳನ್ನು ಮಾಡುವದಾಗಿ ನಂಬಲಾಗಿದೆ.

ಸರಕಾರದಲ್ಲಿ ರಾಷ್ಟ್ರೀಯತೆಯ ಲಕ್ಷಣಗಳು ಕಾಣಬರುವ ಈ ಸಮಯದಲ್ಲಿ ಕರಧೋರಣೆಗಳಲ್ಲಿ ಮತ್ತು ಮೂರನೆ ವರ್ಗದ ಪ್ರವಾಸಿಕರತ್ತ ಗಮನ ಕೊಡುವದೇ ಮೊದಲಾದ ಸುಧಾರಣೆಗಳಲ್ಲಿ ಬಡಮನುಷ್ಯನ ಅಸ್ತಿತ್ವವನ್ನು ಲಕ್ಷಿಸಲಾಗುತ್ತಿರುವಲ್ಲಿ ಅರುಣೋದಯವನ್ನು ನಾವು ನೋಡುತ್ತೇವೆ. ಇವೆಲ್ಲ ಸುಧಾರಣೆಗಳು ಎಂದೋ ಆಗಬೇಕಾಗಿದ್ದುವು. ಈ ಸುಧಾರಣೆಗಳು ಭಾವೀ ಅನೇಕ ಸುಧಾರಣೆಗಳ ಅಗ್ರಗಾಮಿಗಳಾಗಲೆಂದು ಹಾರೈಸುತ್ತೇವೆ.

ರೇಲ್ವೆ ಪ್ರವಾಸ

ಮಾನವರಿಗೆ ಪ್ರವಾಸ ಯೋಗ್ಯವಾಗುವಂತೆ ರೇಲ್ವೆ ಡಬ್ಬಿಗಳಲ್ಲಿ ಮಾರ್ಪಾಡುಗಳನ್ನು ಮಾಡಲಾಗುತ್ತದೆಂಬುದನ್ನರಿಯಲು ನಾವು ಸಂತೋಷಿಸುತ್ತೇವೆ. ಮೂರನೇ ವರ್ಗದ ಡಬ್ಬಿಗಳಲ್ಲಿ ವಿಶೇಷತಃ ಹೆಣ್ಣುಮಕ್ಕಳಿಗೆಂದು ಕಾಯ್ದಿಟ್ಟ ಡಬ್ಬಿಗಳಲ್ಲಿ ಪ್ರವಾಸಿಕರು ತಮ್ಮ ಗಂಟು ಗದಡಿಗಳ ಮೇಲೆಯೆ ಕೈಕಾಲುಗಳನ್ನು ಅಲ್ಲಾಡಿಸಬೇಕಾಗುತ್ತದೆ ಮತ್ತು ಜೇನ್ನೊಣಗಳು ಜೇನುಹುಟ್ಟಿನಲ್ಲಿ ಮುಕರಿದಂತೆ ಒಬ್ಬರಮೇಲೊಬ್ಬರು ಕೂಡ್ರಬೇಕಾಗುತ್ತದೆ. ಹೊರಗೆ ನಿಂತವರು ತಮ್ಮ ಅಪ್ತೇಷ್ಟರು ಬೆವರು ಸುರಿಸುತ್ತಿರುವದು ಮಾತ್ರ ಕಿಡಕಿಯೊಳಗಿಂದ ಕಾಣಿಸುತ್ತಿದೆಯಲ್ಲದೆ ಬೇರೆ ಯಾವುದನ್ನೂ ಅವರು ನೋಡಲಾರರು. ಪರಿಸ್ಥಿತಿ ಹೀಗಿರುವಾಗ ಮೂರನೇ ವರ್ಗದ ಡಬ್ಬಿಗಳಲ್ಲಿ ಮಾರ್ಪಾಡು ಮಾಡುವದರಲ್ಲಿ ತೋರಿಸುತ್ತಿರುವ ಗಮನವನ್ನು ಗಾಡಿಗಳಲ್ಲಿ ಹೆಣ್ಣುಮಕ್ಕಳ ಮತ್ತು ಮಕ್ಕಳ ಅವಶ್ಯಕ ಸುಖ ಸೌಕರ್ಯಗಳ ಕಡೆಗೂ ಕೊಡಲಾಗುವದೆಂದು ನಂಬಲಾಗಿದೆ.

ವಿಮಾನಗಳಲ್ಲಿ— ಒಂದನೇ ವರ್ಗಕ್ಕಿಂತ ಹೆಚ್ಚಿನ ವರ್ಗದ ಪ್ರಯಾಣದಲ್ಲಿ— 'ಯಜಮಾನಿ'ಯೊಬ್ಬಳಿರುವಳು. ಸಮೀಚೀನ ಭೋಜನ ಮಾಡಿದ ಶ್ರೀಮಂತ ಪ್ರವಾಸಿಕನ ಸುಖ ಸೌಕರ್ಯಗಳನ್ನು ನೋಡುವುದಕ್ಕಾಗಿ ಪ್ರತಿ ಅರ್ಧಗಂಟೆಗೊಮ್ಮೆ ಅವಳು ಸುತ್ತಲೆಲ್ಲ ಅಡ್ಡಾಡಿ ಬಿಸಿ ಕಾಫಿಯನ್ನು ಅವನಿಗೆ ಕೊಡುವದುಂಟು. ಅವನ ಶಾರೀರಿಕ ಸುಖ ಸೌಕರ್ಯಗಳನ್ನೂ ಅವಳು ಗಮನಿಸುವಳು. ಮೂರನೇ ವರ್ಗದ ಹೆಣ್ಣುಮಕ್ಕಳ ಡಬ್ಬಿಯಲ್ಲಿ ಸುವ್ಯವಸ್ಥೆ ಮತ್ತು ಸ್ವಚ್ಛತೆಯ ಸ್ವಲ್ಪಾದರೂ ಲಕ್ಷಣ ಕಾಣುವಂತೆ ನೋಡಿಕೊಳ್ಳಲು ಇಂಥ ಒಬ್ಬಳಾದರೂ ಸುಶಿಕ್ಷಿತ 'ಯಜಮಾನಿ' ಇದ್ದರೆ ಬಹಳ ಚೆನ್ನಾಗುವದು.

—ಜಿ. ಸಿ. ಕುಮಾರಪ್ಪ

ನೈಜವಾದ ಭಯ

[ಟಿ. ಎನ್. ಜಗದೀಶನ್]

ಮಹಾರೋಗದ ಆಸ್ಪತ್ರೆಯಿದ್ದ ವಿಭಾಗದಲ್ಲಿಯ ಜನರು ಇಂಥ ಆಸ್ಪತ್ರೆಗಳಿಂದ ತಮ್ಮ ವಿಭಾಗದಲ್ಲಿ ಮಹಾರೋಗ ಹೆಚ್ಚಾಗುವದೆಂದು ಭಾವಿಸುವದುಂಟು. ಇವರು ಅನೇಕ ಸಲ ತಮ್ಮ ವಿಭಾಗದಿಂದ ಆಸ್ಪತ್ರೆಯನ್ನು ಕಿತ್ತಿ ದೂರ ಎಲ್ಲಿಯಾದರೂ ಒಯ್ಯಬೇಕೆಂದು ಸರಕಾರಕ್ಕೆ ಅರ್ಜಿ ಹಾಕುವರು. ನಾನು ಮತ್ತು ಮಹಾರೋಗದ ಸುಪ್ರಸಿದ್ಧ ತಜ್ಞರಾದ ಡಾ. ಆರ್. ಜಿ. ಕೋಚರಾಣಿಯವರು ರಾಮಚಂದ್ರಪುರಂದ ಮಹಾರೋಗದ ಆಸ್ಪತ್ರೆಗೆ ಭೆಟ್ಟಿ ಕೊಟ್ಟಾಗ ರಾಮಚಂದ್ರಪೂರದ ನಿವಾಸಿಗಳಲ್ಲಿ ಆಸ್ಪತ್ರೆಯಿಂದಲೇ ಪಟ್ಟಣದಲ್ಲಿ ಮತ್ತೂ ಅದರ ಸುತ್ತಲಿನ ಪ್ರದೇಶದಲ್ಲಿ ಮಹಾರೋಗ ಹಬ್ಬುತ್ತಿದೆಂದು ಭಯಗೊಂಡದ್ದು ಕಂಡುಬಂದಿತು. ನಾವು ಈ ಪ್ರಶ್ನೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿ, ಸಾರ್ವಜನಿಕ ಸಭೆ ಕರೆದು, ಮಹಾರೋಗವು ಒಮ್ಮೆಲೇ ಅಂಟುವದಿಲ್ಲ, ಬಾಲ್ಯದಲ್ಲಿ ಅಥವಾ ಮಹಾರೋಗಿಯ ನಿಕಟ ಮತ್ತು ನಿರಂತರ ಸಂಬಂಧದಿಂದ ಮಾತ್ರ ಉಂಟಾಗುತ್ತದೆ, ಮಹಾರೋಗಿಗಳನ್ನು ಪ್ರತ್ಯೇಕವಾಗಿ ಇಡುತ್ತಿದ್ದ ಆಸ್ಪತ್ರೆಯಿಂದ ಜನರಿಗೆ ಕಲ್ಯಾಣವೇ ಆಗುವದು ಎಂದು ತಿಳಿಸಿ ಹೇಳಿದೆವು. ಆಸ್ಪತ್ರೆಯಿಂದ ಮಹಾರೋಗ ಉಂಟಾಗದೆ, ಮಹಾರೋಗ ಪಿಡುಗು ಇದ್ದುದರಿಂದ ಆ ಪ್ರದೇಶದಲ್ಲಿ ಆಸ್ಪತ್ರೆ ಬಂದಿದೆಂಬುದನ್ನು ಸಾರ್ವಜನಿಕರು ಮರೆಯುತ್ತಾರೆ. ರಾಮಚಂದ್ರಪೂರದ ಆಸ್ಪತ್ರೆಯ ಮೂಲವು ಬೋಧಪ್ರದವೂ ಸ್ಫೂರ್ತಿದಾಯಕವೂ ಆಗಿದೆ. ಸುಮಾರು ೫೦ ವರ್ಷಗಳ ಹಿಂದೆ ಕು. ಹ್ಯಾಚ್ ಎಂಬ ಕೆನಡಾದ ಪಾದ್ರಿಯೋರ್ವಳು ಈ ಪಟ್ಟಣದಲ್ಲಿರುತ್ತಿದ್ದಳು. ತನ್ನ ಆಳುಗಳಲ್ಲಿ ಒಬ್ಬನಿಗೆ ಮಹಾರೋಗವಿದ್ದದ್ದು ಇವಳಿಗೆ ಕಂಡುಬಂದಿತು. ಮೊದಲು ಮೊದಲು ಭಯವೆನಿಸಿ, ಅವನನ್ನು ಕೆಲಸದಿಂದ ತೆಗೆದೊಗೆಯಬೇಕೆಂದು ಇವಳು ನಿಶ್ಚಯಿಸಿದಳು. ಆದರೆ ಕಾರುಣ್ಯಪೂರ್ಣಳಾದ ಅವಳು ಹಾಗೆ ಮಾಡಲು ಅನುಮಾನಿಸಿ ಆಳಿನ ಪೂರ್ವೇತಿಹಾಸವನ್ನು ಕೇಳಿಕೊಂಡಳು. ಕಷ್ಟದಾಯಕ ಮತ್ತು ಹೃದಯವಿದ್ರಾವಕ ಕತೆಯೊಂದನ್ನು ಅವಳು ಕೇಳಿಕೊಂಡಳು. ಮಹಾರೋಗದ ಸಲುವಾಗಿ ಈ ಆಳಿನ ಅಣ್ಣನೊಬ್ಬನು ಆತ್ಮಹತ್ಯೆ ಮಾಡಿಕೊಂಡಿದ್ದನು. ಇನ್ನೊಬ್ಬನು ಮಹಾರೋಗ ಹತ್ತಿತೆಂದು ಹುಚ್ಚನಾಗಿದ್ದನು, ಮೂರನೆಯವನು ಅದೇ ಕಾರಣಕ್ಕಾಗಿ ದೇಶಾಂತರ ಹೋಗಿದ್ದನು. ಕು. ಹ್ಯಾಚ್‌ಳಿಗೆ ಅವನನ್ನು ಕೆಲಸದಿಂದ ತೆಗೆದೊಗೆಯಲು ಮನಸ್ಸಾಗಲಿಲ್ಲ. ಅವನು ತನ್ನ ಸಹೋದರರ ಮಾರ್ಗವನ್ನೆ ಅನುಸರಿಸಬಹುದೆಂದು ಅವಳು ಭಯಗೊಂಡಳು. ಅವಳಲ್ಲಿ ಭೂತದಯೆ ಹುಟ್ಟಿತು. ಅದರ ಪ್ರೇರಣೆಯಿಂದಲೇ ಅವಳು ಕಾರ್ಯವನ್ನಾರಂಭಿಸಿದಳು. ತನ್ನ ತೋಟದಲ್ಲಿ ಅವಳು ಆಳಿಗೊಂದು ಗುಡಿಸಲವನ್ನು ಕಟ್ಟಿಕೊಟ್ಟು ಅವನಿಗೆ ಆಹಾರಾದಿಗಳನ್ನು ಒದಗಿಸಿಕೊಟ್ಟಳು. ಅಂದಿನಿಂದಲೇ ಅವಳಲ್ಲಿ ಮಹಾರೋಗದ ಬಗ್ಗೆ ಜಿಜ್ಞಾಸೆ ಉಂಟಾಯಿತು. ಹೆಚ್ಚೆಚ್ಚು ಮಹಾರೋಗಿಗಳು ಅವಳ ದೃಷ್ಟಿಪಥದಲ್ಲಿ ಬಂದರು. ಹೆಚ್ಚೆಚ್ಚು ಗುಡಿಸಲುಗಳು ಅಸ್ತಿತ್ವದಲ್ಲಿ ಬರತೊಡಗಿದವು. ಹೆಚ್ಚೆಚ್ಚು ಜನರು ಉಪಚಾರ ಹೊಂದತೊಡಗಿದರು. ಮುಂದೆ ಕೆನಡಾದಿಂದ ಸಹಾಯ ಪಡೆದು ಅವಳು ಆಸ್ಪತ್ರೆಯನ್ನು ಪ್ರಾರಂಭಿಸಿದಳು. ಇದೇ ಈಗ ದೊಡ್ಡ ಆಸ್ಪತ್ರೆಯಾಗಿದೆ. ಈ ಸಂಗತಿಯನ್ನು ಹೇಳಿದೊಡನೆ ಸಭಿಕರಿಗೆ ಆಸ್ಪತ್ರೆಯು ಬರುವ ಪೂರ್ವದಿಂದಲೂ ರಾಮಚಂದ್ರಪೂರದಲ್ಲಿ ಮಹಾರೋಗವಿತ್ತೆಂದು ಮನವರಿಕೆಯಾಯಿತು. ಜನರಿಗೆ ಮಹಾರೋಗವನ್ನು ಹೇಗೆ ಪ್ರತಿಬಂಧಿಸಬೇಕು, ಮಹಾರೋಗಿಗಳನ್ನು ಹೇಗೆ ಉಪಚರಿಸಬೇಕೆಂಬುದು ಗೊತ್ತಿಲ್ಲದ್ದರಿಂದಲೇ ಅಲ್ಲಿ ಮಹಾರೋಗ ಹೆಚ್ಚಾಗುತ್ತಿದೆ, ಹೊರತು ಆಸ್ಪತ್ರೆಯಿಂದಲ್ಲ. ನಮ್ಮ ಭೆಟ್ಟಿಯ ಫಲವಾಗಿ ಅಲ್ಲಿಯ ಅಧಿಕಾರಿಗಳೂ ರಾಮಚಂದ್ರಪುರಂದ ಹಾಗೂ ಅದರ ಸುತ್ತಲಿನ ಪ್ರದೇಶದ ಜನರು ಮಹಾರೋಗ ಪ್ರತಿಬಂಧಕೋಪಾಯಗಳನ್ನು ಯೋಜಿಸುವರೆಂದು ಆಶಿಸೋಣ.

ಇಂಗ್ಲಂಡದ ಸುಪ್ರಸಿದ್ಧ ಐತಿಹಾಸಿಕರಾದ ಸರ ವಾಲ್ಟರ ಮಾಂಕ್ಟನ್ನರು ವಿಮಾನದಿಂದ ಭಾರತಕ್ಕೆ ಬಂದಿದ್ದಾರೆ. ಅವರು ಎರಡು ತಿಂಗಳು ಹೈದರಾಬಾದ ನಿಝಾಮರ ಅತಿಥಿಗಳಾಗಿ ಇರಲಿರುವರು. ಇವರು ಜೂನ ೧೯೪೮ ರಲ್ಲಿ ಅಧಿಕಾರ [illegible] ಬ್ರಿಟಿಶರು ಹಿಂದುಸ್ತಾನದಿಂದ ಹೊರಟುಹೋದ ಬಳಿಕ ಉಂಟಾಗುವ ಪರಿಸ್ಥಿತಿಯ ಬಗ್ಗೆ ನಿಝಾಮರಿಗೂ ಮತ್ತು ಇತರ ಸಂಸ್ಥಾನಿಕರಿಗೂ ಕಾಯದೆ ಸಲಹೆ ಕೊಡಲಿರುವರು.

ದಿಲ್ಲಿ ವಿಷ್ಕಂಭಕ

೭–೪–೪೭

ಇಂದು ಪ್ರಾರ್ಥನೆ ಎಂದಿಗಿಂತ ಅರ್ಧ ತಾಸು ತಡವಾಗಿ ಪ್ರಾರಂಭವಾದುದರಿಂದ ಸೋಮವಾರದ ಸಂದೇಶವನ್ನು ಓದಿ ಹೇಳುವ ಬದಲು ಸ್ವತಃ ಸಭೆಯನ್ನು ಉದ್ದೇಶಿಸಿ ಗಾಂಧೀಜಿಗೆ ಮಾತಾಡಲು ಸಾಧ್ಯವಾಯಿತು.

ತಾವನ್ನುವ ಪ್ರತಿಶಬ್ದವನ್ನು ಜನರು ಆಲಿಸುವರೆಂದು, ಅದಕ್ಕೂ ಹೆಚ್ಚಾಗಿ ತಾವನ್ನುವದೇ ಅವರ ಹೃದಯಸ್ಪರ್ಶಿಯಾಗಲೆಂದು ಗಾಂಧೀಜಿ ಆಶಿಸಿದರು.

“ನೀನು ಜಿನ್ನಾಸಾಹೇಬರ ಗುಲಾಮ, ಶಂಸಮುದಲಕ್ಕೆ ಸೇರಿದವ ಎಂದು ಆರೋಪಿಸುವ ಪತ್ರಗಳು ನನಗೆ ಬರುತ್ತಲೇ ಇವೆ” ಎಂದು ಗಾಂಧೀಜಿ ತಿಳಿಸಿದರು. ಆದರೆ ಇಂಥ ಬಯ್ಗುಳಿಗೆ ತಾವು ಗಮನಕೊಡುವದಿಲ್ಲ.ವೆಂದೂ ಅವರು ಹೇಳಿದರು. ದಿನವೂ ತಾವು ಹಾಡುವ ಗೀತಾ ಶ್ಲೋಕಗಳು ಯಾವಾಗಲೂ ತಮ್ಮ ರಕ್ಷಣೆಗಿವೆ. ತಮ್ಮನ್ನು ಆರೋಪಿಸುವವರಿಗೆ ಈ ಶ್ಲೋಕಗಳು ಅಥವಾ ಅವುಗಳ ಮರ್ಮ ತಿಳಿದಿಲ್ಲವೆಂದು ತಮಗೆ ನಿಶ್ಚಯವಾಗಿ ಗೊತ್ತಿದೆ. ತಾವು ಸನಾತನಿ ಹಿಂದುವಾಗಿರುವದರಿಂದಲೇ ತಾವು ಕ್ರಿಶ್ಚಿಯನ್ನನೂ ಹೌದು; ಬೌದ್ಧನೂ ಹೌದು ಮುಸ್ಲಿಮನೂ ಹೌದು ಎಂದು ಹೇಳಿಕೊಳ್ಳುತ್ತಿದ್ದೇವೆ. ಕೆಲ ಮುಸ್ಲಿಮ ಗೆಳೆಯರು ತಮಗೆ (ಗಾಂಧೀಜಿಗೆ) ಕುರಾಣದ ಅರಬೀ ವಾಕ್ಯಗಳನ್ನೋದುವ ಅಧಿಕಾರವಿಲ್ಲೆಂದು ಬಗೆಯುತ್ತಾರೆ. ಆದರೆ ಅಂಥವರಿಗೆ ನಿಜವಾದ ಧರ್ಮಕ್ಕೆ ಭಾಷೆ—ಧರ್ಮಗ್ರಂಥಗಳ ಮೇಲೆ ಇಲ್ಲವೆಂಬ ಅರಿವಿಲ್ಲ. ತಾವು ಕಲಮಾ ಓದಬಾರದೇಕೆ ಅಲ್ಲಾನನ್ನು ಕೊಂಡಾಡಬಾರದೇಕೆ ಮಹಮದರನ್ನು ಗುರುವೆಂದು ಕರೆಯಬಾರದೇಕೆದೆಂಬದಕ್ಕೆ ಕಾರಣವೇ ತಮಗೆ ಕಾಣದಾಗಿದೆ. ಎಲ್ಲಧರ್ಮಗಳ ಎಲ್ಲಮಹಾಸಾಧು ಪ್ರವಾದಿಗಳಲ್ಲೂ ತಮ್ಮ ನಂಬಿಕೆಯುಂಟು ತಮ್ಮ ಮೇಲೆ ಆರೋಪ ಹೊರಿಸುವವರ ಮೇಲೆ ಸಿಟ್ಟಿಗೇಳದೆ ಇರುವ ಶಕ್ತಿ ತಮಗೆ ಬರಲೆಂದೂ ಅವರಿಗೆ ಏನೂಕೇಡುಬಗೆಯದೆ ಅವರ ಕೈಲೆ ಕೊಲ್ಲಿಸಿಕೊಳ್ಳಲು ತಾವು ಸಿದ್ಧರಾಗುವಂತಾಗಲೆಂದೂ ದೇವರಲ್ಲಿ ಮೊರೆಯಿಡುತ್ತಿದ್ದೇವೆಂದು ಅವರು ಹೇಳಿದರು ಹಿಂದೂಧರ್ಮದಲ್ಲಿ ಸರ್ವವೂ ಅಡಕವಾಗಿದೆಯೆಂದು ತಮ್ಮ ಹೇಳಿಕೆಯುಂಟು ತಮ್ಮ ಈ ವಿಶ್ವಾಸಕ್ಕೆ ಅನುಸಾರವಾಗಿ ತಾವು ನಡೆದುಕೊಂಡರೆ ಹಿಂದೂ ಧರ್ಮಕ್ಕೆ ಮಾತ್ರವಲ್ಲ; ಇಸ್ಲಾಮಿಗೂ ತಾವು ಸೇವೆ ಸಲ್ಲಿಸಿದಂತಾಯಿತೆಂಬ ಭರವಸೆ ತಮಗುಂಟು.

ಇಂದು, ತಮ್ಮ ಮೌನದ ದಿನ, ರಾವಳಪಿಂಡಿಯಿಂದ ಬಂದಿದ್ದ ಹಿಂದುವೊಬ್ಬನಿಗೆ ಕೆಲನಿಮಿಷಗಳ ಅವಧಾನವನ್ನು, ಅರೆಮನಸಿನಿಂದಲೇ ಕೊಟ್ಟೆವೆಂದು ಗಾಂಧೀಜಿ ಮುಂದೆಸಾಗಿದರು. ಆ ಹಿಂದೂ ಗೃಹಸ್ಥ ರಾವಳಪಿಂಡಿಯ ಘಟನೆಗಳ ಬಗೆಗೆ ಹೇಳಿದ ಕತೆ ಕರುಣಾಜನಕವಾಗಿತ್ತು. ತಮಗೂ ಅಲಿ ಬಂಧುಗಳಿಗೂ ಆದರ ಸತ್ಕಾರ ಮಾಡಲು ಎಲ್ಲ ಹಿಂದೂ ಮುಸ್ಲಿಮ ಸೀಖರು ಒಬ್ಬರೊಬ್ಬರನ್ನು ಮೀರಿದ್ದರೂ ಅಲ್ಲಿ ಇಂದು ಮುಸ್ಲಿಮೇತರರ ಜೀವನ ಅಸುರಕ್ಷಿತವಾಗಿರುವದು ವಿಷಾದಕರವೆಂದು ಗಾಂಧೀಜಿ ಹೇಳಿದರು ಪಂಜಾಬದಲ್ಲಿ ಹಿಂದುಗಳ ಹೃದಯ ಕ್ರೋಧದಿಂದ ಜ್ವಲಿಸುತಿದೆ. ಖಡ್ಗಧಾರಣೆಯನ್ನು ಮಗೆ ಕಲಿಸಿದ ಗುರುಗೋವಿಂದಸಿಂಗನ ಶಿಷ್ಯರು ತಾವೆಂದು ಸೀಖರು ಹೇಳತೊಡಗಿದ್ದಾರೆ. ಆದರೆ ಏನಾದರೂ ಪ್ರತಿಹಿಂಸೆಗೆ ಕೈಹಾಕಬೇಡಿರೆಂದು ಹಿಂದೂಗಳಲ್ಲಿಯೂ ಸೀಖರಲ್ಲಿಯೂ ತಾವು ಮತ್ತೆ ಮತ್ತೆ ಪ್ರಾರ್ಥಿಸುವೆವು. ಪ್ರತಿಹಿಂಸೆಯಿಲ್ಲದೆ ಎಲ್ಲ ಹಿಂದುಗಳೂ ಸೀಖರೂ ಮುಸ್ಲಿಂ ಬಂಧುಗಳ ಕೈಲೆ ಹತರಾದರೂ ಅವರು ಹಿಂದೂ ಧರ್ಮ ಸೀಖ ಧರ್ಮಗಳನ್ನು ಪಾರುಮಾಡಿದಂತಾಗುವದಿಷ್ಟೇ ಅಲ್ಲ, ಇಸ್ಲಾಮುಧರ್ಮದ ಸೇವೆ ಮಾಡಿ ಜಗತ್ತನ್ನು ಉಳಿಸಿದ ಶ್ರೇಯಸ್ಸೂ ಅವರಿಗೆ ಬರುವದೆಂದು ತಾವು ಎದೆತಟ್ಟಿ ಹೇಳುವೆವೆಂದು ಗಾಂಧೀಜಿ ಸಾರಿದರು.

ಮೂವತ್ತು ವರ್ಷಗಳಿಂದ ತಾವು ಸತ್ಯ ಅಹಿಂಸೆಗಳ ಧರ್ಮವನ್ನು ಜನರಿಗೆ ಬೋಧಿಸಿದ್ದಾಗಿದೆ. ಇಪ್ಪತ್ತು ವರ್ಷಗಳ ವರೆಗೆ ದಕ್ಷಿಣ ಅಫ್ರಿಕೆಯಲ್ಲಿ ಅದನ್ನೇ ಮಾಡಿದ್ದೆವು. ದಕ್ಷಿಣ ಅಫ್ರಿಕೆಯ ಹಿಂದೀಯರು ತಮ್ಮನ್ನು ಅನುಸರಿಸಿದ್ದರಿಂದ ಅವರಿಗೆ ಹಿತವೇ ಆಯಿತು. ಇಲ್ಲಿಯಾದರೂ ತಮ್ಮನ್ನು ಅನುಸರಿಸಿದವರಿಗೆ ಏನೂ ಹಾನಿಯಾಗಿಲ್ಲ. ಮಾಯೆಯನ್ನು ತ್ಯಜಿಸಿ ನಿಜವನ್ನು ಆಶ್ರಯಿಸಿರೆಂದು ಜನರಿಗೆ ಬೋಧಿಸುವದು ತಮ್ಮ ಜೀವನ ಕಾರ್ಯವೆಂದು ತಮ್ಮ ಅಂಬೋಣವುಂಟು. ತಾವು ಪಂಜಾಬಿಗೆ ಹೋಗುವದಿದ್ದರೆ ಅದು ಪ್ರತಿಕಾರವನ್ನು ಬೋಧಿಸುವದಕ್ಕಾಗಿ ಅಲ್ಲ. ಹಾಗೆ ಮಾಡಿದರೆ ಹಿಂದುಗಳಿಗೂ ಸೀಖರಿಗೂ ಮುಸ್ಲಿಂರಿಗೂ ಸೇರಿಯೆ ದ್ರೋಹ ಬಗೆದಂತಾಗುವದು. ಪ್ರತೀಕಾರ ಪರಮಾತ್ಮನ ಅಧಿಕಾರವೆಂದು ಬಾಯಬಲ್ಲು ಉಪದೇಶಿಸಿದ್ದು ಉಚಿತವೇ ಆಗಿದೆ. ಮುಸ್ಲಿಮೇತರನಾದವನಿಗೆ ಶಾಂತಿ ಸುರಕ್ಷಿತತೆಯಿಂದ ಬಾಳಲು ಅವಕಾಶವೇ ಇಲ್ಲದ ಪಾಕಿಸ್ತಾನವಾಗಲಿ, ಮುಸ್ಲಿಮರಿಗೆ ಸುರಕ್ಷಿತತೆಯಿಲ್ಲದ ಹಿಂದುಸ್ತಾನವಾಗಲಿ ತಮ್ಮ ಕಲ್ಪನೆಗೆ ನಿಲುಕುವದಿಲ್ಲೆಂದು ಅವರು ಹೇಳಿದರು. ತಾವು ಬಿಹಾರಕ್ಕೆ ಹೋಗಿದ್ದು ಅಲ್ಲಿಯ ಹಿಂದುಗಳ ಕ್ರೋಧವನ್ನು ತಣಿಸಿ ಮುಸ್ಲಿಮರಲ್ಲಿ ವಿಶ್ವಾಸವನ್ನು ಸ್ಥಾಪಿಸುವ ಪ್ರಯತ್ನ ಮಾಡಿದೆವು. ಬಡ ಮುಸ್ಲಿಮರಿಗೆ ಹಿಂದುಗಳಿಂದಾದ ಭಯಾನಕ ಅನ್ಯಾಯಗಳನ್ನು ನಿವಾರಿಸಲು ಅಲ್ಲಿಯ ಮಂತ್ರಿಗಳು ತೀವ್ರಾಸಕ್ತಿಯುಂದಿದ್ದಾರೆ. ರಾಜೇಂದ್ರ ಬಾಬು ಬಿಹಾರದ ಅನಭಿಷಿಕ್ತ ರಾಜರು. ಹಿಂದೂ ಮುಸ್ಲಿಮರಿಬ್ಬರ ಮೇಲೂ ಸಮಾನ ಪ್ರಭಾವ ಕೆಡಹಬೇಕಾದ ಕಾಂಗ್ರೆಸ್ ಆಳಿಕೆಯಲ್ಲಿ ಮುಸ್ಲಿಮರಿಗೆ ಸುರಕ್ಷಿತತೆಯುನಿಸದಿದ್ದರೆ ಅದು ನಿಜವಾಗಿ ರಾಷ್ಟ್ರೀಯ ಆಳಿಕೆಯೆನಿಸಲಾರದು. ಆದುದರಿಂದ ಹಿಂದುಗಳು ಮಾಡಿದ ಲಜ್ಜಾವಹ ಕೃತ್ಯಗಳಿಗಾಗಿ ಬಿಹಾರದಲ್ಲಿ ಅನೇಕ ಹಿಂದುಗಳು ಬಹಿರಂಗವಾಗಿ ಪಶ್ಚಾತ್ತಾಪಪಟ್ಟು ಅಂಥ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವದಾಗಿ ಭರವಸೆ ಕೊಟ್ಟದ್ದರಿಂದ ತಮಗೆ ಸಂತೋಷವಾಗಿದೆ. ಅದೇ ಪ್ರಕಾರ ಮುಸ್ಲಿಂ ಬಹುಸಂಖ್ಯಾ ಪ್ರಾಂತಗಳಲ್ಲಿರುವ ಮುಸ್ಲಿಮರು ತಮ್ಮ ಹಿಂದೂ ಬಂಧುಗಳನ್ನು ನಿರ್ನಾಮ ಮಾಡುವ ಪ್ರಯತ್ನದಲ್ಲಿ ತೊಡಗಬಾರದೆಂದು ಮುಸ್ಲಿಂ ಮುಂದಾಳುಗಳು ಕೇಳಿಕೊಳ್ಳಬೇಕೆಂದು ಗಾಂಧೀಜಿ ಬಿನ್ನವಿಸಿದರು. ಪಂಜಾಬದಲ್ಲಿ ಹಿಂದುಗಳೂ ಸೀಖರೂ ಯಾವುದೇ ಬಗೆಯ ಉದ್ರೇಕಕ ಶಬ್ದಗಳನ್ನು ಆಡಿದ್ದರೂ— ಅವರು ಹಾಗೆ ಮಾಡಿದ್ದಾರೆಂದು ಹೇಳಲಾಗಿದೆ—ಮುಸ್ಲಿಮರು ಬಹುಸಂಖ್ಯಾಕರಾಗಿರುವ ಭಾಗಗಳಲ್ಲಿ ಅವರು ಉನ್ಮತ್ತರಾಗಿ ನಡೆಸಿದ ಹಿಂಸಾತಾಂಡವಕ್ಕೆ ಅದು ಸಮರ್ಥನೆಯಾಗಲರಿಯದು.

ನೌಖಾಲಿಯಿಂದ, ಅದೂ ಈಗೆರಡು ದಿನಗಳಿಂದ, ಕೆಟ್ಟ ಸುದ್ದಿ ಬಂದುದಕ್ಕಾಗಿ ತಮಗೆ ದುಃಖವಾಗಿದೆಯೆಂದು ಗಾಂಧೀಜಿ ಮುಂದುವರಿದರು. ಸತೀಶ ಬಾಬುಗಳೂ ಅವರ ಹೆಂಡತಿಯೂ ಹಾಗೆಯೆ ತಮ್ಮ ಸ್ವಂತದ ಸಹಕಾರಿಗಳೂ ಎಲ್ಲರೂ ಪೂರ್ವ ಬಂಗಾಲದಲ್ಲಿಯೆ ಇದ್ದಾರೆ. ಅವರಲ್ಲಾರಾದರೊಬ್ಬರು ಅಲ್ಲಿಯ ದಾವಾನಲದಲ್ಲಿ ನಷ್ಟರಾಗಿ ಹೋದರೂ ತಾವೊಂದು ತೊಟ್ಟು ಕಣ್ಣೀರನ್ನು ಮಿಡಿಯುವವರಲ್ಲವೆಂದು ಅವರು ಸಾರಿದರು. ಆದರೆ ತಮ್ಮ ಗೆಳೆಯರಾದ ಬಂಗಾಲ ಮುಖ್ಯ ಮಂತ್ರಿಗಳಿಗೆ ತಾವು ಕಳಿಸಿದ ತಂತಿಯಿಂದ ನೌಖಾಲಿಯಲ್ಲಿ ಪುನಃ ತಲೆಯೆತ್ತುತಿರುವಂತೆ ಕಾಣುವ ಸುಲಿಗೆ, ಕೊಳ್ಳಿ ಪ್ರಕರಣಗಳನ್ನು ನಿಲ್ಲಿಸುವಲ್ಲಿ ಪರಿಣಾಮಕಾರಿಯಾದೀತೆಂದು ಅವರು ಹಾರೈಸಿದರು.

ಸೈನ್ಯದ ಅಥವಾ ಪೋಲೀಸರ ರಕ್ಷಣೆ ಬೇಡುವದು ತಪ್ಪು ಮಾತ್ರವಲ್ಲ ಹೇಡಿತನದ್ದು ಎಂದು ಗಾಂಧೀಜಿ ಪುನರುಚ್ಚರಿಸಿದರು. ಮೃತ್ಯುಭಯವಿಲ್ಲದ ಅಹಿಂಸಾತ್ಮಕ ಶೌರ್ಯ ನಮ್ಮಲ್ಲಿರಬೇಕು. ಅದಿಲ್ಲದಿದ್ದರೆ ಮನೆ ಮಾರು ಬಿಟ್ಟು ಪಲಾಯನ ಮಾಡುವದಲ್ಲದೆ ಬೇರೆ ಹಾದಿಯಿಲ್ಲ. ಆದರೆ ಅವಕ್ಕೆ ಶೌರ್ಯವೆಂದು ಹೆಸರಲ್ಲ.

ಅನಾಹುತಗಳೊದಗಿದಾಗ ಅಳುವವರು ದಾಸರು. ಸೈನ್ಯ ಸಹಾಯ ಕೇಳುವವರು ದಾಸರಾಗಿಯೇ ಉಳಿಯುವರು. ಜನರು ಯಾದವೀ ಯುದ್ಧದಲ್ಲಿಯೂ ಆಸಕ್ತರಾಗಬಾರದು. ಹಾಗೆಯೆ ದಾಸರಾಗಿ ಉಳಿಯಲೂ ಬಯಸಬಾರದೆಂದು ಗಾಂಧೀಜಿ ಆಶಿಸಿದರು. ಮೊದಲನೆಯದನ್ನು ಮಾಡಿದರೆ ಹಿಂದುಸ್ತಾನ ಸ್ವನಾಶಕ್ಕಷ್ಟೇ ಸಹಾಯಕವಾಗದೆ ಇಡಿ ಜಗತ್ತಿನದ ನಾಶದಲ್ಲಿ ಭಾಗಿಯಾದೀತು. ಅಮರ ಹಿಮಾಲಯದಿಂದ ಸೀಮಿತವಾಗಿ ಗಂಗಾ ನದಿಯ ಅಮೃತ ಝರಿಗಳಿಂದ ಪೋಷಿತವಾಗುವ ದೇಶ ಹಿಂಸೆಯಿಂದ ನಾಶದ ಮಾರ್ಗ ಹಿಡಿಯಬೇಕೆ? ಪ್ರಬಲ ಸೈನ್ಯಗಳ ಎಲ್ಲ ವಿಚಾರವನ್ನು ನಾವು ಬಿಟ್ಟುಕೊಡೋಣ. ಅದರಿಂದ ನಾವು ಏನನ್ನೂ ಸಾಧಿಸಲಾರೆವು. ನಮ್ಮ ಸ್ವಾತಂತ್ರ್ಯಕ್ಕೆ ಏನೂ ಬೆಲೆಯಿಲ್ಲದಂತಾದೀತು.

೮—೪—೪೭

ದಿನವೂ ಪ್ರಾರ್ಥನಾಕಾಲದಲ್ಲಿ ಶಾಂತಿಮಯ ವಾತಾವರಣವಿರುವದರ ಬಗ್ಗೆ ಗಾಂಧೀಜಿ ಸಂತೋಷವನ್ನು ವ್ಯಕ್ತಗೊಳಿಸಿದರು. “ಈಚೆಗೆ ನಿಮ್ಮ ಮುಂದೆ ಮಾತಾಡಲು ನನಗೆ ಒಂದೆ ಒಂದು ವಿಷಯ ದೊರಕುತಿದೆ ಅದೆಂದರೆ “ನಮ್ಮ ದುಃಖಮಯ ಅವಸ್ಥೆ” ಎಂದು ಅವರು ಭಾಷಣವನ್ನು ಆರಂಭಿಸಿದರು. ತಮ್ಮ ದಿನದಿನದ ಭಾಷಣ ಜನರ ಹೃದಯವನ್ನು ಪ್ರವೇಶಿಸಿ ಪರಸ್ಪರ ಕ್ರೋಧವನ್ನು ತೊಡೆದು ಹಾಕಲೆಂದು ಅವರು ಆಶಿಸಿದರು.

ನೌಖಾಲಿಯಿಂದ ಬರುತಿರುವ ಕ್ಲೇಶಕರ ವಾರ್ತೆಯನ್ನು ತಾವು ಪ್ರಸ್ತಾಪಿಸಿದ್ದೆವಷ್ಟೆ. ಆ ತಂತಿಗಳನ್ನೂ ಅವುಗಳಿಗೆ ತಾವಿತ್ತ ಉತ್ತರವನ್ನೂ ಜನರು ಮುಂಜಾನೆಯ ಪತ್ರಿಕೆಗಳಲ್ಲಿ ಓದಿರಬಹುದು ಇಂದು ಪರಿಸ್ಥಿತಿ ಮತ್ತಷ್ಟು ಕೆಡುತಿದೆಯೆಂದು ಸುರೇಶ ಬಾಬುಗಳಿಂದ ಮತ್ತೊಂದು ತಂತಿ ಬಂದಿದೆಯೆಂದು ಗಾಂಧೀಜಿ ತಿಳಿಸಿದರು. ಆದರೆ ಸತೀಶ ಬಾಬುಗಳೂ ಅವರ ಸಹಯೋಗಿಗಳೂ ಗಾಂಧೀಜಿ ಬಂಗಾಲಕ್ಕೆ ಬರುವರೆಂದು ನಿರೀಕ್ಷಿಸುವದಿಲ್ಲವೆಂದೂ ಇಪ್ಪರವರೆಗೆ ಒಂದುಗಳು ಧೈರ್ಯದಿಂದ ಕೊಲ್ಲದೆ ಸಾಯಲು ಸಿದ್ಧರಿರುವರೆಂದೂ ಆ ತಂತಿಯಲ್ಲಿ ಉಲ್ಲೇಖಿಸಲಾಗಿದೆ. ಇದು ತಮ್ಮ ಇಷ್ಟೆಲ್ಲ ತಿಂಗಳುಗಳ ಪ್ರಯತ್ನವೆಂದು ಅವರಿಗೆ ಅನಿಸುತ್ತಿದೆ. ಈ ಎಲ್ಲ ಕಾರ್ಯಕರ್ತರೂ ವಿವಿಧ ಗ್ರಾಮುಗಳಲ್ಲಿ ವಾಸಿಸುತ್ತಿದ್ದಾರೆ. ಸತೀಶ ಬಾಬುಗಳ ಮತ್ತು ಅವರ ಹೆಂಡತಿಯ ಹಾಗು ಪ್ಯಾರೇಲಾಲರ ಬಗೆಗೆ ನಿನ್ನೆ ತಾವು ಹೇಳಿದ್ದೇವೆ. ಇನ್ನು ಚೌಮುಹಾನಿಯಲ್ಲಿ ಪ್ರಚಂಡ ಕೆಲಸಮಾಡುತಿರುವ ಹರಣಬಾಬು ಇದ್ದಾರೆ. ಮತ್ತೆ ಅಮತುಸ್ಸಲಾಮಳಿರುವಳು ದೇಹದಲ್ಲಿ ದುರ್ಬಲರಾದರೂ ನಿಜವಾದ ಮುಸ್ಲಿಮಳವಳು, ನಿಜವಾದ ಹಿಂದುವೂ ಹೌದು. ಸುಶೀಲಾ ಪೈ ಮತ್ತು ೨೧ ವಯಸ್ಸಿನ ಅಭಾ ಗಾಂಧಿ ಕನುಗಾಂಧಿಯ ಮಡದಿ, ಇದ್ದಾರೆ. ಸುಶೀಲಾ ನಯ್ಯರಳು ಇದ್ದಾಳೆ ಇವರೆಲ್ಲರೂ ನಿರ್ಭಯರು ತಮ್ಮ ಕೊಲೆಮಾಡುವಷ್ಟು ಮುಸ್ಲಿಮರು ನಿರ್ಘೃಣರಾಗುವರೆಂದು ಅವರು ನಂಬಲೊಪ್ಪುವದಿಲ್ಲ. ಈ ಎಲ್ಲ ಕಾರ್ಯಕರ್ತರು ಮಾಡುವ ನಿಸ್ಪೃಹ ಸೇವೆಯಿಂದ ಪಾಕಿಸ್ತಾನವನ್ನು ಬಲಾತ್ಕಾರದಿಂದ ಕಸಿದುಕೊಳ್ಳುವದು ಸಾಧ್ಯವಿಲ್ಲವೆಂಬ ಮಾತು ಅತ್ಯಂತ ಉತ್ತಮನಾದ ಮುಸ್ಲಿಮನಿಗೂ ಮನವರಿಕೆಯಾದೀತೆಂದು ತಮಗೆ ವಿಶ್ವಾಸವುಂಟೆಂದು ಗಾಂಧೀಜಿ ನುಡಿದರು. ಬಲಾತ್ಕಾರದಿಂದ ತೆಗೆದುಕೊಂಡದ್ದನ್ನು ಅರಗಿಸಿಕೊಳ್ಳುವದು ಸಾಧ್ಯವಿಲ್ಲ. ಈ ಕಾರ್ಯಕರ್ತರಲ್ಲಿ ಯಾರಾದರೂ ಜಾತೀಯ ದ್ವೇಷದ ಜ್ವಾಲೆಯಲ್ಲಿ ಬೆಂದುಹೋದರೆ ತಾವು ತೊಟ್ಟು ಕಣ್ಣೀರನ್ನು ಕೂಡ ಮಿಡಿಯುವವರಲ್ಲವೆಂದು ನಿನ್ನೆ ಹೇಳಿದ್ದನ್ನು ಅವರು ತಿರುಗಿ ನುಡಿದರು. ಏಕೆಂದರೆ ಅದೇ ಹಿಂದೂ ಧರ್ಮಕ್ಕೆ ಮಾತ್ರವಲ್ಲ, ಇಸ್ಲಾಮಿಗೂ ನಿಜವೂ ಉತ್ತಮೋತ್ತಮವೂ ಆದ ಸೇವೆಯೆನಿಸುವದು.

ಈ ಗಲಭೆ ಪ್ರದೇಶಗಳಲ್ಲಿರುವವರೆಲ್ಲರಿಗೂ ಹಿಂಸೆಯ ಮೌಢ್ಯ ಮನವರಿಕೆಯಾಗಿ ಅವರಲ್ಲಿ ತಿಳವಳಿಕೆಯೂ ಧೈರ್ಯವೂ ಮೂಡಲೆಂದು ಪರಮಾತ್ಮನಲ್ಲಿ ಮೊರೆಯಿಡುವದು ಎಲ್ಲರ ಕರ್ತವ್ಯ. ನೌಖಾಲಿಯ ಮುಸ್ಲಿಮರು ತಮಗೆ ಪತ್ರಬರೆದು, ನಿಮ್ಮ ಕಾರ್ಯಕರ್ತರಾರೂ ಇಲ್ಲಿ ಇನ್ನುಳಿಯಬೇಕಾಗಿಲ್ಲ; ಹಿಂದುಗಳೆಲ್ಲ ಪೂರ್ಣ ಸುರಕ್ಷಿತರಾಗಿದ್ದಾರೆಂದು ತಿಳಿಸುವ ದಿನಗಳೆಂದು ಬಂದಾವೋ ಎಂದು ಗಾಂಧೀಜಿ ಹಾತೊರೆದರು.

ಮುಂದೆ ಅವರು ತಮಗೆ ಬಂದ ಎರಡು ಪತ್ರಗಳನ್ನು ಅಂಶತಃ ಓದತೊಡಗಿದರು. ಎಲ್ಲೆಡೆಯಲ್ಲಿಯೂ ಎಲ್ಲದರಲ್ಲಿಯೂ ದೇವರನ್ನು ಕಾಣುವವನು ಮತ್ತು ದೇವರಲ್ಲಿ ಎಲ್ಲವನ್ನು ಕಾಣುವವನು (ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂಚ ಮಯಿ ಪಶ್ಯತಿ)-ಅರ್ಥಾತ್ ಎಲ್ಲ ಧರ್ಮಗ್ರಂಥಗಳಲ್ಲಿಯೂ ಎಲ್ಲ ಧರ್ಮಗಳ ಎಲ್ಲ ವ್ಯಕ್ತಿಗಳಲ್ಲಿಯೂ ದೇವರನ್ನು ಕಾಣುವವನಿಗೆ ದೇವರು ಸುಲಭನಾಗಿದ್ದಾನೆ— ಎಂಬ ಸಂಸ್ಕೃತ ಶ್ಲೋಕದ ಅರ್ಥವನ್ನು ಸಭಿಕರಿಗೆ ವಿವರಿಸಲು ಒಬ್ಬ ಗೆಳೆಯ ಬರೆದಿದ್ದನು. ದೇವರೆಂದೂ ಅಂಥವನಲ್ಲಿ ಬೇಸರಿಯುವದಿಲ್ಲ ಅವನು ಯಾವಾಗಲೂ ದೇವರ ಸನ್ನಿಧಾನದಲ್ಲಿಯೆ ಇರುತ್ತಾನೆ. ಹೀಗೆ ವ್ಯಾಖ್ಯಾನ ಮಾಡಿದರೆ ತಾವು ಸನಾತನಿ ಹಿಂದುವೆಂದು ಅಂದುಕೊಂಡಾಗ ತಮ್ಮ ಅಭಿಪ್ರಾಯ ಏನಿತ್ತೆಂದು ಎಲ್ಲರೂ ಸುಲಭವಾಗಿ ಮನಗಾಣಬಹುದು. ಆದರೆ ತಾವು ಮುಸ್ಲಿಮರೂ ಹೌದೆಂದು ಹೇಳಿಕೊಳ್ಳುವದು ಸರಿಯಲ್ಲವೆಂದು ಅವರು ಆಕ್ಷೇಪಿಸುತ್ತಾರೆಂದು ಗಾಂಧೀಜಿ ಹೇಳಿದರು. ಆದರೂ ತಾವು ನಿನ್ನೆ ಹೇಳಿದ್ದು ಸರಿಯೇ ಆಗಿತ್ತೆಂದು ಅವರು ಸಾಧಿಸಿದರು. ತಾವು ಸನಾತನಿ ಹಿಂದುವಾಗಿರುವದರಿಂದಲೇ ಮುಸ್ಲಿಮನೂ ಹೌದೆಂದು ಹೇಳಿಕೊಳ್ಳಲು ತಮಗೇನೂ ನಾಚಿಕೆಯಾಗುವದಿಲ್ಲ. ಜನರಿಗೆ ಯಾವುದೇ ಸ್ಥಳದಲ್ಲಿ ಅಲ್ಪಸಂಖ್ಯಾಕರಾಗಿ ಬಾಳಲು ಹೆದರಿಕೆಯಾದರೆ ಅವರೆಲ್ಲಿ ಹೋಗಬೇಕೆಂದೂ ಆ ಗೆಳೆಯ ಕೇಳಿದ್ದ. ಇಡಿ ಹಿಂದುಸ್ತಾನವೇ ಅವರಿಗಾಗಿ ತೆರೆದಿಡಲ್ಪಟ್ಟಿದೆಯೆಂದು ತಮ್ಮ ಉತ್ತರವೆಂದರು ಗಾಂಧೀಜಿ —ಆದರೆ ಅವರು ಭಿಕ್ಷಾಪಾತ್ರೆ ಹಿಡಿಯಬಾರದು, ಇಷ್ಟೆ.

ಇನ್ನೊಬ್ಬ ಗೆಳೆಯ ಹೀಗೆ ಕೇಳಿದ್ದ: ರಾಮ ರಹಿಮ ಇವೆರಡೂ ಒಬ್ಬನೇ ಪರಮಾತ್ಮನ ಹೆಸರುಗಳಾಗಿದ್ದರೆ ಅವೆರಡನ್ನೂ ಉಪಯೋಗಿಸುವ ಅವಶ್ಯಕತೆಯೇನು? ರಾಮ ಎಂಬುದೊಂದೇ ಸಾಲದೆ? ಹಿಂದೂ ಶಾಸ್ತ್ರಗಳಲ್ಲಿ ಪರಮಾತ್ಮನಿಗೆ ಸಹಸ್ರ ನಾಮ ಹೇಳಲ್ಪಟ್ಟಿದೆ. ಅವನಿಗೆ ೧೦ ಕೋಟಿ ಹೆಸರುಗಳಿದ್ದರೆ ಏನು ಕೊರತೆಯಾಯಿತು? ಎಂದು ಗಾಂಧೀಜಿ ಹೇಳಿದರು. ಪ್ರತಿಯೊಬ್ಬರೂ ತನ್ನ ಆಧ್ಯಾತ್ಮಿಕ ತೃಪ್ತಿಗಾಗಿ ದೇವರಿಗೆ ಬೇಕಾದಷ್ಟು ಹೆಸರುಗಳನ್ನಿಟ್ಟು ಕರೆಯಲು ಸ್ವತಂತ್ರನೇ ಸರಿ. “ಮುಸ್ಲಿಮರನ್ನು ಸಂತೋಷಗೊಳಿಸಲು ಹೆಣಗುತಿರುವೆನೆಂದು ಕೆಲವರು ನನ್ನನ್ನು ಆರೋಪಿಸುತ್ತಾರೆ. ನಾನು ಹಾಗೆ ಮಾಡಿದರಾದರೂ ಏನು ತಪ್ಪಾಯಿತು?” ಎಂದು ಗಾಂಧೀಜಿ ಕೇಳಿದರು. ಕೆಲ ಮುಸ್ಲಿಂರು ತಮ್ಮನ್ನು ನೋಯಿಸಲು ಬಯಸಬಹುದು. ಅಂದ ಮಾತ್ರಕ್ಕೆ ತಾವೂ ತಿರುಗಿ ಅವರನ್ನು ನೋಯಿಸಬೇಕೆ? ತಮಗೆ ಕುರಾಣ ಶರೀಫದ ಶ್ಲೋಕಗಳನ್ನು ಕಲಿಸಿದವಳು ಒಬ್ಬ ಮುಸ್ಲಿಂ ಬಾಲಿಕೆ— ರೈಹಾನಾ ತಯ್ಯಬಜಿ. ತಾವೆಂದೂ ಅವುಗಳನ್ನು ತ್ಯಜಿಸುವವರಲ್ಲವೆಂದು ಅವರು ಶಪಥ ಮಾಡಿದರು. ಯರವಡಾ ಸೆರೆಮನೆಯಲ್ಲಿ ತಾವು ಉಪವಾಸ ಮುಕ್ತಾಯಗೊಳಿಸಿದಾಗ ಡಾ. ಗಿಲ್ಡರರು ಝೆಂಡ ಅವೆಸ್ತಾದ ಒಂದು ಶ್ಲೋಕವನ್ನು ಪಠಿಸಿದ್ದರು. ಅಂದಿನಿಂದ ಆ ಪಾರಸಿ ಶ್ಲೋಕವೂ ತಮ್ಮ ಪ್ರಾರ್ಥನಾ ಪದ್ಧತಿಯಲ್ಲಿ ಸೇರಿ ಹೋಗಿದೆ. ಈ ಪ್ರಾರ್ಥನಾ ಶ್ಲೋಕಗಳನ್ನು ಉಪಯೋಗಿಸಿಕೊಂಡು ರಾಮಧುನಿಯನ್ನು ಹಾಡಿದ್ದರಿಂದ ರಾಮನಾಮದ ಮಹಿಮೆ ಕಡಿಮೆಯಾಗದೆ ಹೆಚ್ಚೇ ಆಯಿತೆಂದು ಗಾಂಧೀಜಿ ಭಾವಿಸಿದ್ದಾರೆ.

ಇನ್ನೊಬ್ಬ ಗೆಳೆಯ ಪ್ರಾರ್ಥನಾಕಾಲದಲ್ಲಿ ನಿಮ್ಮ ವಸತಿಯನ್ನು ಕಾಯಲು ಪೋಲೀಸರಿರುವದನ್ನು ನೋಡಿ ನಿಮಗೆ ನಾಚಿಕೆಯಾಗುವದಿಲ್ಲವೇ ಎಂದು ಕೇಳಿದ್ದ. ತಮಗೆ ನಾಚಿಕೆಯಾಗಿದೆಯೆಂದು ಗಾಂಧೀಜಿ ನಗುತ್ತ ಒಪ್ಪಿಕೊಂಡರು. ಆದರೆ ತಾವು ವಿನಮ್ರ ಪ್ರಜೆ. ಕಾಯದೆಯಲ್ಲಿ ಕೈಹಾಕುವ ಅಧಿಕಾರ ತಮಗಿಲ್ಲ. ಪೋಲೀಸರನ್ನು ತೆಗೆಯಬೇಕೆಂದಿದ್ದರೆ ಜನರು ಗೃಹಮಂತ್ರಿಗಳಾದ ತಮ್ಮ ಸರದಾರರ ಬಳಿಗೆ ಹೋಗಲಿ. ಹಿಂದೂ ಧರ್ಮದಲ್ಲಿ ಅಹಿಂಸೆಯನ್ನೆಲ್ಲಿಂದ ಹುಡುಕಿ ತೆಗೆದಿರೆಂದೂ ಕೆಲವರು ತಮ್ಮನ್ನು ಕೇಳುತ್ತಾರೆ. ಅಹಿಂಸೆ ಹಿಂದೂ ಧರ್ಮದಲ್ಲಿದೆ, ಕ್ರಿಶ್ಚನ್ ಧರ್ಮದಲ್ಲಿಯೂ ಇಸ್ಲಾಮದಲ್ಲಿಯೂ ಇದೆಯೆಂದು ಗಾಂಧೀಜಿ ಉತ್ತರವಿತ್ತರು. ಯಾರು ತಮ್ಮ ಮಾತನ್ನೊಪ್ಪಲಿ, ಬಿಡಲಿ ತಮಗೆ ಯಾವುದು ಸತ್ಯವೆಂದು ತೋರುತ್ತದೋ ಅದನ್ನು ಪ್ರಚುರಗೊಳಿಸುವದು ತಮ್ಮ ಪರಮ ಕರ್ತವ್ಯ. ಅಹಿಂಸೆಯಿಂದ ಯಾರೂ ಹೇಡಿಗಳಾಗಿಲ್ಲವೆಂದು ತಮಗೆ ಖಂಡಿತವಾಗಿ ಗೊತ್ತಿದೆಯೆಂದು ಅವರು ಹೇಳಿದರು.

ಕೊನೆಗೆ ಇಂಥ ಪತ್ರಗಳು ಇಂಗ್ಲೀಷಿನಲ್ಲಿ— ಅದೂ ಅಶುದ್ಧ ಇಂಗ್ಲೀಷಿನಲ್ಲಿ—ಬರೆಯಲ್ಪಡುತಿವೆಯೆಂದು ಗಾಂಧೀಜಿ ವಿಷಾದಪಟ್ಟರು. ಸ್ವಭಾಷೆಯನ್ನು ಆದರಿಸಲು ಇನ್ನೂ ಅನೇಕರು ಕಲಿತಿಲ್ಲ ಇದು ದುಃಖದ ಸಂಗತಿ.

೯–೪–೪೭

ಪ್ರಾರ್ಥನೆಯಾದ ಮೇಲೆ, ಅಂದು ಸುಚೇತಾ ಕೃಪಲಾನಿಯವರು ತಮ್ಮ ಮಧುರ ಉಚ್ಚ ಕಂಠದಿಂದ ಹಾಡಿದ ಗಾಂಧೀಜಿಯ ಮಮತೆಯ ಪ್ರಾರ್ಥನಾ ಪದ್ಯದ ಬಗ್ಗೆ ಅವರು ಮಾತಾಡಿದರು. ಹಿಂದಿನ ಬಾರಿ ತಾವು ದಿಲ್ಲಿಗೆ ಬಂದಿದ್ದಾಗ ಈ ಪ್ರಾರ್ಥನೆಯನ್ನು ಮುದ್ರಿಸಿ ಹಂಚಲಾಗಿತ್ತೆಂದು ಅವರು ಸಭಿಕರ ನೆನಪಿಗೆ ತಂದುಕೊಟ್ಟರು. ನಾವೆಲ್ಲರೂ ಈ ಪ್ರಾರ್ಥನೆಯ ಉಪದೇಶದಂತೆ ನಡೆದುಕೊಂಡರೆ ಹಿಂದುಸ್ತಾನ ಬಾಳಲು ಯೋಗ್ಯವಾದ ನಾಡಾದೀತು. ಅದಕ್ಕಾಗಿ ಸಾಯುವದೂ ಗೌರವಾಸ್ಪದವಾದೀತು. ದೇವರೊಬ್ಬನಿಗಲ್ಲದೆ ಮತ್ತಾರಿಗೂ ಏತಕ್ಕೂ ಬೆದರಬಾರದು. ಮತ್ತು ಆದರಿಂದ ಬಲಾತ್ಕಾರ ಎಷ್ಟೇ ಇದ್ದರೂ ಅದಕ್ಕೆ ಎಳ್ಳಷ್ಟು ಬಗ್ಗಬಾರದು ಮತ್ತು ನ್ಯಾಯವೆನಿಸಿದ್ದಕ್ಕೆ ಎಷ್ಟು ಬೇಕಾದರೂ ತಲೆಬಾಗಬೇಕೆಂದು ಆ ಪ್ರಾರ್ಥನೆಯ ಅಂತರ್ಯ. ಈ ನಿಯಮವನ್ನು ಪಾಕಿಸ್ತಾನಕ್ಕೆ ಅನ್ವಯಿಸಿದರೆ ಪಾಕಿಸ್ತಾನವನ್ನು ಕಸಿದುಕೊಳ್ಳಲು ಪ್ರಯೋಗಿಸುತ್ತಿರುವ ಅಹಿಂಸೆಯಿಂದ, ಹಿಂದೀಯರಲ್ಲಿ ಎಳ್ಳಷ್ಟು ಧೈರ್ಯವಿದ್ದರೆ,

—೯ ನೇ ಪುಟಕ್ಕೆ

ದಿಲ್ಲಿ ವಿಷ್ಕಂಭಕ

(೮ ನೇ ಪುಟದಿಂದ ಮುಂದರಿದುದು)

ಅದರ ಉದ್ದೇಶವೇ ನಿರರ್ಥಕವಾಗುವದೆಂದು ತಾವು ಹೇಳದಿರಲಾರೆವೆಂದು ಗಾಂಧೀಜಿ ಹೇಳಿದರು

ಈ ಸಂಬಂಧದಲ್ಲಿ ಬಂಗಾಲದ ಮುಖ್ಯಮಂತ್ರಿಗಳು ಮಾಡಿದ್ದೆಂದು ಹೇಳಲಾಗುವ ಭಾಷಣವೊಂದನ್ನು ಗಮನಿಸದಿರುವದು ತಮಗೆ ಸಾಧ್ಯವಿಲ್ಲೆಂದು ಗಾಂಧೀಜಿ ಮುಂದೆ ಸಾಗಿದರು. ಪತ್ರಿಕೆಯ ವರದಿಗಳು ಸರಿಯಾಗಿದ್ದರೆ ಗಾಂಧೀಜಿಯಿಂದ ಮತ್ತು ಸತೀಶ ಬಾಬುವಿನಿಂದ ಬಂದ ವರದಿಗಳ ಮೇಲೆ ತಾವು ಹುಲಿಗೆ ಕೊಳ್ಳಿ ಮೊದಲಾದ ಪ್ರಕರಣಗಳ ಆರೋಪದ ವಿಚಾರಣೆ ನಡೆಸುವದಾಗಿ ಬಂಗಾಲ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗಿನ ದ್ವೇಷ ಸಂಶಯಗಳ ವಾತಾವರಣದಲ್ಲಿ ತಮ್ಮ ಪತ್ನಿಯೊಡನೆ ನೌಖಾಲಿಯ ಹಿಂದೂ ಮುಸ್ಲಿಮರ ಸೇವೆಗಾಗಿ ಜೀವನವನ್ನು ಮೀಸಲಿಟ್ಟ ಸತೀಶಬಾಬುಗಳಂತಹ ಪ್ರಾಮಾಣಿಕ, ನಿಷ್ಠ, ನಿಷ್ಪಕ್ಷಪಾತಿ ಕಾರ್ಯಕರ್ತರ ಜಾಗರೂಕ ವರದಿಯ ಮೇಲೆ ಮುಖ್ಯಮಂತ್ರಿಗಳು ವಿಶ್ವಾಸವಿಡಬೇಕೆಂದು ಗಾಂಧೀಜಿ ಸೂಚಿಸಿದರು. ಸುಳ್ಳು ಸುದ್ದಿಗಳನ್ನು ಹಬ್ಬಿಸುವಲ್ಲಿ ಸತೀಶಬಾಬುಗಳಿಗೆ ಆಸ್ಥೆಯಿಲ್ಲ. ತಾವು ತರಿಸಿಕೊಳ್ಳುವದಾಗಿ ಮುಖ್ಯಮಂತ್ರಿಗಳು ಹೇಳಿದ ವರದಿಗಳು ಬರಲು ತಡವಾಗಬಹುದು. ಮತ್ತು ಅಂಥ ವರದಿಗಳು ಯಾವಾಗಲೂ ನಿಷ್ಪಕ್ಷಪಾತವಾಗಿರುವದಿಲ್ಲೆಂದು ಅನುಭವದಿಂದ ಸಿದ್ಧವಾಗಿದೆ. ಬಂಗಾಲದ ವಿಭಜನೆಗಾಗಿ ಇಂದು ನಡೆಯುತಿರುವ ಚಳವಳಿಗೆ ಮುಖ್ಯ ಮಂತ್ರಿಗಳ ಅಸಮ್ಮತಿಯುಂಟೆಂದೂ ತಮ್ಮ ಗಮನಕ್ಕೆ ಬಂದಿರುವದಾಗಿ ಗಾಂಧೀಜಿ ಹೇಳಿದರು. ಈ ಪ್ರಶ್ನೆಯ ಔಚಿತ್ಯಾನೌಚಿತ್ಯದ ಮಾತು ಬೇರೆ. ಆದರೆ ಬಂಗಾಲ ವಿಭಜನೆಯ ಕೂಗನ್ನು ತಣ್ಣಗೆ ಮಾಡಲು ಹಿಂದುಗಳೊಡನೆ ವಿವೇಕದ ನುಡಿಗಳನ್ನಾಡುವದೇ ಉತ್ತಮೋಪಾಯ. ಯಾವುದನ್ನೂ ಒತ್ತಾಯದಿಂದ ತಾವು ಹೇರಿಸುವವರಲ್ಲವೆಂಬುದನ್ನು ಈಗಲೇ ಕೃತಿಯಿಂದ ತೋರಿಸಿಕೊಡುವದು, ಪಾಕಿಸ್ತಾನದಲ್ಲಿ ಶುದ್ಧ ನಿಷ್ಪಕ್ಷಪಾತ ಮತ್ತು ನ್ಯಾಯ ದೊರಕಬಹುದೇ ಎಂಬ ಬಗ್ಗೆ ಹಿಂದುಗಳಲ್ಲಿರುವ ಸಂದೇಹವನ್ನು ತಮ್ಮ ನ್ಯಾಯಪೂರ್ಣ ಕೃತಿಗಳಿಂದ ಪರಿಹರಿಸುವದು, ಸರಕಾರಿ ನೌಕರಿಗಳಲ್ಲಿ ಮುಸ್ಲಿಮನೆಂಬ ಒಂದೇ ಕಾರಣದಿಂದ ಯಾರನ್ನೂ ನೇಮಿಸಿಕೊಳ್ಳುವದಿಲ್ಲ, ಯೋಗ್ಯತೆಯೇ ಏಕಮಾತ್ರ ಮಾನದಂಡವಾಗಲಿದೆ ಎಂದು ಸಿದ್ಧ ಮಾಡಿ ತೋರಿಸುವದು ಮುಖ್ಯ ಮಂತ್ರಿಗಳಿಗೆ ಸೇರಿದ್ದು, ಎಂದರು ಗಾಂಧೀಜಿ.

ಬಲಾತ್ಕಾರದಿಂದ ಪಾಕಿಸ್ತಾನವನ್ನು ಸೆಳೆದುಕೊಳ್ಳುವೆನೆಂದು ಬಗೆಯುವದು ಪೊಳ್ಳು ಕನಸೆಂದು ತಾವು ಧೈರ್ಯದಿಂದ ಹೇಳಬಲ್ಲೆವೆಂದು ಗಾಂಧೀಜಿ ಮುಗಿಸಿದರು.

೧೦—೪—೪೭

ಇಂದು ೮-೪೫ ಕ್ಕೆ ಮಹತ್ವದ ಬೇರೊಂದು ಕೆಲಸವಿದ್ದುದರಿಂದ ಗಾಂಧೀಜಿಯ ಭಾಷಣ ತೀರ ಸಂಕ್ಷಿಪ್ತವಾಗಿತ್ತು. ಶ್ರೀಮತಿ ಸುಚೇತಾ ಅವರು ಹಾಡಿದ ಬಂಗಾಲಿ ಭಜನೆಯನ್ನು ಸಭಿಕರಿಗಾಗಿ ಅನುವಾದ ಮಾಡಲಾಯಿತು.

ಜನರನ್ನುದ್ದೇಶಿಸಿ ಗಾಂಧೀಜಿ ಹೇಳಿದ್ದು: ಗುರುದೇವರು (ಠಾಕೂರ) ದೇಶಕ್ಕೆ ಬಿಟ್ಟು ಹೋದ ಅನೇಕ ಮಧುರ ಕವಿತೆಗಳಲ್ಲಿ ಇದೊಂದು. ಅದರ ಉದಾತ್ತ ಭಾವನೆ ಇಂದು ನಮಗೆ ಬಹಳ ಸಂಕೇತಪೂರ್ಣವಾಗಿದೆ. ಅದರ ಸಾರಸರ್ವಸ್ವವೆಂದರೆ, ಅಂಧಕಾರಮಯ ರಾತ್ರಿಯಲ್ಲಿಯೂ ಮನುಷ್ಯನು ಪರಮಾತ್ಮಾಭಿಮುಖನಾಗಿ ದಾರಿ ಸಾಗಬೇಕು. ಆಶೆ ಭರವಸೆಗಳನ್ನು ಅವನೆಂದೂ ತೊರೆಯಬಾರದು. ಇಂದು ನಮಗೆ ಬೇಕಾಗಿರುವದೂ ಅವೇ- ಆಸೆ ಮತ್ತು ಭರವಸೆ.

ಇಂದು ತಮಗೆ ಸೂಜ್ಞನೂ ಉಚ್ಚ ಸ್ಥಾನದಲ್ಲಿರುವವನೂ ಆದ ಗೆಳೆಯನೊಬ್ಬನಿಂದ ಬಂದ ಪತ್ರವೊಂದನ್ನು ಗಾಂಧೀಜಿ ಪ್ರಸ್ತಾವಿಸಿದರು. ವಾಯಿಸರಾಯರು ಹಿಂದೀಯರ ಕೈಗೆ ಅಧಿಕಾರವನ್ನು ವರ್ಗಾಯಿಸಲು ಬಂದುದೇ ನಿಜವೆಂಬುದು ಆ ಪತ್ರದ ತಿರುಳು. ವಾಯಿಸರಾಯರು ಬ್ರಿಟಿಶ ರಾಜ ಕುಟುಂಬಕ್ಕೆ ಸೇರಿದವರು. ಅವರು ಬ್ರಿಟಿಶ ಮಂತ್ರಿಮಂಡಲದ ಆದೇಶದಂತೆ ಬಂದಿದ್ದಾರೆ. ಆ ಮಂತ್ರಿಮಂಡಲ ಬ್ರಿಟಿಶ ಜನತೆಯ ಮುಖದಂತಿದೆ, ಎಂದು ಅವರು ಹೇಳಿದರು.

ಅವರ ಧ್ಯೇಯದ ಪ್ರಾಮಾಣಿಕತೆಯಲ್ಲಿ ತನಗೆ ವಿಶ್ವಾಸವಿದ್ದರೂ ಇಲ್ಲಿರುವ ಬ್ರಿಟಿಶ ಅಧಿಕಾರಿ ವರ್ಗದ ಮತ್ತು ವ್ಯಾಪಾರಿ ಹಿತಸಂಬಂಧದ ಸದುದ್ದೇಶ ಸಂಶಯಾಸ್ಪದವಾಗಿದೆಯೆಂದು ಆ ಪತ್ರ ಬರೆದವನು ಹೇಳುತ್ತಾನೆ. ಅವರು ಇನ್ನೂ ಆ ಹಳೆಯ ವಿಚಾರ ಸರಣಿಯಲ್ಲೇ ಇದ್ದಾರೆಂದು ಅವನ ಅಭಿಪ್ರಾಯ. ಈ ಹಿಂದಿನ ಅವರ ಚರ್ಯೆ ಉಚಿತವಾಗಿದ್ದಿಲ್ಲ. ಈ ದೇಶವನ್ನು ಸೂರೆ ಮಾಡಲು ಬೇಕುಬೇಕಾದ್ದನ್ನು ಅವರು ಮಾಡಿದ್ದಾರೆ. ಈ ವರೆಗೆ ಹಿಂದೂ ಮುಸ್ಲಿಮರಲ್ಲಿ ಭೇದಭಾವವನ್ನು ಬಿತ್ತಿ ತಕ್ಕ ಸಂಧಿಗಳಲ್ಲಿ ಜಾತೀಯ ಗಲಭೆಗಳ ನಾಟಕ ಹೂಡಿದವರು ಅವರೆ. ಪ್ರಾಂತಗಳಲ್ಲಿ ಸ್ವಾಯತ್ತ ಸರಕಾರಗಳೊಡನೆ ಅವರ ಅಸಹಕಾರ ನಡೆದೇ ಇದೆ. ವಾಯಿಸರಾಯರು ಯಾವುದನ್ನು ಮಾಡಲು ಬಂದಿದ್ದಾರೋ ಅದರ ತತ್ವಕ್ಕೆ ವ್ಯತಿರಿಕ್ತವಾಗಿ ಇವರು ನಡೆದುಕೊಳ್ಳುತಿದ್ದಾರೆ.

ಈ ಗೆಳೆಯ ಬರೆದುದು ನಿಜವಾಗಿರುವ ಪಕ್ಷದಲ್ಲಿ, ಅದೊಂದು ದುರಂತವೇ ಸರಿಯೆಂದು ಗಾಂಧೀಜಿ ಹೇಳಿದರು. ಆಗ ಇಲ್ಲಿರುವ ಬ್ರಿಟಿಶರು, ಅವರು ನೌಕರಿಯಲ್ಲೇ ಇರಲಿ ವ್ಯಾಪಾರದಲ್ಲೇ ಇರಲಿ, ಹಿಂದುಸ್ತಾನದ ಜನರಲ್ಲಿ ಅಥವಾ ಸ್ವಜನರಲ್ಲಿ ನಿಷ್ಠೆಯುಟ್ಟಂತಾಗಲಿಲ್ಲ. ಅವರು ಶಾಂತಿಯಿಂದ ಅಧಿಕಾರ ಕೊಟ್ಟು ಹೋಗಲು ವಾಯಿಸರಾಯರಿಗೆ ಸಹಾಯ ಮಾಡಿ ನಿಜವಾದ ಗೆಳೆಯರಂತೆ ಹೊರಟುಹೋಗಬೇಕಲ್ಲದೆ ವೈರಿಗಳಂತಲ್ಲ. ಆಗ ಬ್ರಿಟಿಶರ ಕೀರ್ತಿ ಶುಭ್ರವಾಗಿ ಉಳಿದೀತು.

ಸ್ವತಃ ಹಿಂದೀಯರು ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದೆಂದು ಗಾಂಧೀಜಿ ಬಿನ್ನವಿಸಿದರು. ಅವರು ಯಾರಾದರೂ ಒಡ್ಡಿದ ಬಲೆಯಲ್ಲಿ ಸಿಕ್ಕದಿರಲಿ. ಪರಮಾತ್ಮನನ್ನೂ ತಂತಮ್ಮ ಸ್ವಂತ ಅಂತಶ್ಶಕ್ತಿಯನ್ನೇ ಆಧರಿಸಲಿ. ಬೇರೊಬ್ಬನು ಪಶು ಸ್ಥಿತಿಗಿಳಿದನೆಂದ ಮಾತ್ರಕ್ಕೆ ನಾವೂ ಇಳಿಯಬೇಕೆಂಬ ನಿಯಮವಿಲ್ಲ.

೧೧—೪—೪೭

ಇಂದು ಗಾಂಧೀಜಿ ಪ್ರಾರಂಭದಲ್ಲೆ ತಾವು ಶನಿವಾರ ಸಂಜೆಗೆ ಬಿಹಾರಕ್ಕೆ ಮರಳಲಿರುವ ಸುದ್ದಿಯನ್ನು ನೆರೆದವರಿಗೆ ತಿಳಿಸಿದರು. ಜನರನ್ನು ಆವರಿಸಿದ ವಿಷಾದ ಸ್ಪಷ್ಟವಾಗಿ ಗೋಚರಿಸುತಿತ್ತು. ಅಂತರಾತ್ಮನ ಕರೆಯನ್ನನುಸರಿಸಿ ತಾವು ನೌಖಾಲಿಗೆ ಹೋದುದನ್ನು ಗಾಂಧೀಜಿ ವಿವರಿಸಿದರು. ಅಲ್ಲಿ ಹಿಂದುಗಳಲ್ಲಿ ಅಷ್ಟಿಷ್ಟು ಆತ್ಮವಿಶ್ವಾಸವನ್ನು ಉಂಟುಮಾಡಿ ಅವರ ಸೇವೆ ಮಾಡಿದೆನೆಂದೂ ಮುಸ್ಲಿಂರನ್ನೂ ಸೇವಿಸಿದೆನೆಂದೂ ಅವರು ಹೇಳಿಕೊಂಡರು.

ಅದೇ ಪ್ರಕಾರ ತಾವು ಬಿಹಾರಕ್ಕೂ ಹೋದುದಾಯಿತು. ಅಲ್ಲಿ ತಾವು ಮಾಡುವೆವು ಇಲ್ಲವೆ ಮಡಿಯುವೆವೆಂಬ ಪಣ ತೊಟ್ಟಿದ್ದಾಗಿದೆ. ಎರಡೂ ಕಡೆಗಳಲ್ಲಿ ತಮ್ಮ ಕಾರ್ಯ ಅಪೂರ್ಣವಾಗಿ ಉಳಿದಿದೆ. ಎರಡೂ ಕಡೆಗಳಲ್ಲಿ, ಹಿಂದುಗಳೂ ಮುಸ್ಲಿಮರೂ ಅವರೆಷ್ಟೇ ಅಲ್ಪಸಂಖ್ಯೆಯಲ್ಲಿರಲಿ, ಪೂರ್ಣ ಶಾಂತಿ ಸುರಕ್ಷಿತೆಗಳಿಂದ ಬಾಳುವಂತಾದರೇನೇ ತಮಗೆ ತೃಪ್ತಿಯಾದೀತೆಂದು ಅವರು ಹೇಳಿದರು.

ಅಷ್ಟೇ ಕಷ್ಟಕ್ಕೊಳಗಾದ ಮತ್ತು ಕಷ್ಟದಲ್ಲಿರುವ ಪಂಜಾಬಕ್ಕೇಕೆ ನೀವು ಹೋಗಬಾರದೆಂದು ಯಾರಾದರೂ ಕೇಳಬಹುದು. ಅಂತರಾತ್ಮನ ಕರೆ ಬಂದಾಗ ಪಂಜಾಬಕ್ಕೆ ತಾವು ಹೋಗುವದನ್ನು ಯಾರೂ ತಡೆಯಲಾರರು. ಅಲ್ಲಿ ಈಗಲೆ ಹೋಗಬಾರದೆಂದು ಮುಂದಾಳುಗಳು ತಮಗೆ ಸೂಚನೆ ಕೊಟ್ಟಿದ್ದಾರೆ. ಅಲ್ಲಿ ಇಂದು ಹಿಂದೀ ರಾಜ್ಯವಿಲ್ಲದೆ ಬ್ರಿಟಿಶ ರಾಜ್ಯವಿದೆಯೆಂದು ಎಲ್ಲರಿಗೂ ಗೊತ್ತಿದೆ. ಲೀಗ್ ರಾಜ್ಯವಾದರೂ ಕಾಂಗ್ರೆಸ್ ರಾಜ್ಯದಷ್ಟೇ ಭಾರತೀಯ ರಾಜ್ಯವಾಗಿದೆ.

ಹಿಂದೂ ಮತ್ತು ಮುಸ್ಲಿಂ ರಾಜ್ಯವೆಂಬ ವಿಚಾರ ಮನಸಿನಲ್ಲಿ ಪ್ರವೇಶಿದೊಡನೆ ನಾವು ತಪ್ಪು ಹಾದಿ ಹಿಡಿಯುತ್ತೇವೆಂದು ಗಾಂಧೀಜಿ ಎಚ್ಚರಿಸಿದರು. ಅದೊಂದು ಅಪಾಯಕರ ವಿಚಾರ. ನಿಜವಾದ ಪಾಕಿಸ್ತಾನದಲ್ಲಿ- ಪವಿತ್ರ ಭೂಮಿಯಲ್ಲಿ-ಹೋರಾಟವಿರಕೂಡದು ಎಲ್ಲವೂ ವಿವೇಕ ಬುದ್ಧಿಗೆ ಮನಗಾಣಿಸುವ ಮೂಲಕ ನಡೆಯಬೇಕು ಹೊರತು ಬಲಾತ್ಕಾರದಿಂದಲ್ಲ. ತಾವು ಇಲ್ಲಿಂದಲೇ ಪಂಜಾಬಕ್ಕೆ ಬಿನ್ನವಿಸುತಿದ್ದೇವೆ. ಆ ಪ್ರಾಂತಕ್ಕಾಗಲಿ ಅವರ ಜನರಿಗಾಗಲಿ ತಾವೇನೂ ಹೊಸಬರಲ್ಲ. ಬ್ರಿಟಿಶರೊಡನೆ ಕಾಂಗ್ರೆಸ್ಸು ಹೂಡಿದ ಹೋರಾಟ ಯಶಸ್ವಿಯಾಗಲು- ಕೆಲ ಕಾಂಗ್ರೆಸ್ಸಿಗರು ಹಿಂಸಾಚಾರಕ್ಕೆ ಬಿದ್ದರೂ- ಒಟ್ಟಿನ ಮೇಲೆ ಆ ಚಳವಳಿ ಅಹಿಂಸಾತ್ಮಕವಾಗಿ ಉಳಿದುದೇ ಕಾರಣ.

ದಕ್ಷಿಣ ಅಫ್ರಿಕೆಯಲ್ಲಿ ಹಿಂದೀಯರ ಸತ್ಯಾಗ್ರಹ ಹೋರಾಟದ ಇತಿಹಾಸ ಹಿಂದೀಯರು ತಮ್ಮ ತತ್ವಕ್ಕೆ ಅಚಲ ನಿಷ್ಠರಾಗಿ ಉಳಿದುದರಿಂದಲೇ ಅಜರಾಮರವಾಗಿದೆ. ದಕ್ಷಿಣ ಅಫ್ರಿಕೆಯ ಹಿಂದೀಯರ ಪರವಾಗಿ ತಾವು ಎರಡೆರಡು ಬಾರಿ ಇಂಗ್ಲಂಡಿಗೆ ಹೋಗಿದ್ದರೂ ತಮ್ಮ ಬೆಂಬಲಕ್ಕೆ ಸತ್ಯಾಗ್ರಹದ ಶಕ್ತಿ ಇದ್ದಿಲ್ಲವಾದರೆ ಅಲ್ಲಿ ತಮಗೆ ಯಾವ ಯಶಸ್ಸೂ ದೊರೆಯುತ್ತಿರಲಿಲ್ಲವೆಂದು ಹೇಳಿದರು ಗಾಂಧೀಜಿ. ಆದುದರಿಂದ ಪಂಜಾಬದ ಹಿಂದುಗಳು ಸೀಖರೂ ಕೊಲ್ಲದೆ ಸಾಯುವ ಶಪಥ ಮಾಡಬೇಕು. ಸತ್ಯಾಗ್ರಹದ ಅಸುಪಮ ಶಕ್ತಿಯನ್ನು ಮುಂದೊಡ್ಡಿ ತಮ್ಮ ಮೇಲೆ ಪಾಕಿಸ್ತಾನ ಹೇರಿಸಲ್ಪಡುವದನ್ನು ಅವರು ಪ್ರತಿಭಟಿಸಬೇಕೆಂದು ಅವರು ವಿನಂತಿಸಿಕೊಂಡರು.

ತಮ್ಮ ಹಣೆಯಲ್ಲಿ ಹಾಗೆಯೇ ಬರೆದಿದ್ದರೆ ತಮ್ಮ ಅವತಾರ ಕಾರ್ಯದಲ್ಲಿ ಪ್ರಾಣದಾನ ಮಾಡಲು ತಮಗೇನೂ ಭಯವಿಲ್ಲೆಂದು ಗಾಂಧೀಜಿ ಸಾರಿದರು. ಯಾವ ವೈದ್ಯನೂ ರೋಗಿಯನ್ನು ಅವನ ಆಯುರ್ದಾಯಕ್ಕಿಂತ ಹೆಚ್ಚು ಕಾಲ ಬದುಕಿಸಲಾರನೆಂದು ಸಾಯಂ ಪ್ರಾರ್ಥನೆಯ ಪದ್ಯದಲ್ಲಿ ಹೇಳಿರುವದನ್ನು ಜನರು ಕೇಳಿರಬಹುದು ಹಿಂದುಗಳೂ ಸೀಖರೂ ಅಹಿಂಸಕರಾಗಿ ಉಳಿದರೆ ಪಾಕಿಸ್ತಾನವನ್ನು ಬಲವಂತದಿಂದ ಕಸಿದುಕೊಳ್ಳಹೊರಟ ಮುಸ್ಲಿಮರ ಕೃತಿಯನ್ನು ಜಗತ್ತು ಖಂಡಿಸದಿರದು. ಅದು ಜಗತ್ತಿಗೆ ಅದ್ಭುತ ಪಾಠವಾದೀತು.

ತತ್ಕಾಲಕ್ಕೆ ದಿಲ್ಲಿಯಲ್ಲಿ ತಮ್ಮ ಕಾರ್ಯ ಮುಗಿದುದರಿಂದ ತಾವು ಬಿಹಾರಕ್ಕೆ ಮರುಳುತಿದ್ದೇವೆಂದು ಗಾಂಧೀಜಿ ಮುಂದುವರಿದರು. ತಾವು ವೈಸರಾಯರ ಮತ್ತು ನೆಹರೂ ಅವರ ಸೆರೆಯಾಳೆಂದು ಮೊದಲೇ ಹೇಳಿದ್ದೇವೆ. ವೈಸರಾಯರೊಡನೆ ಸದ್ಯಕ್ಕೆ ತಮ್ಮ ಮಾತುಕತೆ ತೀರಿದೆ. ತಮ್ಮನ್ನು ತಮಗೆ ಸರಿದೋರಿದಲ್ಲಿ ಹೋಗದಂತೆ ತಡೆಯುವಷ್ಟು ಸಂಕುಚಿತ ಬುದ್ಧಿ ಜವಾಹರಲಾಲಜಿಯದಲ್ಲ. ತಾವು ಗೀತೆಯ ಉಪಾಸಕರು. ಹೊರಗಿನ ಕಾರ್ಯ ಎಷ್ಟೇ ಘನವಾದುದೆಂದು ತೋರಿದರೂ ಸ್ವಕ್ಷೇತ್ರದಲ್ಲಿ ಕರ್ತವ್ಯವೆಂದು ಕಂಡುಬಂದುದನ್ನು ಮಾಡುವದೇ ಯಾವಾಗಲೂ ಉತ್ತಮವೆಂದು ಗೀತೆ ಉಪದೇಶಿಸುತ್ತದೆ.

ಮುಂದುವರಿಯುತ್ತ ಗಾಂಧೀಜಿ ಮುಖ್ಯ ಮಂತ್ರಿ ಸುಹ್ರವರ್ದಿಯವರ ಹೇಳಿಕೆಯಿಂದ ತಮಗೆ ಬಹಳ ನೋವಾಗಿದೆಯೆಂದರು. ತನ್ನ ಮನಸ್ಸಿನಲ್ಲಿ ಏನಾದರೂ ಶಂಕಾನುಮಾನಗಳಿದ್ದರೆ ಅವನ್ನು ತನ್ನ ಗೆಳೆಯನಿಗೆ ಹೇಳಿಬಿಡುವದು ಪ್ರತಿಯೊಬ್ಬನ ಕರ್ತವ್ಯ. ಸತೀಶ ಬಾಬುಗಳು ಬೇಕೆಂದು ಸತ್ಯದಿಂದ ವಿಚಲಿತರಾಗುವರಲ್ಲವೆಂದು ವಿಶ್ವಾಸವಿದ್ದೇ ಅವರ ತಂತಿಗಳನ್ನು ತಾವು ಪ್ರಸಿದ್ಧಗೊಳಿಸಿದೆವು. ನೌಖಾಲಿಯ ಘಟನೆಗಳ ಬಗ್ಗೆ ಎದ್ದ ಶಂಕೆಗಳು ನಿರಾಧಾರವೆಂದು ಸಿದ್ಧ ಮಾಡಿ ತೋರಿಸುವದು ಶಹೀದ ಸಾಹೇಬರ ಕರ್ತವ್ಯವಾಗಿತ್ತು. ಬದಲಿಗೆ ಈ ತಂತಿಗಳನ್ನು ಪ್ರಸಿದ್ಧಿಗೆ ಕೊಟ್ಟದ್ದರಿಂದಲೇ ಕಲಕತ್ತೆಯಲ್ಲಿ ಹಿಂಸಾಚಾರದ ಪುನರುತ್ಥಾನವಾಯಿತೆಂದು ಹೇಳುವದು ಕೇವಲ ಅನುಚಿತ.

ಸತ್ಯಾಗ್ರಹಿಯಾಗಿರುವದರಿಂದ ತಾವು ಸತ್ಯಸಂಧರಾಗಿದ್ದೇವೆಂದು ಗಾಂಧೀಜಿ ಹೇಳಿದರು. ಆದುದರಿಂದ ಯಾವುದೆಂದು ಶಂಕೆಯನ್ನು ಮುಚ್ಚಿಡುವದಾಗಲಿ ಒಳಗೊಳಗೇ ಯಾವುದೊಂದು ದೂರನ್ನಿಟ್ಟುಕೊಂಡು ಬೆಳೆಸುವದಾಗಲಿ ತಮಗೆ ಸಲ್ಲದ ಕೆಲಸ. ಮುಖ್ಯ ಮಂತ್ರಿಗಳ ಸಹಾಯವಿಲ್ಲದೆ ಬಂಗಾಲದ ಹಿಂದೂ ಮುಸ್ಲಿಮರ ಸೇವೆ ಮಾಡುವದು ತಮಗೆ ಸಾಧ್ಯವಿಲ್ಲ. ಆ ಸಹಾಯವನ್ನವರು ತಡೆದಿಡಲಿಕ್ಕಿಲ್ಲೆಂದು ತಮಗೆ ಆಸೆಯುಂಟು. ಅದೇ ಪ್ರಕಾರ ಅಹಿಂಸೆಯನ್ನು ಗಂಟುಕಟ್ಟಿ ಇಟ್ಟು ಪಂಜಾಬದ ಹಿಂದುಗಳಿಗೂ ಸೀಖರಿಗೂ ಸತ್ಯ ಮಾರ್ಗವನ್ನು ಬೋಧಿಸದಿದ್ದರೆ ತಾವು ಅವರ ಗೆಳೆಯರೆನಿಸಿಕೊಳ್ಳಲು ಯೋಗ್ಯರಲ್ಲ.

ಉಪಸಂಹಾರಮಾಡುತ್ತ ಗಂಧೀಜಿ ಹೇಳಿದ್ದು: “ಬಡವನಾಗಿ ನಾನು ಯಾವಾಗಲೂ ರೇಲಿನ ಮೂರನೆ ವರ್ಗದಲ್ಲೆ ಪ್ರಯಾಣ ಮಾಡುತ್ತೇನೆ. ಜನರು ಯಾವಾಗಲೂ ನಿಲ್ದಾಣಗಳಲ್ಲಿ ನನ್ನನ್ನು ಪೀಡಿಸುವದರಿಂದ ನಾನು ವಿಮಾನದಲ್ಲಿ ಹಾರಬೇಕೆಂದು ಅನೇಕರು ಹೇಳುತ್ತಾರೆ. ಜನರು ಅವಕಾಶ ಕೊಟ್ಟರೆ ನಾನು ರೇಲು ಗಾಡಿಯಲ್ಲಿ ನಿದ್ರಿಸಬಹುದು. ನನಗೆ ವಿಶ್ರಾಂತಿ ಬೇಕು. ನಿಮ್ಮೆಲ್ಲರ ಸೇವೆ ಮಾಡಬೇಕಾದರೆ ನಾನು ಸತ್ವವನ್ನು ಕಾಯ್ದಿರಿಸುವದೂ ಅವಶ್ಯವಾಗಿದೆ. ನನ್ನ ಮೇಲೆ ಪ್ರೀತಿಯುಳ್ಳವರೆಲ್ಲರೂ ಈ ಮಾತನ್ನು ಲಕ್ಷಿಸಬೇಕೆಂದು ಕೋರುವೆ. ಅವರ ಪ್ರೀತಿ ಸಂಯಮರಹಿತವಾಗದಿರಲಿ.”

೧೨—೪—೪೭

ನಾಳೆ ರವಿವಾರ ರಾಷ್ಟ್ರೀಯ ಸಪ್ತಾಹದ ಕೊನೆಯ ದಿನವೆಂದು ಗಾಂಧೀಜಿ ಭಾಷಣವನ್ನು ಪ್ರಾರಂಭಿಸಿದರು. ಅಸಾಮದಿಂದ ಗಡಿನಾಡಿನವರೆಗೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಅದು ಆಚರಿಸಲ್ಪಡುವದು. ಮೊದಲನೆ ದಿನ ಜಾಗೃತಿಯ ಪ್ರಾರಂಭದ ದ್ಯೋತಕವಾಗಿದೆ. ಕೊನೆಯದು- ಜಾಲಿಯಾನವಾಲಾಬಾಗ ದಿನ- ಆತ್ಮ ಸಮರ್ಪಣೆಯದು. ಆ ದಿನದ ದುರಂತ ಘಟನೆಗಳ ವಿವರವನ್ನು ನೆನೆದುಕೊಳ್ಳುವ ಅವಶ್ಯಕತೆಯಿಲ್ಲ. ಆದರೆ ಅಂದು ಹಿಂದು, ಮುಸ್ಲಿಂ, ಸೀಖರ ರಕ್ತ ಒಂದೇ ಪ್ರವಾಹವಾಗಿ ಹರಿಯಿತೆಂದು ನೆನೆದುಕೊಳ್ಳಬೇಕು. ಎಪ್ರಿಲ ೧೩ ರ ಸ್ಮರಣೆಗಾಗಿ ಇಂದು ದುರ್ದೈವದಿಂದ ಭಿನ್ನ ಭಿನ್ನವಾದ ಐಕ್ಯವನ್ನು ಪುನಃ ಸಾಧಿಸುವ ಪಣ ತೊಡುವದು ಎಲ್ಲರ ಕರ್ತವ್ಯ. ವಿದೇಶೀಯರು ಹಿಂದುಸ್ತಾನದಲ್ಲಿನ ಜಾತೀಯ ದಂಗೆಗಳನ್ನು ಕುರಿತು ಕೇಳಿದಾಗ ತನ್ನ ಮುಖ ನಾಚಿಕೆಯಿಂದ ಹೋಲತೊಡಗುವದೆಂದು ಗಾಂಧೀಜಿ ಹೇಳಿದರು.

ಹೊಣೆಗಾರ ಪತ್ರಿಕೆಯೊಂದರಲ್ಲಿ ತಾವು ಕಾಂಗ್ರೆಸ್ ಕಾರ್ಯಸಮಿತಿಯೊಡನೆ ಜಗಳಾಡಿದ್ದರಿಂದಲೇ ಹೊರಟುಹೋಗುತಿರುವದಾಗಿ ಸುದ್ದಿ ಪ್ರಕಟವಾದುದರಿಂದ ಗಾಂಧೀಜಿ ನೊಂದುಕೊಂಡರು. ಆ ಸುದ್ದಿ ತೀರ ಸುಳ್ಳು. ಅಂದು (ಶನಿವಾರ) ದಿಲ್ಲಿಯಲ್ಲಿದ್ದ ಕಾರ್ಯಸಮಿತಿ ಸದಸ್ಯರೆಲ್ಲರೂ ತಮ್ಮೊಡನೆ ಒಂದು ತಾಸು ಕಾಲಕಳೆದಿದ್ದರು. ಮತಭೇದವೇನೇ ಇದ್ದರೂ ಚರ್ಚೆ ತೀರ ಸೌಹಾರ್ದದಿಂದಲೇ ಯಾವಾಗಲೂ ನಡೆಯುತಿರುತ್ತದೆ. ತಾವು ಜಗಳಾಡಿದರೆ ಹೊರಟು ಹೋಗಲು ವಾಯಿಸರಾಯರ ಅಥವಾ ಜವಾಹರಲಾಲರ ಒಪ್ಪಿಗೆಯನ್ನು ಏಕೆ ಕೇಳಬೇಕಾಗಿತ್ತು? ಸರದಾರರು ಇನ್ನೆಂದು ಮರಳುವಿರೆಂದು ಕೇಳಿದಾಗ “ ನೀವು ಕರೆಕಳಿಸಿದಾಗ ” ಎಂದು ತಾವು ಉತ್ತರ ಕೊಟ್ಟದ್ದೆವು. ಆದುದರಿಂದ ಸುಳ್ಳು ಸುದ್ದಿಯನ್ನು ಪ್ರಸಿದ್ಧಿಸಿ ಅನಾವಶ್ಯಕವಾಗಿ ಜನರನ್ನು ಚಂಚಲಗೊಳಿಸಿ ತಪ್ಪುದಾರಿ ಹಿಡಿಸಿದ್ದು ಪತ್ರಿಕೆಗಳ ದೊಡ್ಡ ತಪ್ಪು. ದುರ್ದೈವದಿಂದ ಸಾಮಾನ್ಯ ಮನುಷ್ಯನಿಗೆ ಪತ್ರಿಕೆಗಳು ಧರ್ಮಗ್ರಂಥಗಳಿಗಿಂತಲೂ ಮಿಗಿಲಾಗಿಬಿಟ್ಟಿವೆ. ಪತ್ರಿಕೆಗಳನ್ನೋದುವದನ್ನು ಬಿಟ್ಟುಬಿಡಬೇಕೆಂದು ಉಪದೇಶಿಸುವ ಮನಸ್ಸು ತಮಗಾಗುತಿದೆ. ಅದರಿಂದೇನೂ ಹಾನಿಯಿಲ್ಲ. ಬದಲಿಗೆ ಧರ್ಮಗ್ರಂಥಗಳನ್ನು ಇತರ ಸತ್ಸಾಹಿತ್ಯವನ್ನು ಓದಿ ಬುದ್ಧಿಗೆ ನಿಜವಾದ ಊಟ ಮಾಡುವದೊಳಿತು ಎಂದರವರು.

ಹುಚ್ಚೆದ್ದು ಕುಣಿಯುವ ವಿಜ್ಞಾನ

(೧೦ ನೇ ಪುಟದಿಂದ ಮುಂದರಿದುದು)

ಅಲ್ಪೋಪಯೋಗ ವಸ್ತುಗಳಿಂದ ಹೆಂಡು ದೆಂಡಾದ ದೇಶದಲ್ಲಿ ಹೀಗೆ ಮಾಡುವದು ಶಾಸ್ತ್ರೀಯವಾಗಬಹುದೆ?

ಲ್ಯಾಲಪೂರ ಒಕ್ಕಲತನ ಕಾಲೇಜಿನ ಮುಖ್ಯಾಧ್ಯಾಪಕರು ಮೈದಾ ಉತ್ಪಾದನೆಯ ತಜ್ಞರಿದ್ದಾರೆ. ಗೋದಿಯಲ್ಲಿಯ ಎಲ್ಲ ಸತ್ವಗಳನ್ನು ಹಿಂಡಿ ಒಗೆದು ಕೇವಲ (ಬೂದಿಯಂಥ) ಹಿಟ್ಟನ್ನ ಪ್ರತ್ಯೇಕಯಾರಿಸುವ ವಿದ್ಯುತ್ ಸಾಧನಗಳು ಅಲ್ಲಿ ಇವೆ. ತಿರುಗುವ ರೊಟ್ಟಿಯ ಭಟ್ಟಿಯೊಂದು ಅಲ್ಲುಂಟು. ಇದೆಲ್ಲದರ ಉದ್ದೇಶವೇನೆಂದರೆ ಜೇನು ಹುಟ್ಟನಂಥ ಬಿಳೀ ರೊಟ್ಟಿಯನ್ನು (ಬ್ರೆಡ್) ತಯಾರಿಸುವದು. ಇದು ಕೇವಲ ಶ್ವೇತ ಮೈದಾದಿಂದ ಸಾಧ್ಯವಾಗುತ್ತದೆ. ಈ ಮುಖ್ಯಾಧ್ಯಾಪಕರಿಗೆ 'ಆಹಾರ ಸಂಹಾರಕ' ರೆಂದೇ ಕರೆಯುವದೇ ಹೆಚ್ಚು ಯೋಗ್ಯವಾಗಲಾರದೆ? ಹೆಚ್ಚು ಶಾಸ್ತ್ರೀಯವಾಗಲಾರದೆ? ಬಹಳ ಕಾಲದಿಂದ ತೊಳಲುತ್ತಿದ್ದ ದೇಶದಲ್ಲಿ ಇಂಥವರಿಗೆ ಸ್ಥಾನವಿದೆಯೆ?

ಗಿರಣಿಗಳ ಸಹಾಯದಿಂದ ನಿಸರ್ಗವು ಆಹಾರದಲ್ಲಿಟ್ಟ ಪೌಷ್ಟಿಕತೆಯನ್ನು ಹಾಳು ಮಾಡುವ ಹುಚ್ಚು ನಮ್ಮ ತಲೆಯಲ್ಲಿ ಸೇರಿದೆ. ಅಂತೆಯೇ ಗಿರಣೀ ಅಕ್ಕಿ, ಗಿರಣೀ ಸಕ್ಕರಿ, ವನಸ್ಪತಿ ತುಪ್ಪಗಳನ್ನು ಬಳಕೆಯಲ್ಲಿ ತಂದಿದ್ದೇವೆ. ಇದೇ ವಿಜ್ಞಾನದಿಂದಾಗುವ ಲಾಭವೆ?

ಹರಿಜನ ವಸತಿಗಳು

ಹರಿಜನ ಕಾರ್ಯಕರ್ತನ ಗೌರವಾರ್ಥ ಹರಿಜನ ಕೇರಿಯಲ್ಲಿ ಏರ್ಪಡಿಸಿದ್ದ ಭೋಜನ ಸಮಾರಂಭಕ್ಕೆ ಹೋಗಿ ಬಂದದ್ದರಿಂದ ಸವರ್ಣರ ಕೇರಿಯಲ್ಲಿದ್ದ ತಮ್ಮ ನೆರೆಹೊರೆಯ ವೈಶ್ಯರೂ ಬ್ರಾಹ್ಮಣರೂ ತನ್ನನ್ನು ತನ್ನ ಬಾಡಿಗೆಯ ಮನೆಯಲ್ಲಿ ಪ್ರವೇಶಿಸಗೊಡಲಿಲ್ಲೆಂದು ಓರ್ವ ಸ್ನೇಹಿತನು ಬರೆದಿದ್ದಾನೆ. ನಂತರ ಅವನು ಬೇರೊಬ್ಬ ಕಾಂಗ್ರೆಸಿಗನಲ್ಲಿ ಆಶ್ರಯ ಪಡೆಯಬೇಕಾಯಿತು.

ಹರಿಜನರಿಗಾಗಿ ಪ್ರತ್ಯೇಕ ವಸತಿಯನ್ನು ನೇಮಿಸಿ ಕೊಡದೆ ಹಳ್ಳಿಯಲ್ಲಿಯೆ ಅವರಿಗೂ ವಾಸಕ್ಕೆ ಸ್ಥಳ ಕೊಡಬೇಕೆಂದು ಈಗ ಪ್ರಾಂತಿಕ ಸರಕಾರಗಳಿಗೆ ಸೂಚಿಸಲಾಗಿದೆ.

ಜನರ ಭಾವನೆಗಳನ್ನು ನಾವು ಗೌರವಿಸುತ್ತೇವೆ. ಇಂಥ ವಿಷಯಗಳಲ್ಲಿ ಸಾರ್ವಜನಿಕ ಅಭಿಪ್ರಾಯದಿಂದಲೆ ಸರಕಾರದ ಕೃತಿ ಸ್ಫೂರ್ತಿಗೊಳ್ಳಬೇಕು. ಈ ಮೇಲಿನ ಉದಾಹರಣೆಯಿಂದ ಹರಿಜನೋದ್ಧಾರಕ್ಕಾಗಿ ದುಡಿಯುವವರು ಯೋಗ್ಯ ಧೋರಣ ಸ್ವೀಕರಿಸುವಂತಾಗಲಿ.

—ಜೆ. ಸಿ. ಕು.

ದಿಲ್ಲಿಯಲ್ಲಿ ಗಾಂಧೀಜಿ

ಅಲ್ಪಾವಧಿಯ ವರೆಗಾದರೂ ಗಾಂಧೀಜಿಯವರ ಸಹವಾಸ ಲಾಭವು ದೊರೆತುದು ಸುಸಂಧಿಯಾಗಿತ್ತು. ಸದಾ ತಮ್ಮ ಸಾನ್ನಿಧ್ಯ ಬಯಸುವವರಿಗೆ ಅವರು ತಮ್ಮ ಕಾರ್ಯವನ್ನು ಬೇರೆ ಬೇರೆ ರೀತಿಯಲ್ಲಿ ಒಪ್ಪಿಸಿಕೊಟ್ಟು ಅವರ ವೈಯಕ್ತಿಕ ಸೇವೆಯನ್ನು ಮಾತ್ರ ಎಷ್ಟು ಮಾತ್ರವೂ ಒಪ್ಪುತ್ತಿರಲಿಲ್ಲ. ಅದರೂ ಅವರು ಒಂದು ರೀತಿಯಲ್ಲಿ ಗಾಂಧೀಜಿಯವರ ನಿಕಟವರ್ತಿಗಳಾಗಿದ್ದರೆಂದೇ ಹೇಳಬಹುದು. ಇನ್ನೂ ತಾವೂ ತಮ್ಮ ಸಂಚಾರಯಾತ್ರೆಯಲ್ಲಿ ಇಡೀ ದೇಶವನ್ನೇ ಕಬಳಿಸುತ್ತಿರುವ ಜಾತೀಯ ಜ್ವಾಲೆಯನ್ನು ಅಹಿಂಸಾ ಜಲದಿಂದಲೆ ನಂದಿಸಬೇಕೆಂದು ತತ್ಕಾರ್ಯ ಸಾಧನೆಗಾಗಿ ದೇವರನ್ನೇ ಸಂಪೂರ್ಣವಾಗಿ ಮೊರೆಹೊಕ್ಕಿದ್ದರು.

ಅದೊಂದೇ ಭಾವನೆ ಈಗ ಗಾಂಧೀಜಿಯವರನ್ನು ವ್ಯಾಪಿಸಿದೆ. ಬೇರೆ ಯಾವ ವಿಷಯಕ್ಕೂ ಮಹತ್ವವಿಲ್ಲವೆಂಬುದು ಅವರು ಅಲ್ಲಲ್ಲಿ ಮಾಡಿದ ಪ್ರಾರ್ಥನೋತ್ತರ ಭಾಷಣಗಳಿಂದ ಸ್ಪಷ್ಟವಾಗುತ್ತದೆ. ಹೊಸ ವೈಸರಾಯರೊಡನೆ ಮಾತುಕತೆ ನಡೆಸಲೆಂದು ಇವರು ಇಲ್ಲಿಗೆ ಬಂದರೂ, ಅನೇಕ ವಿಷಯಗಳಲ್ಲಿ ಇವರ ಸಲಹೆಯ ಲಾಭ ತಮಗೆ ದೊರಕುವದೆಂದು ನಡುಗಾಲ ಸರಕಾರದ ಮಂತ್ರಿಗಳಿಗೆ ಆನಂದವಾಗಿದ್ದರೂ ಇವರ ಮನಸು ಮಾತ್ರ ಬಂಗಾಲ, ಬಿಹಾರ ಮತ್ತು ಪಂಜಾಬಗಳಲ್ಲಿ ತೊಡಗಿಕೊಂಡಿತ್ತು.

ಜಾತೀಯ ಹೋರಾಟವು ಅವ್ಯಾಹತವಾಗಿ ಹೀಗೇ ಸಾಗಿದರೆ ನಮಗೆ ದೊರೆಯಲಿರುವ ರಾಜಕೀಯ ಸ್ವಾತಂತ್ರ್ಯದಿಂದೇನೂ ಪ್ರಯೋಜನವಾಗದು ಎಂದು ಗಾಂಧೀಜಿಯವರು ಪದೇ ಪದೇ ಸ್ಪಷ್ಟವಾಗಿ ತಿಳಿಸಿದ್ದಾರೆ. ಶಾಂತಿ ಸ್ಥಾಪನೆಗಾಗಿ ಬ್ರಿಟಿಶ ಸೈನಿಕರನ್ನು ನಂಬುತ್ತ ಕುಳಿತರೆ ಆ ಸ್ವಾತಂತ್ರ್ಯವು ನಮ್ಮ ಸ್ವಾತಂತ್ರ್ಯವು ಆಗಲಿಕ್ಕಿಲ್ಲ. ಏನೇ ಆಗಲಿ, ರಾಜಕೀಯ ಸ್ವಾತಂತ್ರ್ಯದೊಡನೆ ದೇಶದಲ್ಲಿ ಸತ್ಯ ಪ್ರೇಮಗಳ ಸಾಮ್ರಾಜ್ಯ ಸ್ಥಾಪಿತವಾಗದಿದ್ದರೆ ಆ ಸ್ವಾತಂತ್ರ್ಯದಿಂದೇನೂ ಉಪಯೋಗವಿಲ್ಲ.

ಗಾಂಧೀಜಿಯವರು ಇಲ್ಲಿ ಬಂದ ಮೂರು ದಿನಗಳ ವರೆಗೆ ಪ್ರಾರ್ಥನಾ ಸಭೆಯಲ್ಲಿ ಕುರಾಣ ಪಠನಕ್ಕೆ ಯಾರೋ ಆಕ್ಷೇಪವೆತ್ತಿದ್ದರಿಂದ ಆ ಮೂರು ದಿನವೂ ಪ್ರಾರ್ಥನೆ ನಡೆಸಲು ಅವರಿಗೆ ಅವಕಾಶವಾಗಲಿಲ್ಲ. ಹಿಂದೂ—ಮುಸ್ಲಿಂರಲ್ಲಿ ಅಷ್ಟೊಂದು ಗಾಢ ವೈಮನಸ್ಸು ತುಂಬಿಕೊಂಡಿದೆ. ಪ್ರಾರ್ಥನೆಗಾಗಿ ಜನಸಮೂಹವು ನಿತ್ಯ ನೆರೆಯುತ್ತಿತ್ತು. ಆದರೆ ಒಬ್ಬಾನೊಬ್ಬ ಆಕ್ಷೇಪಕನಿದ್ದರೂ ಸಾಕು, ಗಾಂಧೀಜಿಯವರು ಪ್ರಾರ್ಥನೆ ನಡೆಸುತ್ತಿದ್ದಿಲ್ಲವಾದ್ದರಿಂದ ನೆರೆದ ಜನರು ನಿರಾಶೆಯಿಂದ ಹಿಂತಿರುಗಬೇಕಾಗುತ್ತಿತ್ತು. ಪ್ರಾರ್ಥನಾ ಸಭೆಯಲ್ಲಿ ಬರಿ ವಿರೋಧಕರೇ ತುಂಬಿದ್ದರೆ ತಾವು ಸಂತೋಷದಿಂದ ಪ್ರಾರ್ಥನೆ ನಡೆಸಿ ವಿರೋಧಕರು ತಮ್ಮನ್ನು ಕೊಲ್ಲಬಯಸಿದರೆ ರಾಮರಹಿಮ ನಾಮೋಚ್ಚಾರಣೆಯಿಂದ ಆ ಸಾವನ್ನೆದುರಿಸುವ ಧೈರ್ಯವೂ ತಮ್ಮಲ್ಲಿದೆ ಎಂಬುದನ್ನು ತೋರಿಸಿಕೊಡಬಹುದಾಗಿತ್ತು ಎಂದರು ಗಾಂಧೀಜಿ. ಪ್ರಾರ್ಥನಾ ಸಭೆಯಲ್ಲಿದ್ದ ಪ್ರಾರ್ಥನೇಚ್ಛುಗಳಲ್ಲಿ ಮತ್ತು ವಿರೋಧಕರಲ್ಲಿ ಹೋರಾಟ ಅವರಿಗೆ ಬೇಡವಾಗಿತ್ತು. ಮೂರು ದಿನಗಳ ನಂತರ ವಿರೋಧಿಗಳು ತಲೆ ಮರೆಸಿಕೊಂಡರು. ಕೊನೆಗೆ ಅಹಿಂಸೆಗೇ ಗೆಲುವಾಯಿತು. ಅವರ ವಿರೋಧದಲ್ಲಿ ಏನೂ ಹುರುಳಿರಲಿಲ್ಲ. ಆದರೆ ಪಂಜಾಬದ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಂ ತಲೆತಿರುಕರು ಇತ್ತೀಚೆಗೆ ನಡೆಸಿದ ಅತ್ಯಾಚಾರಗಳನ್ನು ಕಂಡು ಎಲ್ಲೆಲ್ಲಿಯೂ ಹಿಂದುಗಳ ತಲೆ ತಿರುಗಿದೆ. ಕೋಪತಾಪದ ಪತ್ರ, ಪ್ರಶ್ನೆಗಳ ಸುರಿಮಳೆ ನಡೆದಿದೆ. ಗಾಂಧೀಜಿಯವರು ತಾವು ಮುಸ್ಲಿಂರೆಂದು ಹೇಳಿಕೊಂಡಿದ್ದೀರಿ, ರಾಮರಹಿಮರಲ್ಲಿ ಭೇದವಿಲ್ಲೆಂದು ಸಾರಿದ್ದೀರಿ, ಕಲ್ಮಾ ಪಠಣಕ್ಕೆ ಆಕ್ಷೇಪವಿಲ್ಲೆಂದು ಪಂಜಾಬಕ್ಕೆ ಏಕೆ ಹೋಗಲಿಲ್ಲ, ನೀವು ದುಷ್ಟ ಹಿಂದುಗಳಲ್ಲವೆ, ಪಂಚಮದಳದವರಲ್ಲವೆ, ನಿಮ್ಮ ಅಹಿಂಸೆಯು ಹಿಂದುಗಳನ್ನು ಹೇಡಿಗಳನ್ನಾಗಿ ಸುತ್ತಿಲ್ಲವೆ ಎಂಬ ಅನೇಕಾನೇಕ ಪ್ರಶ್ನೆಗಳು ದಿನಾಲೂ ಬರುತ್ತಿವೆ. ಅವರಿಗೆ ಬಂದ ಒಂದು ಪತ್ರದ ಮೇಲಂತೂ 'ಮಹಮ್ಮದ ಗಾಂಧಿ' ಎಂದು ವಿಳಾಸವಿತ್ತು.

ಗಾಂಧೀಜಿಯವರು ತಾಳ್ಮೆಯಿಂದ ಶಾಂತಚಿತ್ತದಿಂದ ವಾದಿಸಿದರು. ಕೆಲವರ ಪಾಪಕ್ಕಾಗಿ ಇಸ್ಲಾಂನ್ನು ಹೇಗೆ ಮತ್ತು ಏಕೆ ದೂಷಿಸಬೇಕು? ಸಹಿಷ್ಣುತೆಯೆ ಹಿಂದೂ ಧರ್ಮದ ಆದೇಶ ಸಕಲ ಧರ್ಮಗಳ ಸಾರವಾಗಿರುವದರಿಂದ ತಾವು ಸನಾತನಿ ಹಿಂದುಗಳು, ತಾವು ಶುದ್ಧ ಹಿಂದುಗಳಾಗಿದ್ದಷ್ಟೇ ಶುದ್ಧ ಮುಸ್ಲಿಂರೂ ಸಚ್ಚ ಕ್ರೈಸ್ತರೂ ಆಗಿರುವದಾಗಿ ಹೇಳಿದರು. ಮೇಲ್ಮೆಯನ್ನು ಬಯಸುವದು ಧರ್ಮವಿರುದ್ಧವಾದುದು. ಅಹಿಂಸೆಗೆ ಸವಿನಯವು ಅತ್ಯಾವಶ್ಯಕ. ಹಿಂದೂ ಪುರಾಣಗ್ರಂಥಗಳಲ್ಲಿ ದೇವರಿಗೆ ಸಹಸ್ರ ನಾಮಗಳನ್ನು ನಿರ್ದೇಶಿಸಿಲ್ಲವೆ? "ಅವುಗಳಲ್ಲಿ ರಹಿಮ ಹೆಸರೂ ಒಂದಾಗಿರಬಾರದೇಕೆ? ಕಲ್ಮಾವು ದೇವರನ್ನು ಸ್ತುತಿಸಿ ಮಹಮ್ಮದರು ದೇವದೂತರೆಂದಿಷ್ಟೆ ಹೇಳಿದೆ. ದೇವರನ್ನು ಸ್ತುತಿಸುವಲ್ಲಿ ನನ್ನಲ್ಲಿ ಚಾಂಚಲ್ಯವಿಲ್ಲ. ಬುದ್ಧ ಝೊರೋಸ್ಟರ—ಯೇಸೂರನ್ನು ದೇವದೂತರೆಂದು ನಾನು ಒಪ್ಪಿದಂತೆ ಮಹಮ್ಮದರನ್ನೂ ದೇವದೂತರೆಂದು ಭಾವಿಸಿದ್ದೇನೆ" ಎಂದರು ಗಾಂಧೀಜಿ. ತಾವಿಲ್ಲಿಗೆ ಬಂದು ವೈಸರಾಯರೊಡನೆ, ಮುಖಂಡರೊಡನೆ ವಿಚಾರವಿನಿಮಯದಲ್ಲಿ ತೊಡಗಿರುವದರಿಂದ ನೌಖಾಲಿ, ಬಿಹಾರ ಪಂಜಾಬಗಳಲ್ಲಿಯ ತಮ್ಮ ಕಾರ್ಯವನ್ನು ಕಡೆಗಣಿಸಿದ್ದೇನೆಂದು ಭಾವಿಸಬೇಕಾಗಿಲ್ಲವೆಂದರು. ಕರೆ ಬಂದೊಡನೆ ಪಂಜಾಬಕ್ಕೆ ಹೋಗುವ ತಮ್ಮನ್ನು ಯಾರೂ ತಡೆಯಲಾರರು. ಈಗ ಪಂಜಾಬದಲ್ಲಿ ಹಿಂದೀ ರಾಜ್ಯವಿಲ್ಲ, ಬ್ರಿಟಿಶ ಗವರ್ನರನ ಆಡಳಿತೆ ನಡೆದಿದೆ. ತಾವು ಎಲ್ಲಿದ್ದರೂ ಈ ಎಲ್ಲ ಪ್ರದೇಶಗಳಿಗಾಗಿಯೆ ದುಡಿಯುತ್ತಿರುವದಾಗಿ ತಿಳಿಸಿದರು. "ನಾನೆಂತು ಪಂಚಮದಳದವನಾಗಬಲ್ಲೆ? ಪಂಜಾಬದಲ್ಲಿ ಹಿಂದುಗಳ ಶೀಖರ ಕಗ್ಗೊಲೆ ನಡೆಯಿತೆಂದು ನನ್ನ ಅಹಿಂಸೆಯನ್ನು ನಾನು ಪಾತಾಳಕ್ಕೆಸೆಯಲಾರೆ. ಬಿಹಾರದಲ್ಲಿಯ ಹಿಂದುಗಳು ಇಷ್ಟೇ ಅತ್ಯಾಚಾರವೆಸಗಿದ್ದಾರೆ. ಹಿಂದು-ಮುಸ್ಲಿಂರು ಕೋಪಾಸೂಯೆಗಳನ್ನು ತಮ್ಮ ಹೃದಯದಿಂದ ಕಿತ್ತು ಹಾಕಬೇಕು. ಹಿಂಸಾವಲಂಬನವು ಹೆಚ್ಚಿನ ಅತ್ಯಾಚಾರಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಅವರಿಬ್ಬರಿಗೂ ಹೇಳುವದು ನನ್ನ ಕರ್ತವ್ಯವಾಗಿದೆ" ಪರರಾಷ್ಟ್ರ ಪ್ರತಿನಿಧಿಗಳು ಬಂದು ಜಾತೀಯ ಗಲಭೆಯ ವಿಷಯವನ್ನು ತಮ್ಮೊಡನೆ ಪ್ರಸ್ತಾಪಿಸಿದಾಗ ತಮಗೆ ಹೇಗೆ ನಾಚಿಕೆಯಿಂದ ತಲೆ ಕೆಳಗೆ ಹಾಕಬೇಕಾಯಿತೆಂಬುದನ್ನು ತಿಳಿಸಿದರು. ಈ ತಲೆತಿರುಕತನ ಕೆಲವರಲ್ಲಿಯೆ ಸೇರಿದೆ, ಬೇಗನೆ ಇದು ನಷ್ಟವಾಗಲಿ ಎಂದು ತಾವು ಪ್ರಾರ್ಥಿಸುತ್ತಿರುವದಾಗಿ ಅವರಿಗೆ ಹೇಳಬೇಕಾಯಿತು. ಯಾವ ಧರ್ಮದವರೇ ಇರಲಿ, ಭಾರತೀಯರು ಕೂಡಿ ಇರಬೇಕಾಗಿದೆ. ಅವರೆಲ್ಲ ಒಬ್ಬಳೆ ಭೂಮಿತಾಯಿಯ ಮಕ್ಕಳು, ಅವಳ ಎದೆ ಹಾಲಿನಿಂದಲೆ ಬೆಳೆದವರು. ಭಾರತವು ಬದುಕಿ ಬಾಳಬೇಕಾದರೆ ಈ ಪರಸ್ಪರ ಹಿಂಸೆ ನಡೆಯಬಾರದು.

ರಾಷ್ಟ್ರೀಯ ಸಪ್ತಾಹದ ನಿಜಾರ್ಥವನ್ನು ಅವರು ಅಮೌಲಿಕ ಭಾಷೆಯಲ್ಲಿ ತಿಳಿಸಿದರು. ಎಪ್ರಿಲ ಆರನೇ ತಾರೀಖಿನ ದಿನ ಉಪವಾಸ ನಡೆಸಿ ಪ್ರಾರ್ಥನೆ ಮಾಡಬೇಕು ಎಂದು ಅವರು ಅನೇಕ ವರ್ಷಗಳ ಹಿಂದೆ ಮಾಡಿಕೊಂಡ ಬಿನ್ನಹಕ್ಕೆ ಈಗ ಕಲ್ಪನಾತೀತವಾಗಿ ಇಡೀ ರಾಷ್ಟ್ರದ ಪುರಸ್ಕಾರ ದೊರೆತಿದೆ. ಭಾರತದ ಪ್ರತಿಯೊಂದು ಹಳ್ಳಿಯಲ್ಲಿಯೂ ಇಂದು ರಾಷ್ಟ್ರೀಯ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಪಲಿತ, ನಿರ್ಗತಿಕ ಅಜ್ಞಾನಿ ಸಮಾಜಕ್ಕೆ ಸ್ವಾತಂತ್ರ್ಯದಿಂದ ನವಜೀವನ ದೊರೆಯಬಲ್ಲದೆಂಬ ಆಶೆಯಿಂದ ಅಪೂರ್ವ ಜಾಗ್ರತಿಯುಂಟಾದುದೆ ಈ ಸಪ್ತಾಹದ ಉತ್ಸವದ ಆರಂಭದ ದ್ಯೋತಕ. ಆದರೆ ಈ ಸ್ವಜನಘಾತಕ ಹೋರಾಟವು ಆ ನವಜೀವನವನ್ನು ನೀಡಬಲ್ಲದೆ? ಪ್ರತಿಯೊಬ್ಬನೂ ಈ ಪ್ರಶ್ನೆಯನ್ನು ವಿಚಾರಿಸಬೇಕು. ಈ ಸಪ್ತಾಹದ ಕೊನೆಯ ದಿನವಾದ ಹುತಾತ್ಮರ (ಜಾಲಿಯಾನವಾಲಾ ಬಾಗವನ್ನು ತಮ್ಮ ನೆತ್ತರಿನ ಹೊಳೆಯಿಂದ ನೆನೆಸಿದ ಹಿಂದೂ, ಮುಸ್ಲಿಂ, ಶೀಖ ವೀರರ) ದಿನವು ನಮ್ಮ ಉದ್ಧಾರ ವಿಮೋಚನೆಗಳಿಗೆ ಕಾರಣವಾದ ಐಕ್ಯದ ಕುರುಹಾಗಬೇಕು. ಆ ಐಕ್ಯವನ್ನು ಸಾಧಿಸಲು ನಾವು ಪುನಃ ನಮ್ಮ ಪ್ರಾಣಗಳನ್ನು ಮೀಸಲಾಗಿಡಬೇಕು.

ನಿಃಸ್ವಾರ್ಥ ಸೂತ್ರಯಜ್ಞವು ಇಡೀ ವಾರ ನಡೆಯಿತು. ದಿನಗಳೆದಂತೆ ರಾಟೆಯಲ್ಲಿ ಗಾಂಧೀಜಿಯವರ ನಂಬುಗೆ ಹೆಚ್ಚುತಿದೆ. ಇಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನೀವು ಮನಶ್ಶಾಂತಿಯನ್ನು ಪಡೆದುದು ಹೇಗೆ ಎಂದು ಕೇಳಿದ ಚೀನಿ ಸ್ನೇಹಿತರೊಬ್ಬರಿಗೆ "ರಾಟೆ ತಿರುಗಿಸಿರಿ. ಅದರ ಸಂಗೀತವು ನಿಮ್ಮ ಆತ್ಮಕ್ಕೆ ಶಾಮಕವಾಗುವದು. ನಾವು ನೂಲುವ ನೂಲು ನಮ್ಮ ಜೀವನದ ಹರಿದುಹೋದ ಎಳೆಗಳನ್ನು ಸರಿಪಡಿಸುವದರಲ್ಲಿ ಸಹಾಯಕವಾಗುವದೆಂದು ನಾನು ನಂಬಿದ್ದೇನೆ. ನಿಜವಾದ ಜೀವನದ ತಳಹದಿಯಾದ ಅಹಿಂಸೆಯ ಕುರುಹಾಗಿದೆ ಈ ರಾಟೆ" ಎಂದು ಗಾಂಧೀಜಿ ಉತ್ತರಿಸಿದರು.

ದಿಲ್ಲಿಯ ಪುರಾಣಾ ಕಿಲ್ಲೆಯಲ್ಲಿ ಸೇರಿದ್ದ ಏಶಿಯಾ ಪರಿಷತ್ತಿನ ಕೊನೆಯ ಬಹಿರಂಗಾಧಿವೇಶನದಲ್ಲಿ ನೆರೆದಿದ್ದ ಅಪಾರ ಜನ ಸಮುದಾಯವು ಗಾಂಧೀಜಿಯವರನ್ನು ಅಪೂರ್ವವಾಗಿ ಸ್ವಾಗತಿಸಿತು. ಗಾಂಧೀಜಿಯವರು ತಮ್ಮ ಸಹಜ ಸುಂದರ ಮಾತಿನಿಂದ ಆ ಪರಿಷತ್ತಿನ ಪ್ರತಿನಿಧಿಗಳಿಗೆ ಭಾರತದ ಪರವಾಗಿ ಸ್ವಾಗತ ಕೋರಿದರು. ಇದೊಂದು ಸಂಸ್ಮರಣೀಯ ಘಟನೆ. ಈ ಪರಿಷತ್ತು ಪ್ರಥಮ ಸಲ ಭಾರತದಲ್ಲಿ ಸೇರಿದ್ದು ಉಚಿತವೆಂದೂ ಗಾಂಧೀಜಿ ಅಂದರು. ಜಗತ್ತಿಗೆ ಎಲ್ಲ ಮಹತ್ವದ ಧರ್ಮಗಳನ್ನು ನೀಡಿದ್ದು ಪೂರ್ವವೆ. ಏಶಿಯಾದ ಎಲ್ಲ ಮಹಾತ್ಮರು ಸಾರಿದಂತೆ ಶಾಂತಿ ಸದಿಚ್ಛೆಗಳ ಸಂದೇಶದ ಮುಖಾಂತರವೇ ಏಶಿಯಾವು ಜಗತ್ತಿಗೆ ಏನನ್ನಾದರೂ ನೀಡಬಲ್ಲದು. ಸತ್ಯ ಶೋಧನೆಗಾಗಿ ಹೊರಟ ಮೂವರು ಫ್ರೆಂಚ ಸಾಧುಗಳ ಕತೆಯನ್ನು ಗಾಂಧೀಜಿಯವರು ಹೇಳಿ ಅವರಲ್ಲಿ ಭಾರತಕ್ಕೆ ಬಂದವನಿಗೆ ಅವನಿಗೆ ಬೇಕಾದದ್ದು ಹರಿಜನ ಕುಟುಂಬವೊಂದರಲ್ಲಿ ದೊರೆಯಿತು, ಎಂದು ತಿಳಿಸಿದರು. ದಿಲ್ಲಿಯಲ್ಲಿ ಭಾರತವನ್ನು ಕಂಡಿದ್ದೇವೆ ಎಂದು ಇಲ್ಲಿಗೆ ಬಂದಿರುವ ಪ್ರತಿನಿಧಿಗಳು ಭಾವಿಸಬಾರದು. ನಿಜವಾದ ಭಾರತವು ಅದರ ಏಳು ಲಕ್ಷ ಹಳ್ಳಿಗಳಲ್ಲಿದೆ. ಜಗತ್ತಿನ ಭದ್ರವಾದ ಪುನರ್ವ್ಯವಸ್ಥೆಗೆ ಹಿಂದೀ ಸಂಸ್ಕೃತಿಯಿಂದೇನಾದರೂ ನೆರವಾಗಬೇಕಾಗಿದ್ದರೆ ಭಾರತದ ರಾಜಕೀಯ ಸ್ವಾತಂತ್ರ್ಯ ಸನ್ನಿಹಿತವಾಗಿರುವಾಗ ಈ ಅಪಾರ ಗ್ರಾಮಸ್ಥ ಜನತೆಯಲ್ಲಿ ಪುನಃ ಜೀವಕಳೆ ತುಂಬಬೇಕು ಎಂದರು ಗಾಂಧೀಜಿ.

ಪರಿಷತ್ತಿನ ಎಲ್ಲ ಪ್ರತಿನಿಧಿಗಳೂ ಬಾಪುವಿನ ಕಡೆಗೆ ಬಂದು ಬರಿ ಆಶೀರ್ವಾದವನ್ನಲ್ಲ ಆದರೆ ಆಶಾ ಸಂದೇಶವನ್ನು ಕೇಳುತ್ತಿರುವ ದೃಶ್ಯ ಹೃದಯಸ್ಪರ್ಶಿಯಾಗಿತ್ತು. ಅಮರ ಬುದ್ಧನ ಸಂದೇಶವನ್ನು ಪುನರುಜ್ಜೀವಿಸುವದೇ ನಿಮ್ಮ ಕರ್ತವ್ಯವೆಂದು ಬಾಪೂ ತಿಬೇಟದ ಪ್ರತಿನಿಧಿಗಳಿಗೆ ಹೇಳಿದರು. ಗಾಂಧೀಜಿಯವರು ಅರಬರಿಗೆ ಸಹಾನುಭೂತಿ ತೋರಿಸಿ ಯಹುದಿಗಳನ್ನು ಪ್ರೀತಿಯಿಂದ ನಡೆಸಿಕೊಂಡು ನಿಮ್ಮ ಹಿತಕ್ಕಾಗಿ ಅವರು ದುಡಿಯುವಂತೆ ಮಾಡಿರಿ ಎಂದು ಹೇಳಿದರು. ಯಹೂದಿಗಳು ತಮ್ಮ ವಿಧ್ವಂಸಕ ಚಟುವಟಿಕೆಗಳನ್ನು ನಿಲ್ಲಿಸಬೇಕು. ಹಿಂಸೆಯಿಂದ ನಿಮಗೇನೂ ಲಾಭವಿಲ್ಲೆಂದು ಬಾಪೂ ಯಹೂದಿ ಪ್ರತಿನಿಧಿಗಳಿಗೆ ಸಹಾನುಭೂತಿ ತೋರಿದರು. ಇಂಡೋನೇಶಿಯನರಿಗೂ ವೀಟನಾಮರಿಗೂ ಸಹ ಅಹಿಂಸೆಯ ಉಪದೇಶವನ್ನೇ ಇತ್ತರು. ಹಿಂಸೆಯಿಂದ ಅಧಿಕ ಹಿಂಸೆಯೇ ಹುಟ್ಟುವದು. ಅನ್ಯಾಯದ ತಳಹದಿಯ ಮೇಲೆ ಶಾಶ್ವತವಾಗಿ ಯಾವದನ್ನೂ ಕಟ್ಟಲಾಗುವದಿಲ್ಲ. "ನಾವು ಈ ವರೆಗೆ ಕಂಡವರಿಗಿಂತ ಇವರು ತೀರ ಭಿನ್ನರಾಗಿದ್ದಾರೆ" ಎಂದು ಒಬ್ಬ ಪ್ರತಿನಿಧಿಯು ನನಗೆ ಹೇಳಿದನು. "ಇವರನ್ನು ಕಾಣುವ ಸೌಭಾಗ್ಯ ನಮಗೆ ದೊರೆತಿರದಿದ್ದರೆ ನಮ್ಮ ಭಾರತ ಸಂಚಾರ ಅಪೂರ್ಣವಾಗುತ್ತಿತ್ತು" ಎಂದು ಇತರರು ಹೇಳಿದರು. "ಇಂಥ ಮುಖಂಡನು ದೊರೆತುದು ನಿಮ್ಮ ಸುದೈವ" ವೆಂದು ಒಬ್ಬ ಸ್ತ್ರೀ ಪ್ರತಿನಿಧಿಯು ಹೇಳಿದಳು. "ನಮಗೆ ಇಂಥ ಮುಖಂಡನು ದೊರೆತಿದ್ದರೆ ನಾವು ರಕ್ತಪಾತ ನಡೆಸಬೇಕಾಗಿರಲಿಲ್ಲ" ವೆಂದೂ ಸೂಚಿಸಿದಳು. ಆದರೆ ನಮ್ಮಲ್ಲಿಯ ಕೆಲವರು ಈ ಅಹಿಂಸೆಯ ಅರ್ಥ ಮಾಡಿಕೊಂಡಿಲ್ಲವಲ್ಲಾ ಎಂದು ನನಗೆ ವ್ಯಸನವಾಯಿತು. ಹೀಗಿದ್ದದ್ದರಿಂದಲೆ ನಮ್ಮಲ್ಲಿ ಎಷ್ಟು ಜನ ನಿಜವಾಗಿ ಗಾಂಧೀಜಿಯವರಿಗೆ ಪ್ರಾಮಾಣಿಕರಾಗಿದ್ದೇವೆ?

ಹೊಸದಿಲ್ಲಿ ಅ. ಕು.
೧೬-೪-೪೭

ಹುಚ್ಚೆದ್ದು ಕುಣಿಯುವ ವಿಜ್ಞಾನ

(ಶ್ರೀ ಜೆ. ಸಿ. ಕುಮಾರಪ್ಪಾ)

ಇದೇ ತಿಂಗಳ ಪ್ರಾರಂಭದಲ್ಲಿ ಪುಣೆಯಲ್ಲಿ ರಾಷ್ಟ್ರೀಯ ರಾಸಾಯನಿಕ ಪ್ರಯೋಗ ಶಾಲೆಯ ಅಡಿಗಲ್ಲನ್ನು ಸ್ಥಾಪಿಸಲಾಯಿತು. ವೈಜ್ಞಾನಿಕರ ಬುದ್ಧಿಯು ಜನಸಾಮಾನ್ಯರ ಹಿತದ ಸಲುವಾಗಿಯೇ ವೆಚ್ಚವಾಗಬಹುದೆಂದು ನಂಬಿದ್ದೇವೆ.

ಉದ್ದಿಮೆಗಳಿಂದುದ್ಭೂತವಾದ ಕೃತ್ರಿಮ ಪ್ರವಾಹದಲ್ಲಿ ಸಿಕ್ಕ ಗ್ರಾಮೋದ್ಯೋಗಗಳು ತಮ್ಮ ಗುಣಗಳ ಬಲದಿಂದಲೇ ಜೀವ ಉಳಿಸಿಕೊಳ್ಳಲು ಯತ್ನಿಸುತ್ತಿವೆ. ಕಾಲಹೊತ್ತುಗಳ ಪರಿವೆಯಿಲ್ಲದೆ ಗ್ರಾಮೋದ್ಯೋಗಗಳ ವಿರುದ್ಧ ಪ್ರಚಾರ ಸಾಗಿವೆ. ನಿಜವಾದ ಪ್ರಗತಿಯೂ ಮತ್ತು ಭೂಮಿಯ ಸಂಪತ್ತಿನ ಸಂಪೂರ್ಣ ವಿನಿಯೋಗವೂ ಗ್ರಾಮೋದ್ಯೋಗಗಳಿಂದಲೇ ಆಗುವದು. ಸಮಸ್ತ ವೈಜ್ಞಾನಿಕ ಪ್ರಯೋಗ ಶಾಲೆಗಳ ಬೆಂಬಲವಿದ್ದರೂ ಉದ್ದಿಮೆಗಳಿಂದ ಹಾನಿ ತಪ್ಪಲಾರದೆಂದು ನಾವು ಹಿಂದಿನ ಸಂಚಿಕೆಯಲ್ಲಿ ತೋರಿಸಿಕೊಟ್ಟಿದ್ದೇವೆ.

ವನಸ್ಪತಿ ತುಪ್ಪದ ಕಾರ್ಖಾನೆಗಳ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ಬಂಡವಲದಾರರು ಎತ್ತಿನ ಗಾಣಗಳನ್ನು ಮತ್ತು ದುಗ್ಧಾಲಯಗಳನ್ನು ಹೇಗೆ ಹತ್ತಿಕ್ಕುತ್ತಿದ್ದಾರೆಂಬುದನ್ನು ನಾವು ಎತ್ತಿ ತೋರಿಸಿದ್ದೇವೆ. ಕಾರಖಾನೆ ಹಾಗು ಉದ್ದಿಮೆಗಳಿಂದುಂಟಾಗುವ ಅನಾಹುತಗಳ ಬಗ್ಗೆ ಕಣ್ಣು ಮುಚ್ಚಿ ಕೇಂದ್ರ ಸರಕಾರವು ಹೊಸ ಕಾರ್ಖಾನೆಗಳ ಸ್ಥಾಪನೆಗೆ ಅನುಜ್ಞೆ ಕೊಟ್ಟು ಈ ಆಕ್ರಮಣಕ್ಕೆ ಹೇಗೆ ಸಹಾಯ ಮಾಡುತ್ತಿದೆಂಬುದನ್ನು ತೋರಿಸಿದ್ದೇವೆ.

ಗಿರಣೀ ಅಕ್ಕಿಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವದೆಂದು ಶಾಸ್ತ್ರೀಯ ರೀತಿಯಿಂದ ಸಿದ್ಧವಾಗಿದೆ ಆದರೆ ಈ ದುಷ್ಪರಿಣಾಮಗಳನ್ನು ಲೆಕ್ಕಿಸದೆ ಸೀದಾಪದ್ಧತಿಯಿಂದ ಗಿರಣೀ ಅಕ್ಕಿಯನ್ನೆ ಹಂಚಲಾಗುತ್ತಿದೆ. ತಿರವಾಂಕೂರು ತೋರಿಸಿದ ಉತ್ತಮ ಮಾರ್ಗವನ್ನು ಅನುಸರಿಸಿ ನಮ್ಮ ಲೋಕಪ್ರಿಯ ಸರಕಾರಗಳು ಎಲ್ಲ ಅಕ್ಕೀ ಗಿರಣಿಗಳನ್ನೇಕೆ ಮುಚ್ಚಿಸಬಾರದು ?

ಕೈಯಿಂದ ತಯಾರಿಸಲ್ಪಟ್ಟ ಸಕ್ಕರೆಗೆ ಪ್ರೋತ್ಸಾಹನ ಕೊಡಬಾರದೆಂಬ ಪರಿಪತ್ರವನ್ನು ಕೇಂದ್ರ ಸರಕಾರವು ಕಳೆದ ನವಂಬರದಿಂದ ಪ್ರಾಂತಿಕ ಸರಕಾರಗಳಿಗೆ ಕಳಿಸುತ್ತಿದೆ. ಈ ಪ್ರಶ್ನೆಯನ್ನು ಶಾಸ್ತ್ರೀಯ ದೃಷ್ಟಿಯಿಂದ ಪರಿಶೀಲಿಸಿ ಅರಣ್ಯಗಳಲ್ಲಿಯ ಹಾಗೂ ಪಡ ಭೂಮಿಯಲ್ಲಿಯೂ ಬೆಳೆಯುತ್ತಿರುವ ಸಿಂದೀಗಿಡಗಳನ್ನು ನಾವು ಉಪಯೋಗಿಸಿಗೊಂಡರೆ ಸಾವಿರಾರು ಎಕರೆ ಬೆಳೆಯುಳ್ಳ ಭೂಮಿಯಲ್ಲಿ ನಾವು ಆಹಾರ ಧಾನ್ಯಗಳನ್ನು ಬೆಳೆದುಕೊಳ್ಳಬಹುದು.

ಸಿಂದೀಗಿಡಗಳಿಂದ ಬೆಲ್ಲವನ್ನೂ ಸಕ್ಕರೆಯನ್ನೂ ತಯಾರಿಸಬಹುದು. ಈ ಯೋಜನೆಯನ್ನು ಅಮಲಿನಲ್ಲಿ ತಂದರೆ ಅದು ಪಾನನಿರೋಧ ಯೋಜನೆಗೆ ಪೂರಕವಾಗುವದು, ಯಾಕಂದರೆ ಅದರಿಂದ ಪಾನನಿರೋಧದಿಂದ ನಿರುದ್ಯೋಗಿಗಳಾದ ಸಾವಿರಾರು ಸಿಂದಿಗಾರರಿಗೆ ಉದ್ಯೋಗ ದೊರಕುವದು. ಆದರೆ ಇದರಿಂದ ಸಕ್ಕರೆಯ ಉದ್ಯೋಗಕ್ಕೆ ಹೊಡೆತ ಬೀಳುವದರಿಂದ ಸಕ್ಕರೆ ಉದ್ದಿಮೆದಾರರು ಇದನ್ನು ವಿರೋಧಿಸುವರು. ಸರಕಾರವು ಇವರ ಸಂಕಷ್ಟಗಳನ್ನಷ್ಟೇ ಕೇಳಿಕೊಳ್ಳುವಂತೆ ತೋರುತ್ತದೆ.

ಆಹಾರ ತಜ್ಞರು ಬೆಲ್ಲದಲ್ಲಿ ಖನಿಜಪದಾರ್ಥಗಳೂ ಜೀವನ ಸತ್ವಗಳೂ ಸಕ್ಕರೆಯೂ ಇರುವವೆಂದೂ ಅದಕ್ಕಾಗಿ ಬೆಲ್ಲವೇ ಉತ್ತಮ ಆಹಾರವೆಂದೂ ಹೇಳುವರು. ಬೇರೆ ಆಹಾರದಲ್ಲಿಂದ ತನ್ನಕ್ಕಿಲ್ಲದ ಸತ್ವವನ್ನು ಹೀರಿಕೊಂಡೆ ಸಕ್ಕರೆಯು ಹೊಟ್ಟೆಯಲ್ಲಿ ಪಚನವಾಗುತ್ತದೆ. ಆದ್ದರಿಂದ ಇದಕ್ಕೆ ಉತ್ಪಾದನೆಗೆ ಕಾರಣವಾಗುವ ರಾಸಾಯನವೆನ್ನಬಹುದು ಇಷ್ಟೇ. (ಅಂದರೆ ಅದು ಆಹಾರವಾಗಲಾರದು). ಅಮೇರಿಕನ್ನರು ಸಕ್ಕರೆಗೆ ಸತ್ವಹೀರುವ ಆಹಾರವೆಂದು ಕರೆಯುತ್ತಾರೆ. ಕಾರ್ಖಾನೆಯ ಸಕ್ಕರೆಗಿಂತ ಕೈಯಿಂದ ತಯಾರಿಸಲ್ಪಟ್ಟ ಸಕ್ಕರೆಯಲ್ಲಿ ಹತ್ತುಪಟ್ಟು ಕಬ್ಬಿಣ ಅಂಶವು ಹೆಚ್ಚಿರುವದು. ಕೈಯಿಂದ ತಯಾರಿಸಲ್ಪಟ್ಟ ಸಕ್ಕರೆಯಲ್ಲಿ ಇಷ್ಟೆಲ್ಲ ಗುಣಗಳಿದ್ದರೂ ಕೇಂದ್ರ ಸರಕಾರವು ಅದಕ್ಕೆ ಅರ್ಧಚಂದ್ರವನ್ನು ಕೊಡಲು ನೋಡುತ್ತಿದೆ. ಎಷ್ಟೋ ಭಾಗಗಳಲ್ಲಿ ಕಾರ್ಖಾನೆಯಲ್ಲಿ ತಯಾರಾದ ಚೌಕೋನ ಸಕ್ಕರೆಗೆ ಸೀದಾ ನಿರ್ಬಂಧವಿಲ್ಲ. ಈ ಸಕ್ಕರೆಯನ್ನು ಸಿರಿವಂತರು ಎಷ್ಟು ಬೇಕಷ್ಟು ಕೊಂಡುಕೊಳ್ಳುವರು. ಅವರಿಗೆ ಯಾವ ನಿರ್ಬಂಧವಿಲ್ಲ. ಆರ್ಥಿಕ ಶಕ್ತಿಯ ಮಿತಿಯೊಂದೇ ನಿರ್ಬಂಧ!

ಆಜ್ಞೆಯನ್ನು ಶಿರಸಾವಹಿಸಲು ಯಾವಾಗಲೂ ಸಿದ್ಧವಿದ್ದ ಪ್ರಾಂತಿಕ ಸರಕಾರಗಳಿಗೆ ಸ್ವಲ್ಪ ಸೂಚನೆ ಕೊಟ್ಟರೆ ಸಾಕು ಅವು ಕಠೋರ ಉಪಾಯಗಳನ್ನು ಯೋಜಿಸುವವು. ಸಂಯುಕ್ತ ಪ್ರಾಂತ ಸರಕಾರವು ಖಾಂಡಸಾರಿ ಸಕ್ಕರೆಯ ನಿಯಂತ್ರಣಾಜ್ಞೆ (ನವಂಬರ ೧೯೪೬)ಯಿಂದ ಖಂಡಸಾರಿ ಮತ್ತೂ ದೇಶೀ ಚೀನಿ ಸಕ್ಕರೆಗಳ ತಯಾರಿಕೆಯನ್ನು ಗೊತ್ತಿಗೆ ಹಚ್ಚುತ್ತಿದೆ.

ಸದ್ಯದ ಘಟನೆಗಳನ್ನು ನಿರೀಕ್ಷಿಸಿದರೆ ನಾವು ವೈಜ್ಞಾನಿಕ ಹಗ್ಗದ ಉರುಲು ಹಾಕಿಕೊಂಡು ಸಾಯುವವರಿದ್ದೇವೆಂದು ಅನಿಸುತ್ತದೆ. ಶ್ರಮ ಉಳಿಸುವ ಯಂತ್ರಗಳನ್ನು ಬಳಕೆಯಲ್ಲಿ ಹಚ್ಚಿ, ಕೆಲಸಗಳು ಇಲ್ಲದಂತೆ ಮಾಡುವ ಸಾಧನಗಳನ್ನು ಯೋಜಿಸಿ ನಮ್ಮ ಸರಕಾರವು ಜನಸಾಮಾನ್ಯರ ಉದ್ಯೋಗಗಳ ಮೇಲೆ ಗದೆ ಎತ್ತುತ್ತಿದೆಂದು ತೋರುತ್ತದೆ. ನಿರುದ್ಯೋಗ ಮತ್ತು

—೯ ನೇ ಪುಟಕ್ಕೆ

ಬೆಳಗಾವಿ

ಮುಂಬಯಿ ಸರಕಾರದ ಒಕ್ಕಲತನದ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರು ಡಾ. ಗಿಲ್ಡರರೊಡನೆ ದಿನಾಂಕ ೨೨ಕ್ಕೆ ಆಗಮಿಸಿ ದಡ್ಡಿ ಯೋಜನೆಯ ಸ್ಥಳ ಪರಿಶೀಲಿಸಲು ದಡ್ಡಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಿ ಬಂದರು. ಮಂತ್ರಿಗಳು ಬೆಳಗಾವ ಜಿಲ್ಹೆಯ ಎರಡು ನೀರಾವರಿ ಯೋಜನೆಗಳನ್ನು ವಿವರಿಸಿ ಆದಷ್ಟು ಬೇಗನೆ ಅವುಗಳನ್ನು ಕೈಕೊಳ್ಳಲಾಗುವದೆಂದು ನುಡಿದರು.

ಮಹಿಲಾ ವಿದ್ಯಾಲಯದ ಮುಖ್ಯಾಧ್ಯಾಪಕರಾದ ಶ್ರೀಮತಿ ಬನೂಬಾಯಿ ಅಹೊ ಅವರು ಇಂಡಿಯನ್ ಪ್ರೆಸ್ ಅಸೋಸಿಯೇಸ್ ಎಂಬ ಸುದ್ದಿ ಸಂಸ್ಥೆಯ ಡೈರೆಕ್ಟರರಾಗಿ ಬರುವ ವರ್ಷ ಲಂಡನಿಗೆ ತೆರಳುವವರಿದ್ದಾರೆ.

ಗೋಕಾಕ ತಾಲೂಕ ಮೂಲದಿನ್ನಿಯಲ್ಲಿ ಲಂಚ ನಿರ್ಮೂಲನ ಶಾಖೆಯವರು ಬಸವಣ್ಣೆಪ್ಪ ಮುಳಗುಂದ ಅವರ ಮನೆ ಶೋಧ ಮಾಡಲಾಗಿ ಕಣಕೆಯಲ್ಲಿ ಹುಗಿದಿಟ್ಟ ೨೦೦ ಗ್ಯಾಲನ್ನ ದೇಶೀ ಸರಾಯಿ ೨೦ ಗ್ಯಾಲನ. ಕಟ್ಟಿಗೆಗಟ್ಟ ಸರಾಯಿ ಹಾಗು ಕಾಗದಪತ್ರಗಳು ಸಿಕ್ಕವು. ಗೋಕಾವಿಯಲ್ಲಿಯು ಅವರ ಮನೆ ಶೋಧಿಸಲು ೧೦ ಚೀಲ ಸೆಜ್ಜಿ, ೨೦ ಪೊಟ ಬೆಲ್ಲ, ಹಾಗು ೧ ಚೀಲ ಗೋದಿ ಸಂಗ್ರಹಿಸಿಟ್ಟದ್ದು ಕಂಡು ಬಂತು. ಪೋಲೀಸರು ಇವನ್ನೆಲ್ಲ ಜಪ್ತ ಮಾಡಿರುವರು. ಶ್ರೀ ಮುಳಗುಂದರು ಗೋಕಾಕ ನಗರ ಸಭೆಯ ಹಿಂದಿನ ಅಧ್ಯಕ್ಷರು.

ಅಥಣಿಯಲ್ಲಿ ಇದೇ ಜೂನದಿಂದ ಕನ್ನಡ ಶಿಕ್ಷಕರ ಟ್ರೇನಿಂಗ ಕಾಲೇಜ ಆರಂಭವಾಗಲಿದೆ. ಅದಕ್ಕಾಗಿ ಸರಕಾರದಿಂದ ಅಪ್ಪಣೆ ದೊರೆತಿದೆ.

ಲಠ್ಠೆ ಯುವರ ರಾಜೀನಾಮೆಯಿಂದ ತೆರವಾದ ಮುಂಬಯಿ ಶಾಸನಸಭೆಯ ಸದಸ್ಯ ಸ್ಥಳದ ಉಪಚುನಾವಣೆ ಇದೆ ೨೩ಕ್ಕೆ ಜರಗಬೇಕಿತ್ತು. ಆದರೆ ಮುಂಬೈಯಿಂದ ತಾ. ೧೭ಕ್ಕೆ ಕಳಿಸಿದ ಮತಪತ್ರಿಕೆಗಳು ಇನ್ನೂ ಅಥಣಿಗೆ ಮುಟ್ಟಿಲ್ಲವಾದರಿಂದ ಈ ಚುನಾವಣೆಯನ್ನು ಮುಂದಕ್ಕೆ ಹಾಕಲಾಗಿದೆ.

ಪುರೋಗಾಮಿ ಪಕ್ಷದ ಧುರೀಣರಾದ ಶ್ರೀ ಶೀಲಭದ್ರ ಯಾಜಿಯವರು ಇಲ್ಲಿಗೆ ಬಂದು ಸಾರ್ವಜನಿಕ ಸಭೆಯಲ್ಲಿ ತಮ್ಮ ಪಕ್ಷದ ಗೊತ್ತುಗುರಿಗಳ ಬಗ್ಗೆ ಭಾಷಣ ಮಾಡಿದರು. ಇಲ್ಲಿಯ ಪತ್ರಿಕಾಕರ್ತರು ಸುಭಾಸಚಂದ್ರ ಬೋಸರ ವಿಷಯವಾಗಿ ಅವರೊಡನೆ ಚರ್ಚೆ ಮಾಡಿದರು.

ಧಾರವಾಡ

ಧಾರವಾಡ ತಾಲೂಕಿನ ಮುಮ್ಮಿಗಟ್ಟಿಯಲ್ಲಿ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ಅಡಿವೆಪ್ಪ ತಮ್ಮಪ್ಪ ಮರಿತಮ್ಮನವರ ಇವರನ್ನು ದಿನಾಂಕ ೨೧ರಲ್ಲಿ ಮಲಗಿಕೊಂಡಾಗ ಯಾರೊ ಬಂದು ಗುಂಡುಹಾರಿಸಿ ಗಾಯಗೊಳಿಸಿದರು. ಕೂಡಲೆ ಅವರನ್ನು ಹಳ್ಳಿಗರು ಧಾರವಾಡ ಆಸ್ಪತ್ರೆಗೆ ತರಲು ಪೋಲೀಸರು ಅಲ್ಲಿ ಅವರ ಹೇಳಿಕೆ ತೆಗೆದುಕೊಂಡರು. ಮರುದಿನ ಮಧ್ಯಾಹ್ನ ಅವರು ಮರಣ ಹೊಂದಿದರು.


ಡಾ. ಬಿ ಕೆ ಆರ್ ಪ್ರಸಾದ ಸುಪರಿಂಟೆಂಡಿಂಗ ಇಂಜಿನೀಯರರು ಇಲೆಕ್ಟ್ರಿಕ್ ಗ್ರಿಡ್ ಇವರು ಧಾರವಾಡ ಬೆಳಗಾವ ಕಾರವಾರ ಜಿಲ್ಹೆಗಳಲ್ಲಿ ದಿನಾಂಕ ೨೪ರಿಂದ ದಿನಾಂಕ ೫-೫-೪೭ರ ವರೆಗೆ ಸಂಚರಿಸುವರು. ಅವರು ಬಂದಾಗ ವ್ಯಾಪಾರಸ್ಥರು ಉದ್ದಿಮೆದಾರರೂ ಅಲಕ್ಷಿಸದೆ ತಮ್ಮ ಬೇಡಿಕೆ ಮಂಡಿಸಬೇಕೆಂದು ಕರ್ನಾಟಕ ವಣಿಕ ಸಂಘದವರು ಪ್ರಕಟನೆ ಹೊರಡಿಸಿದ್ದಾರೆ.

ಹುಬ್ಬಳ್ಳಿಯ ಖಟಾವಕರ ಬಟ್ಟೆಯ ಅಂಗಡಿಯ ಕಟ್ಟೆಯ ಮೇಲೆ ದಿನಾಂಕ ೨೦ರಲ್ಲಿ ೪-೬ ದಿನದ ಒಂದು ಎಳೆಗೂಸನ್ನು ಯಾರೊ ಮಲಗಿಸಿ ಹೋಗಿದ್ದರು. ಬಳಿಕ ಓರ್ವ ಭಿಕ್ಷುಕನು ಅದನ್ನು ಪೋಲೀಸರ ವಶಕ್ಕೊಪ್ಪಿಸಿದನು. ಅದು ಹಿಂದೂ ಶಿಶುವೆಂದು ತಿಳಿದುಬಂದಿದೆ ಮಗುವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

ಕಮ್ಯುನಿಸ್ಟ ಕಾರ್ಯಕರ್ತರಾದ ಶ್ರೀ ಎಸ್ ಎಲ್ ಉಪಾಧ್ಯಾಯರ ಶಿಕ್ಷೆ ರದ್ದಾದ್ದರಿಂದ ಅವರು ಹಿಂಡಲಗಿ ಸೆರೆಮನೆಯಿಂದ ಬಿಡುಗಡೆ ಹೊಂದಿ ಮುಂಬೈ ಪ್ರಾಂತ ಬಿಟ್ಟು ಹೋಗಬೇಕೆಂಬ ಅಜ್ಞೆಯ ಮೇರೆಗೆ ಮದ್ರಾಸಿಗೆ ಹೋದರು.

ಸರಕಾರದ ಅಪ್ಪಣೆಯಿಲ್ಲದೆ ಸೀದಾ ಧಾನ್ಯದ ಆಯಾತ ನಿರ್ಯಾತ ನಡೆಯಲಾರದು. ಪ್ರಯಾಣಿಕರು ತಮಗಾಗಿ ೪ ಸೇರು ಧಾನ್ಯವನ್ನು ಒಯ್ಯಬಹುದೆಂದು ಮುಂಬಯಿ ಸರಕಾರದ ಅಪ್ಪಣೆ ಇಲ್ಲ ಆದ್ದರಿಂದ ಆಹಾರ ಧಾನ್ಯಗಳ ಆಯಾತ ನಿರ್ಯಾತಕ್ಕೆ ಮುಂಚಿತವಾಗಿ ಸರಕಾರದ ಅಪ್ಪಣೆ ಅವಶ್ಯವೆಂದು ಧಾರವಾಡ ಜಿಲ್ಹಾ ಮ್ಯಾಜಿಸ್ಟ್ರೇಟರು ಪ್ರಕಟನೆ ಹೊರಡಿಸಿದ್ದಾರೆ.

ಹುಬ್ಬಳ್ಳಿಯಿಂದ ಲೋಕಮತ ಹಾಗು ವಿಶಾಲ ಕರ್ನಾಟಕ ಎಂಬೆರಡು ವಾರಪತ್ರಿಕೆಗಳು ಬಸವ ಜಯಂತಿಯಿಂದ ಆರಂಭವಾಗಿವೆ.



ವಿಜಾಪುರ

ವಿಜಾಪುರದಲ್ಲಿ ಕರ್ನಾಟಕ ಪ್ರಾಂತಿಕ ಹಿಂದೂಮಹಾಸಭೆಯ ಕೇಂದ್ರವನ್ನು ಸ್ಥಾಪಿಸಲು ಶ್ರೀ ಹಳಕಟ್ಟಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಪ್ರಾಂತಿಕ ಹಿಂದೂ ಮಹಾಸಭೆಯ ಕಾರ್ಯಕಾರೀ ಮಂಡಲದ ಆಯ್ಕೆಯಾಗಿ ಶ್ರೀ ಎಂ. ಸಿ. ಮಲ್ಲಪ್ಪನವರು ಅಧ್ಯಕ್ಷರಾಗಿಯೂ ಶ್ರೀ ಡಿ. ವಿ. ಬೆಳವಿಯವರು ಉಪಾಧ್ಯಕ್ಷರಾಗಿಯೂ ಶ್ರೀಗಣಪತಚಂದ ಶಹಾ ಅವರು ಕೋಶಾಧ್ಯಕ್ಷರಾಗಿಯೂ ಶ್ರೀ ಆರ್. ಎಸ್. ದೇಶಪಾಂಡೆಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಬಾಗಲಕೋಟೆಯಲ್ಲಿ ಶ್ರೀ ಬಸವಂತಪ್ಪ ನಾಗರಾಳ ಇವರ ಅರಳೆ ವಖಾರಕ್ಕೆ ಬೆಂಕಿ ಹತ್ತಿ ೨೦೦ ಅಂಡಿಗೆ ಅರಳೆ ಸುಟ್ಟು ೧೫-೧೬ ಸಾವಿರ ರೂಪಾಯಿ ಹಾನಿ ಸಂಭವಿಸಿದೆ.

ಬಾಗಲಕೋಟೆಯಲ್ಲಿ ದಿನಾಂಕ ೨೧ಕ್ಕೆ ಪುರೋಗಾಮಿ ಪಕ್ಷದ ಮುಂದಾಳುಗಳಾದ ಶ್ರೀ ಶೀಲಭದ್ರಯಾಜಿ ಅವರು ಭಾಷಣ ಮಾಡುತ್ತ ಸುಭಾಷಬೋಸರು ಇನ್ನೂ ಜೀವದಿಂದಿರುವರೆಂದೂ ಅವರ ಯುದ್ಧೋತ್ತರ ಕಾರ್ಯಕ್ರಮವನ್ನು ತಪ್ಪಿ ಕಾಂಗ್ರೆಸು ಜನಪ್ರೀತಿ ಕಳೆದುಕೊಂಡಿದೆಂದೂ ಹೇಳಿದರು.

ವಿಜಾಪುರ ನಗರ ಸಭೆಯ ತ್ರೈವಾರ್ಷಿಕ ಚುನಾವಣೆಯಲ್ಲಿ ಕಾಂಗ್ರೆಸು ಭಾಗ ವಹಿಸಲಿರುವುದು. ಶ್ರೀಗಳಾದ ಮುರಿಗೆಪ್ಪ ಸುಗಂಧಿ, ಕೆ. ರಾಮಕೃಷ್ಣರಾವ, ಉತ್ತಮಚಂದ ಶಹಾ ಹಾಗು ಬೇರೆ ಇಬ್ಬರ ಸಿವಿಕ್ ಕಮೀಟಿ ರಚಿಸಲಾಗಿದೆ.

ಗುಳೇದಗುಡ್ಡದಲ್ಲಿ ಮೂರು ತಿಂಗಳಿಂದ ಬೆಲ್ಲ ಹಾಗು ಕೊಬ್ಬರಿಎಣ್ಣೆ ಕೊಟ್ಟಿರುವದಿಲ್ಲ ಹತ್ತಿಕಾಳಿನ ಲೈಸನ್ಸದಾರರು ರೂಪಾಯಿಗೆ ೬ ಪೌಂಡು ಮಾರುತ್ತಿರುವರು. ಮೇಲಧಿಕಾರಿಗಳು ಇತ್ತ ಗಮನಿಸಬೇಕೆಂದು ಷಡಕ್ಷರಯ್ಯ ಸಿಂದಿಗಿಮಠ ಅವರು ತಿಳಿಸುತ್ತಾರೆ.

ಬಾಗಲಕೋಟ ಅಂಗ್ಲೊ ಗುಜರಾತಿ ಹೈಸ್ಕೂಲ ಹೊಸ ಕಟ್ಟಡದ ಅನಾವರಣ ಸಮಾರಂಭಕ್ಕಾಗಿ ಮುಂಬೈ ಹಣಕಾಸಿನ ಮಂತ್ರಿಗಳಾದ ಶ್ರೀ ವೈಕುಂಠಲಾಲ ಮೆಹತಾರವರು ಆಗಮಿಸಲಿರುವರು ಸಮಾರಂಭವು ಮೇ ೧೦ಕ್ಕೆ ಜರಗುವದು.

ಬಳ್ಳಾರಿ

ಹರಪನ ಹಳ್ಳಿಯಲ್ಲಿ ನೆರೆಯುವ ೩೦ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಂಗವಾಗಿ ನಡೆಯುವ ಜನಪದ ಸಾಹಿತ್ಯಗೋಷ್ಠಿಗೆ ಶ್ರೀ ಬೆಟಗೇರಿ ಕೃಷ್ಣಶರ್ಮರು ಅಧ್ಯಕ್ಷರಾಗಿರುವರು. ಸಮ್ಮೇಳನ ಜರಗುವ ಭಾಗಕ್ಕೆ 'ಕೈಲಾಸ' ನಗರವೆಂದು ಹೆಸರಿಡಲಾಗಿದೆ.

ಉತ್ತರ ಕನ್ನಡ

ಹೆಗಡೆಯಲ್ಲಿ ಶ್ರೀ ಮಾವಿನಕುರ್ವೆ ಅವರ ಅಧ್ಯಕ್ಷತೆಯಲ್ಲಿ ರೈತರ ಸಭೆಯೊಂದು ಜರುಗಿತು. ಹೊಲದೊಡೆಯರು ರೈತರಿಂದ ಹೊಲ ಕಸಿದುಕೊಳ್ಳಲು ಸ್ವಂತ ಸಾಗುವಳಿ ಮಾಡುವದಾಗಿ ೮೦೦ ಕ್ಕಿಂತ ಹೆಚ್ಚು ನೋಟೀಸು ಕೊಟ್ಟಿರುವರು. ಅಲ್ಲದೆ ಸಾಗುವಳಿ ವಾಯದೆ ಅಕ್ರಮವಿರುವದಾಗಿ ಕೋರ್ಟಿನಲ್ಲಿ ವ್ಯಾಜ್ಯ ಹೂಡಿದ್ದಾರೆಂದು ತಿಳಿಯುತ್ತದೆ.

ಅಖಿಲ ಕರ್ನಾಟಕ ದ್ವಿತೀಯ ಮಹಾಧಿವೇಶನ ಹೆಗಡೆಯಲ್ಲಿ ದಿನಾಂಕ ೨೦ ರಲ್ಲಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಜಿನರಾಜ ಹೆಗಡೆಯವರು ಪರಿಷತ್ತಿನ ಉದ್ಘಾಟನೆ ಮಾಡಿದರು. ದಾವಣಗೆರೆ ಪರಿಷತ್ತಿನಲ್ಲಾದ ಗೊತ್ತುವಳಿಗನುಸರಿಸಿ ಏಕೀಕರಣ ವಿಷಯದಲ್ಲಿ ಹೊಸ ಗೊತ್ತುವಳಿಗಳಾದವು.

ಹೆಗಡೆಯಲ್ಲಿ ಕೂಡಿದ ಉತ್ತರ ಕನ್ನಡ ಜಿಲ್ಹಾ ಏಕೀಕರಣ ಪರಿಷತ್ತಿನಲ್ಲಿ ಅ. ಕ. ಏಕೀಕರಣ ಸಂಘದ ಜಿಲ್ಹಾ ಶಾಖೆಯನ್ನು ಸ್ಥಾಪಿಸಲಾಯಿತು. ಅದಕ್ಕೆ ಶ್ರೀ ಟಿ. ಎಂ. ಮೊಟನಸರರು, ಅಧ್ಯಕ್ಷರಾಗಿಯೂ ಶ್ರೀಗಳಾದ ವಿ. ಎಂ. ಹೆಗಡೆ ಬಿ. ಎಸ್. ಶಾನಭಾಗರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಕಾರವಾರದಿಂದ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಮಚವೆ ಬಿರುಗಾಳಿಗೆ ಸಿಕ್ಕು ಬಡೆದು ದಿನಾಂಕ ೧೭ ರಲ್ಲಿ ಮುಳುಗಿ ಹೋಯಿತು. ಒಳಗಿದ್ದ ಖಲಾಸಿಗಳೂ ಕಾಣೆಯಾಗಿದ್ದಾರೆ.

ಕನ್ನಡ ಸಂಸ್ಥಾನ

ಅಖಿಲ ಮೈಸೂರು ವಿಮಾ ಏಜಂಟರ ಸಮ್ಮೇಲನವು ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಬೇಲೂರ ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರುಗಿತು. ಮೈಸೂರು ವಿಮಾ ಏಜಂಟರ ಕೇಂದ್ರ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು.

ಹೊಸಹಳ್ಳಿಯಲ್ಲಿ ಕಸ್ತೂರಬಾ ಗ್ರಾಮ ಸೇವಾ ಕೇಂದ್ರದ ಹೊಸ ಕಟ್ಟಡದ ಉದ್ಘಾಟನೆ ಮಾಡುತ್ತ ಶ್ರೀಮತಿ ಯಶೋಧರಾ ದಾಸಪ್ಪನವರು ಗ್ರಾಮಸೇವೆ ಹಾಗು ಹಳ್ಳಿಗಳ ಪುನರುದ್ಧಾರದ ಬಗ್ಗೆ ಭಾಷಣ ಮಾಡಿದರು.

ರಾಯಚೂರಿಗೆ ಸ್ಥಾನಿಕ ಸ್ವರಾಜ್ಯ ಮಂತ್ರಿಗಳು ಆಗಮಿಸಿದಾಗ ಇತ್ತಿಹಾದ-ಲ್ ಮುಸಲ್ಮೀನದವರು ಅವರಿಗೆ ಸ್ವಾಗತವಿತ್ತರು. ಮುಸ್ಲಿಂ ಚೇಂಬರ ಆಫ್ ಕಾಮರ್ಸದವರು ಅವರಿಗೆ ಭೋಜನ ಸಮಾರಂಭ ಏರ್ಪಡಿಸಿದ್ದರು. ಮಂತ್ರಿಗಳು ವ್ಯಾಪಾರದ ಏಳಿಗೆಗಾಗಿ ದುಡಿಯಬೇಕೆಂದು ಹೇಳಿದರು.

ದಾವಣಗೆರೆ ತಾಲೂಕಿನ ಕೊಡಗಾನೂರಲ್ಲಿ ಗ್ರಾಮಾಧಿಕಾರಿಗಳ ಸಮ್ಮೇಳನ ಶ್ರೀ ಕೊ. ಬಸಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಗುರುನಾಥ ನಾಡಿಗೇರರು ಸಮ್ಮೇಲನದ ಉದ್ಘಾಟನೆ ಜರುಗಿಸಿದರು.

ಶಿವಮೊಗ್ಗ ಜಿಲ್ಹಾ ಸಮ್ಮೇಲನವು ಮೇ ತಿಂಗಳ ೧೨-೧೩ ದಿನಾಂಕಗಳಲ್ಲಿ ಸಚಿವರಾದ ಶ್ರೀ ಎಲ್. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಜರಗುವದು.

ಕಿರುಗಾವಲಿನಲ್ಲಿ ಷಡಕ್ಷರಿದೇವ ಜಯಂತಿ ಮಹೋತ್ಸವವು ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಈ ವಾರ ವಿಜೃಂಭಣೆಯಿಂದ ಜರುಗಿತು.

ಶಿವಮೊಗ್ಗೆಯಲ್ಲಿ ಸೇರಿದ ಮೈಸೂರು ಮುಸ್ಲಿಂಲೀಗಿನ ಐದನೇ ಅಧಿವೇಶನದಲ್ಲಿ ದೇಶದಲ್ಲಿ ನಡೆದ ಕೊಲೆಸುಲಿಗೆಗಳು ಖಂಡನೀಯವಾಗಿದ್ದು ಹಿಂದೀ ಸ್ವಾತಂತ್ರ್ಯವನ್ನು ಮುಂದೂಡಲಿಕ್ಕೆ ಕಾರಣವಾಗಿವೆ. ದೇಶದ ಪರಿಸ್ಥಿತಿಯನ್ನನುಲಕ್ಷಿಸಿ ಮುಸ್ಲಿಂ ಲೀಗಿನ ಬೇಡಿಗಳನ್ನು ಮನ್ನಿಸಿ ದೇಶದಲ್ಲಿ ಹೊಸ ಯುಗ ಆರಂಭಿಸಬೇಕು. ಶ್ರೀಮಹಾರಾಜರು ಸಂಸ್ಥಾನದ ಆಡಳಿತ ಬಿಟ್ಟುಕೊಡಬಾರದು ಎಂಬ ಗೊತ್ತುವಳಿ ಸ್ವೀಕೃತವಾದವು.

ಮೇ ತಿಂಗಳಲ್ಲಿ ಜರುಗಲಿರುವ ವೈದ್ಯಕೀ ಪರಿಷತ್ತಿನ ಉದ್ಘಾಟನ ಸಮಾರಂಭವು ಶ್ರೀ ಲಕ್ಷ್ಮೀ ಅವರಿಂದ ಜರುಗಲಿದೆ. ಔಷಧಿಗಳ ಪ್ರದರ್ಶನದ ಉದ್ಘಾಟನೆ ಡಾ. ಮ್ಹಸಕರರಿಂದ ಜರಗುವದು.

ಕರ್ನಾಟಕ ವಿಶ್ವವಿದ್ಯಾಲಯ

ವರದಿ ಮಾಡಲು ಮುಂಬಯಿ ಸರಕಾರದಿಂದ ಸಮಿತಿ ನೇಮಕ

ನ್ಯಾ. ಲೋಕೂರರ ಅಧ್ಯಕ್ಷತೆಯಲ್ಲಿ

ಮುಂಬಯಿ. ಕರ್ನಾಟಕ [illegible] ... ಮುಂಬಯಿ ಸರಕಾರವು ... ಯಣರಾವ ಲೋಕೂರರ ಅಧ್ಯಕ್ಷತೆಯಲ್ಲಿ ... ಸಮಿತಿಯನ್ನು ನೇಮಿಸಿದೆ.

ಡಾ. ಬಿ. ಕೆ. ಆರ್. ವಿ. [illegible] ಮರಕರ, ಆರ್. ಎ. ಜಾಗೀರದಾರ, ... ಕಿತ್ತೂರ, ರಂಗರಾವ ದಿವಾಕರ, ಎಸ್. ಎಸ್. ಬಸವನಾಳ, ಕೆ. ಆರ್. ಹಳದೀಪುರ, [illegible] ಮಠಿವಯ್ಯ, ಡಾ. ಎಸ್. ಸಿ. [illegible], ಬಿ. ಎನ್. ದಾತಾರ, ಎಲ್. [illegible] ರ್ಮಿಸ್, (ಸದಸ್ಯ—ಕಾರ್ಯದರ್ಶಿ) ಇವರು ಈ ಸಮಿತಿಯ ಇತರ ಸದಸ್ಯರಾಗಿದ್ದಾರೆ.

ಈ ಸಮಿತಿಯು (೧) ಕರ್ನಾಟಕ ವಿಶ್ವವಿದ್ಯಾಲಯದ ಸ್ವರೂಪ, ವ್ಯಾಪ್ತಿ, ಘಟನೆ ಮತ್ತು ಅಧಿಕಾರ ಕ್ಷೇತ್ರಗಳ ಬಗ್ಗೆ ಹಾಗೂ ಕರ್ನಾಟಕ ವಿಶ್ವವಿದ್ಯಾಲಯವು ಮುಂಬಯಿ ಪ್ರಾಂತದ ಹೊರಗಿನ ಶಿಕ್ಷಣ ಸಂಸ್ಥೆಗಳನ್ನು [illegible] ಬಗ್ಗೆ (೨) ಈ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ರಕ್ಷಣೆಯ ವೆಚ್ಚ ಮತ್ತು ಅದಕ್ಕೆ ಬೇಕಾಗುವ ಹಣವನ್ನು ಹೇಗೆ ಕೂಡಿಸಬೇಕೆಂಬ ಬಗ್ಗೆ (೩) ಈ ವಿಷಯಕ್ಕೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ವರದಿ ಮಾಡಬೇಕಾಗಿದೆ.

ಹಿಂದುಸ್ತಾನ

ಮುಂಬಯಿ

ಅಂತವ ಘಟನೆಗಳ ನಿಮಿತ್ತ ಮುಂಬಯಿ ಪೊಲೀಸ ಕಮೀಶನರು ಏಳು ದಿನಗಳ ವರೆಗೆ ನಗರದ ಕೆಲ ಭಾಗಗಳಲ್ಲಿ ಸಂಜೆ ೭ ಗಂಟೆಯಿಂದ ಮುಂಜಾನೆ ೬ ಗಂಟೆಯ ವರೆಗೆ ಕರ್ಫ್ಯೂ ಪ್ರಯೋಗಿಸಿರುವರು.

ಮುಂಬಯಿ ಪ್ರಾಂತದಲ್ಲಿಯ ಶಾಲೆಗಳ ಪರಿಸ್ಥಿತಿಯನ್ನು ಕುರಿತು ಒಂದು ವರ್ಷದಲ್ಲಿಯೆ ಸಾದ್ಯಂತ ವರದಿ ಮಾಡಲು ಮುಂಬಯಿ ಸರಕಾರವು ಒಂದು ಸಮಿತಿಯನ್ನು ನೇಮಿಸಬೇಕೆಂದು ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿಯು ಸೂಚಿಸಿದೆ.

ಮುಂಬಯಿ ಮಾಧ್ಯಮಿಕ ಶಾಲೆಗಳ ಶಿಕ್ಷಕರ ವಿಶೇಷ ಪರಿಷತ್ತು ಅಂಧೇರಿಯಲ್ಲಿ ಎಪ್ರಿಲ ೩೦ ಕ್ಕೆ ಕೂಡುವದು. ಪರಿಷತ್ತಿನಲ್ಲಿ ವಿಚಾರಣಾ ಸಮಿತಿಯವರು ಸೂಚಿಸಿದ ಸಂಬಳ ಸ್ಕೇಲುಗಳ ವಿಚಾರ ನಡೆಯುವದು.

ಮುಂಬಯಿ ಕೌನ್ಸಿಲ ಭವನದಲ್ಲಿ ರಶಿಯನ್ ಶಿಷ್ಟ ಮಂಡಳದವರಿಗೆ ಸಂತೋಷಕೂಟವನ್ನು ಏರ್ಪಡಿಸಲಾಗಿತ್ತು. ಮುಂಬಯಿ ವಿಧಿಮಂಡಳದ ಅಧ್ಯಕ್ಷರೂ ಮುಂಬಯಿಯ ಉಪಮಂತ್ರಿಗಳೂ ಮುಂಬಯಿ ಮೇಯರ ಮತ್ತು ಶರೀಫ ಉ ಈ ಸಮಾರಂಭಕ್ಕೆ ಆಗಮಿಸಿದ್ದರು.

ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರೂ ಯುಕ್ತ ರಾಷ್ಟ್ರಗಳ ಸಂಘದ ಸಾಮಾನ್ಯ ಸಭೆಗೆ ಹೋದ ಹಿಂದೀ ಶಿಷ್ಟ ಮಂಡಳದ ಸನ್ಮಾನ್ಯ ಸದಸ್ಯರೂ ಆದ ನ್ಯಾ. ಮೂ. ಎಂ. ಸಿ. ಛಗಲಾರವರನ್ನು ಮುಂಬಯಿ ವಿಶ್ವವಿದ್ಯಾಲಯದ ಪ್ರಾಯಿಸ ಚಾನ್ಸಲರೆಂದು ನೇಮಿಸಲಾಗಿದೆ.

ಪೋಲಿಸ ಕಮಿಶನರ ಸಭಾ ಪ್ರತಿಬಂಧಕ ಆಜ್ಞೆ ಮುರಿದು ಭಾಷಣ ಮಾಡಿದ್ದಕ್ಕಾಗಿ ಬೆಸ್ಟ ಕಂಪನಿಯ ಕೆಲಸಗಾರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಜಿ. ಜಿ. ಮೇಹತಾರವರು ಬಂಧಿಸಲ್ಪಟ್ಟರುವರು.

ಮುಂಬಯಿಯಲ್ಲಿ ವಿದ್ಯುತ್ ಹಾಗೂ ಟ್ರಾಮವೇ ಕಂಪನಿಯ ಟ್ರಾಮುಗಳು ಹಾಗು ಬಸ್ಸುಗಳು ೨೫ ದಿನಗಳ ನಂತರ ಪುನಃ ಓಡಾಟ ಪ್ರಾರಂಭಿಸಿವೆ.

ಬಂಗಾಲ

ಕಳೆದ ಜಾತೀಯ ಗಲಭೆಯಲ್ಲಿ ನೌಖಾಲಿ ಮತ್ತು ತಿಪ್ಪೇರಾ ಜಿಲ್ಹೆಗಳಲ್ಲಿ ೨೧೬ ಹಿಂದೂಗಳೂ ಹಾಗು ಇಬ್ಬರು ಮುಸಲ್ಮಾನರು ಸತ್ತರೆಂದೂ ಸೈನಿಕರ ಪೋಲೀಸರ ಗೋಳಿಬಾರಿಗೆ ಒಬ್ಬ ಕಾನ್ಸಟೆಬಲ್ಲನು ಹಾಗು ೭೫ ಮುಸಲ್ಮಾನರು ಆಹುತಿಯಾದರೆಂದೂ ಬಂಗಾಲ ಶಾಸನ ಸಭೆಯಲ್ಲಿ ಸರಕಾರದ ಪರವಾಗಿ ತಿಳಿಸಲಾಯಿತು.

ಇದೇ ತಾ. ೧೪ ಕ್ಕೆ ಕಲಕತ್ತೆಯ ಹ್ಯಾರಿಸನ್ ರಸ್ತೆಯಲ್ಲಿ ಕೆಲ ಪಂಜಾಬಿ ಪೋಲೀಸರು ಅತ್ಯಾಚಾರ ನಡೆಸಿದ ಬಗ್ಗೆ ಬಂಗಾಲದ ಎರಡೂ ಶಾಸನ ಸಭೆಗಳಲ್ಲಿ ಚರ್ಚೆ ನಡೆಯಲಿದೆ.

ಬಂಗಾಲದಲ್ಲಿಯ ಮುಸಲ್ಮಾನ ನೇತರರು ಬಂಗಾಲದ ವಿಭಜನೆಯನ್ನು ನಿಜವಾಗಿಯೂ ಬಯಸುತ್ತಿರುವದಿಲ್ಲ. ಮತಗಣನೆಯಿಂದ ಬೇಕಾದರೆ ಕಂಡುಕೊಳ್ಳಬಹುದೆಂದು ಬಂಗಾಲ ಸರಕಾರದ ಕಾಯದೆ ಮಂತ್ರಿಗಳಾದ ಶ್ರೀ ಜೋಗೇಂದ್ರನಾಥ ಮಂಡಳ ಅಭಿಪ್ರಾಯಪಟ್ಟಿದ್ದಾರೆ.

ಸರಹದ್ದು

ಗಡಿನಾಡ ಸರಕಾರದವರು ಗಾಂಧಿ—ಜಿನ್ನಾರವರ ಜಿನ್ನಾಹ ಮೇಲಿಗೆ ಹಿಂಸೆಗೆ ಪ್ರಚೋದನೆ ಕೊಡದಂತೆ ನಡೆಯಲು ನಿರ್ಧರಿಸಿ ಹಿಂಸೆಯ ಆರೋಪವಿಲ್ಲದ ಎಲ್ಲ ರಾಜಕೀಯ ಕೈದಿಗಳನ್ನು ಪರಿಸ್ಥಿತಿ ನೋಡಿ ಬಿಡುಗಡೆ ಮಾಡಲು ನಿರ್ಧರಿಸಿರುವರು. ಒಟ್ಟು ೫೦೦೦ ಕ್ಕೆ ಮಿಕ್ಕಿ ಮುಸ್ಲಿಂ ರಾಜಕೀಯ ಕೈದಿಗಳಿರುವರು.

ಡೇರಾಇಸ್ಮಾಯಿಲಖಾನ ಪರಿಸ್ಥಿತಿ ಇನ್ನೂ ಚಿಂತಾಜನಕವಿದೆಯೆಂದು ವರದಿಗಳಿಂದ ತಿಳಿಯುತ್ತದೆ. ಬೇರೆ ಕೆಲವು ಹಳ್ಳಿಗಳಿಗೂ ಈ ಕೊಂಡಕಿ ಹೊಸದಾಗಿ ಹಬ್ಬಿದೆ. ಈ ದಂಗೆಗೆ ಒಬ್ಬ ಪಂಜಾಬಿ ತರುಣನೇ ಕಾರಣವೆಂದು ಕಂದಾಯ ಮಂತ್ರಿಗಳು ಹೇಳಿದರು. ಅಲ್ಲಿ ಹಚ್ಚಿದ ಬೆಂಕಿ ಇನ್ನೂ ಉರಿಯುತ್ತಿರುತ್ತದೆ.

ಪ್ರಾಯಿಸರಾಯರಾದ ಮೌಂಟ ಬ್ಯಾಟನ್‌ರು ೨೮ ನೇ ತಾರೀಖಿಗೆ ಗಡಿನಾಡ ಪ್ರಾಂತಕ್ಕೆ ಭೆಟ್ಟಿ ಕೊಡಲಿರುವರು. ಅಲ್ಲಿಯ ಪರಿಸ್ಥಿತಿಯನ್ನು ಸ್ವತಃ ತಿಳಿದುಕೊಳ್ಳಬೇಕೆಂದು ಈ ಪ್ರವಾಸ ಕೈಕೊಳ್ಳಲಾಗಿದೆ.

ಬಿಹಾರ

ಸರಕಾರದ ಪ್ರಕಟನಾ ಶಾಖೆಯವರು ಬಿಹಾರದಲ್ಲಿ ಮಹಾತ್ಮರ ಶಾಂತಿಯಾತ್ರೆಯ ಚಿತ್ರಗಳನ್ನೊಳಗೊಂಡ ಒಂದು ಹೊತ್ತಿಗೆ ಪ್ರಸಿದ್ಧಿಸಲಿರುವರು.

ಅಭಿವೃದ್ಧಿ ಮಂತ್ರಿಗಳಾದ ಡಾ. ಸಯ್ಯದ ಮಹಮ್ಮದರು ಬಂಗಾಲದ ಮುಖ್ಯ ಪ್ರಧಾನರೊಡನೆ ನವಖಾಲಿ ಪರಿಸ್ಥಿತಿ ಕುರಿತು ಚರ್ಚೆ ಮಾಡಲು ಕಲಕತ್ತೆಗೆ ಹೋಗಿರುವರು. ಅವರು ನೌಖಾಲಿಗೆ ಭೆಟ್ಟಿ ಕೊಡಲಿರುವರು.

ಬಿಹಾರ ಜಮೀನದಾರಿ ಸಂಘದವರು ದರ್ಭಾಂಗದ ಮಹಾರಾಜಾಧಿರಾಜರ ನೇತೃತ್ವದಲ್ಲಿ ಮಹಾತ್ಮರನ್ನು ಭೆಟ್ಟಿಯಾಗಿ ತಮ್ಮ ತೊಂದರೆಗಳ ನಿವೇದನೆ ಮಾಡಿದರು.

ಕೆಲ ದಿನಗಳ ಹಿಂದೆ ಮುಸ್ಲಿಂರೊಡನೆ ಬಾಂಧವ್ಯದಿಂದ ವರ್ತಿಸುತ್ತಿದ್ದ ಬಿಹಾರದ ಹಿಂದುಗಳಲ್ಲಿ ಈಗ ಇಷ್ಟೇಕೆ ಬದಲಾವಣೆಯಾಗಿದೆಯೋ ತಿಳಿಯದಾಗಿದೆಯೆಂದು ಮಹಾತ್ಮರು ಪ್ರಾರ್ಥನೋತ್ತರ ಸಭೆಯಲ್ಲಿ ಹೇಳಿದರು.

ದಿಲ್ಲಿ

ಕೂಲಿಕಾರರ ಕೆಲಸದ ಮತ್ತು ಜೀವನದ ಸ್ಥಿತಿ ಹಾಗೂ ಉತ್ಪಾದನೆ ಹೆಚ್ಚಿಸುವದು ದೀಜ ಮಂತ್ರಗಳಾಗಬೇಕೆಂದು ಮಾನ್ಯ ಶ್ರೀ ಜಗಜೀವನರಾಮರು ದಿಲ್ಲಿಯಲ್ಲಿ ಕೂಡಿದ ಭಾರತ ಕೂಲಿಕಾರ ಪರಿಷತ್ತಿನ ೮ ನೇ ಅಧಿವೇಶನದಲ್ಲಿ ಹೇಳಿದರು.

ದಿಲ್ಲಿಯ ಕೇಂದ್ರ ಮದ್ದಿನ ಕಾರ್ಖಾನೆಯಲ್ಲಿ ನೂರಕ್ಕೆ ೮೦ ರಷ್ಟು ಜನರು ಕೆಲಸಕ್ಕೆ ಹಿಂತಿರುಗಿದ್ದಾರೆ. ಶಕೂರಬಸ್ತಿ ಡಿಪೋದಲ್ಲಿ ಸಂಪು ನಡೆಯಲಿಲ್ಲ.

ಆಸಾಮ

ಆಸಾಮದ ಮೇಲಿನ ದಾಳಿಗಾಗಿ ಆಸಾಮ ಬಂಗಾಲ ಗಡಿಯಲ್ಲಿ ಮುಸ್ಲಿಂ ಲೀಗ ನ್ಯಾಶನಲ್ ಗಾರ್ಡರ ಸಂಗ್ರಹವಾದ ಸುದ್ದಿ ಬಂದದ್ದರಿಂದ ಗೃಹ ಮಂತ್ರಿಗಳಾದ ವಸಂತಕುಮಾರದಾಸರು ಮಂಕಚಾರಕ್ಕೆ ಹೋಗಿದ್ದಾರೆ.

ಮದ್ರಾಸ

ಅ. ಭಾ. ವೃತ್ತಪತ್ರ ಸಂಪಾದಕರ ಪರಿಷತ್ತಿನ ಆರನೇ ಅಧಿವೇಶನವು ಶ್ರೀ ದೇವದಾಸ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಲಕ್ಷ್ಮೀಕಾಂತಂ ಕೊಲೆಯ ಮೊಕದ್ದಮೆಯಲ್ಲಿ ಪುನಃ ವಿಚಾರಣೆ ನಡೆಯಬೇಕೆಂದು ಪ್ರೀವ್ಹಿ ಕೌನ್ಸಿಲ್ಲಿಗೆ ಅಪೀಲು ಮಾಡಿಕೊಂಡಿದ್ದರಷ್ಟೆ. ಈಗ ಪ್ರೀವ್ಹಿ ಕೌನ್ಸಿಲ್ಲಿನ ಮೇರೆಗೆ ಮದ್ರಾಸ ಹಾಯಕೋರ್ಟಿನಲ್ಲಿ ಇದೇ ೨೧ಕ್ಕೆ ಪರಿಶೀಲನೆ ನಡೆಯುವದು.

ಪ್ರಾಂತದಲ್ಲಿ ಹೊಸ ಜವಳಿ ಗಿರಣಿಗಳಿಗೆ ಆಸ್ಪದ ಕೊಡಬಾರದು. ಆದರೆ ಕೇಂದ್ರ ಸರಕಾರದವರು ಕೊಡಮಾಡಿದ ೩೫೦೦೦ ಕದಿರುಗಳನ್ನು ಸ್ವೀಕರಿಸತಕ್ಕದ್ದು ಎಂದು ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಸಭೆಯಲ್ಲಿ ನಿರ್ಣಯವಾಯಿತು.

ಪಂಜಾಬ

ಪಂಜಾಬದಲ್ಲಿ ಬೇಗನೇ ಸಮ್ಮಿಶ್ರ ಮಂತ್ರಿಮಂಡಳವು ಸ್ಥಾಪಿತವಾಗದಿದ್ದರೆ ಅಡಚಣೆಗಾಗಿ ಪಂಜಾಬ ವಿಭಜನೆಯ ತಕ್ಕ ಯೋಜನೆಯನ್ನು ರೂಢಿಯಲ್ಲಿ ತರಬೇಕಾಗುವದೆಂದು ಪಂಜಾಬದ ಗವರ್ನರರಾದ ಜೆಂಕಿನ್ಸರು ಗವರ್ನರರ ಪರಿಷತ್ತಿನಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಪಂಜಾಬ ಪರಿಹಾರ ಮಂಡಳದವರು ೫ ಲಕ್ಷ ರೂಪಾಯಿಗಳ ನಿಧಿ ಕೂಡಿಸಿದ್ದಾರೆಂದು ಕಾರ್ಯದರ್ಶಿಗಳಾದ ಶ್ರೀ. ಜಗನ್ನಾಥ ಶರ್ಮರು ತಿಳಿಸುತ್ತಾರೆ.

ಅಮೃತಸರದಲ್ಲಿ ಒಂದು ಬಾಂಬು ಸ್ಫೋಟವಾಗಿ ನಾಲ್ವರ ಮರಣ ಸಂಭವಿಸಿದೆ. ಬೇರೆ ಯಾವ ದುರ್ಘಟನೆಯೂ ಸಂಭವಿಸಿಲ್ಲ.

ಘಟನಾ ಸಮಿತಿಯಲ್ಲಿ ಸೇರಲು ನರೇಂದ್ರರಿಗೆ ಮೊದಲು ಆಮಂತ್ರಣ ಕೊಟ್ಟು ಈಗ ಈ ರೀತಿ ಹೆದರಿಸುವದು ಉಚಿತವಲ್ಲ. ತಮ್ಮ ಗೌರವ ಪ್ರತಿಷ್ಠೆಗಳನ್ನೇ ಹೆಚ್ಚಾಗಿ ಕಾಣುತ್ತಿದ್ದ ನರೇಂದ್ರರು ಈ ಬೆದರಿಕೆಯನ್ನು ಸ್ವಾಗತಿಸಲಾರರು. ಸಂಸ್ಥಾನಗಳು ಅಳಿದು ಹೋಗಲಿವೆಂದು ಪರರಾಷ್ಟ್ರಗಳ ಪತ್ರಿಕೆಗಳಲ್ಲಿ ಪ್ರಸಿದ್ಧವಾದದ್ದನ್ನೂ ಅವರು ಸಹಿಸಲಾರರು. ಆದ್ದರಿಂದ ಯಾವದಾದರೊಂದು ಉಪಾಯದಿಂದ ಈ ದ್ವಷ್ಟ ಪರಿಣಾಮವನ್ನು ನೀಗಿಸಬೇಕೆಂದು ಶ್ರೀ. ಟಿ. ಆರ್ ವೆಂಕಟರಾಮ ಶಾಸ್ತ್ರಿಗಳು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಇಲ್ಲಿಯಲ್ಲಿ ಇರಿತಗಳ ನಿಮಿತ್ತ ಹಲವರು ಸತ್ತಿದ್ದರಿಂದ ಜಿಲ್ಹಾ ಮ್ಯಾಜಿಸ್ಟ್ರೇಟರು ೪೮ ಗಂಟೆಗಳ ಕರ್ಫ್ಯೂ ಜಾರಿ ಮಾಡಿದ್ದಾರೆ.

ಕರ್ನಾಟಕ ಶಿಕ್ಷಣ ಸಮಿತಿ ಸಾಹಿತ್ಯ ಪಾರಿತೋಷಕ

ಪ್ರತಿ ವರುಷ ಅಕ್ಟೋಬರ ೨೧ ನೇ ತಾ. ದಿವಸ ಕರ್ನಾಟಕ ಶಿಕ್ಷಣ ಸಮಿತಿಯ ಹುಟ್ಟು ದಿನ ಒಂದು 'ಕರ್ನಾಟಕ ಶಿಕ್ಷಣ ಸಮಿತಿ ಸಾಹಿತ್ಯ ಪಾರಿತೋಷಕ' ಎಂಬ ಒಂದು ನೂರು ರೂಪಾಯಿಯ ಪಾರಿತೋಷಕವನ್ನು ಕರ್ನಾಟಕ ಶಿಕ್ಷಣ ಸಮಿತಿಯವರು ಪ್ರಕಟವಾದ ಒಂದು ಕನ್ನಡ ಪುಸ್ತಕದ ಲೇಖಕನಿಗೆ ಕೊಡುವ ನಿರ್ಧಾರ ಮಾಡಿದ್ದಾರೆ.

ಈ ವರುಷ ಕೊಡತಕ್ಕ ಪಾರಿತೋಷಕವು ಈ ಕೆಳಗಿನ ಕರಾರಿನಂತೆ ಇರುವ ಪುಸ್ತಕಕ್ಕೆ ಕೊಡಲಾಗುವದು:—

೧) ಪುಸ್ತಕದ ವಿಷಯವು ರಾಜನೀತಿ ಅಥವಾ ಅರ್ಥ ಶಾಸ್ತ್ರ ಇರಬೇಕು.

೨) ಪುಸ್ತಕವು ಸುಲಭ ಕನ್ನಡದಲ್ಲಿದ್ದು ಕನಿಷ್ಟ ನೂರು ಪುಟದ್ದಿರಬೇಕು. ಅಂದವಾಗಿರಬೇಕು.

೩) ೧-೮-೪೬ ರಿಂದ ಇದೇ ಬರುವ ೧-೮-೪೭ ರೊಳಗಾಗಿ ಪ್ರಕಟವಾಗಿರಬೇಕು.

೪) ಕೇವಲ ಭಾಷಾಂತರ ಅಥವಾ ರೂಪಾಂತರ ಇರಕೂಡದು. ಮೌಲಿಕವಿದ್ದಷ್ಟು ಹೆಚ್ಚು ಗುಣ.

ಇಚ್ಛಕರು ಆಯಾ ಪುಸ್ತಕದ ಮೂರು ಪ್ರತಿಗಳನ್ನು ನಮ್ಮ ಕಡೆಗೆ ೧-೮-೪೭ ರೊಳಗಾಗಿ ಮುಟ್ಟುವಂತೆ ಕಳುಹಿ ಪಾವತಿ ಪಡೆಯಬೇಕು.

ಸಮಿತಿಯ ನಿರ್ಣಯವೇ ಕೊನೆಯದೆಂದು ತಿಳಿಯತಕ್ಕದ್ದು. ಸದ್ಯಕ್ಕೆ ಸಮಿತಿಯಲ್ಲಿ ಶ್ರೀ ದ ಪ ಕರಮರಕರ, ಶ್ರೀ ರಾ ಶ್ರೀ ಹುಕ್ಕೇರಿಕರ ಮತ್ತು ಶ್ರೀ ದಿವಾಕರ ಇವರು ಇರುವರು.

ಇದೇ ೨೧-೧೦-೪೭ ನೇ ದಿನ ಸಮಿತಿಯು ಪಾರಿತೋಷಕವನ್ನು ಜಾಹೀರ ಪಡಿಸುವದು. ಹಾಗೂ ಆಯಾ ಲೇಖಕನಿಗೆ ಕೊಟ್ಟು ಬಿಡುವದು.

ಹೆಚ್ಚು ಮಾಹಿತಿ ಬೇಕಾದವರು ಬರೆದು ತಿಳಿದುಕೊಳ್ಳಬೇಕು.

ಹುಬ್ಬಳ್ಳಿ }
೧೯-೪-೪೭ }

ರಂಗನಾಥ ದಿವಾಕರ
ಕಾರ್ಯದರ್ಶಿ

ಮದ್ರಾಸ ಶಾಸನ ಸಭೆಯಲ್ಲಿ ಭಾಷಾನುಗುಣ ಪ್ರಾಂತರಚನೆಯ ಬೇಡಿಕೆ

ಮುಸ್ಲಿಮ ಲೀಗಿನವರ ವೃಥಾ ಉಪದ್ರವ

ಮದ್ರಾಸ ಪ್ರಾಂತವನ್ನು ಭಾಷಾವಾರ ಪ್ರಾಂತರಚನೆಯ ತತ್ವದನ್ವಯ ತಮಿಳನಾಡು, ಆಂಧ್ರ ದೇಶ, ಕೇರಳ ಮತ್ತು ಕರ್ನಾಟಕಗಳನ್ನಾಗಿ ವಿಭಾಗಿಸಬೇಕೆಂದು ಘಟನಾ ಸಮಿತಿಗೆ ಸೂಚಿಸುವ ಸರಕಾರೀ ಗೊತ್ತುವಳಿಯು ಇದು ಮದ್ರಾಸ ಶಾಸನ ಸಭೆಯಲ್ಲಿ ಪ್ರಚಂಡ ಬಹುಮತದಿಂದ ಪಾಸಾಯಿತು. ಈ ಗೊತ್ತುವಳಿಯ ಬಗ್ಗೆ ಅಸಮ್ಮತಿಯನ್ನು ಸೂಚಿಸಲು ಮುಸ್ಲಿಂ ಲೀಗ ಸದಸ್ಯರು ಸಭಾತ್ಯಾಗ ಮಾಡಿದರು.

ಲೀಗ ಸದಸ್ಯರು ಎದ್ದು ಹೋಗುವ ಮುನ್ನ ಅವರಲ್ಲೊಬ್ಬನು "ಭಾರತದ ವಿಭಜನೆಯ ಬಗ್ಗೆ ಇಂಥ ಅನೈಸರ್ಗಿಕ ಮಾರ್ಗವು ಅನುಸರಿಸಲ್ಪಡುವದಕ್ಕೆ ನಮ್ಮ ವಿರೋಧವಿದೆಂದು ಇಡಿ ಜಗತ್ತಿಗೆ ತೋರಿಸಿ ಕೊಡುವದಕ್ಕಾಗಿ ನಾವೀಗ ಈ ಸಭೆಯಿಂದ ಎದ್ದು ಹೋಗುತ್ತಿದ್ದೇವೆ" ಎಂದು ನುಡಿದನು.

ಮಲಬಾರದ ಮುಸಲ್ಮಾನರ ಹಿತದ ದೃಷ್ಟಿ ಪ್ರತ್ಯೇಕ ಮಾಪಿಳ್ಳಿಸ್ತಾನವನ್ನು ರಚಿಸಬೇಕೆಂದು ಮುಖ್ಯ ಗೊತ್ತುವಳಿಯಲ್ಲಿ ಸೇರಿಸಲು ನಿರಾಕರಿಸಿದ ಸಭಾ ಧುರೀಣರ ಧೋರಣದ ಬಗ್ಗೆ ಲೀಗ ಸದಸ್ಯರು ತಮ್ಮ ಅಸಮ್ಮತಿ ವ್ಯಕ್ತ ಮಾಡಿದರು.

ಮದ್ರಾಸ ಪ್ರಾಂತವನ್ನು ಸ್ವಾಭಾವಿಕ ಭಾಷಾವಾರ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಪುನರ್ರಚಿಸಬೇಕೆಂಬ . ತಮ್ಮ ತಿದ್ದುಪಡೆಯನ್ನು ಕಮ್ಯುನಿಸ್ಟ ಸದಸ್ಯರಾದ ಶ್ರೀ ಪಿ. ವೆಂಕಟೇಶರಲು ಅವರು ಹಿಂತೆಗೆದುಕೊಂಡು ಮೂಲಗೊತ್ತುವಳಿಗೆ ಕಾಂಗ್ರೆಸ ಹಾಗು ಸ್ವತಂತ್ರ ಸದಸ್ಯರೊಡನೆ ಬೆಂಬಲಕೊಟ್ಟರು.

ಮೂಲಗೊತ್ತುವಳಿಯ ಬಗ್ಗೆ ನಾಲ್ಕು ದಿವಸಗಳ ವರೆಗೆ ನಡೆದ ಚರ್ಚೆಗೆ ಸಭಾ ಧುರೀಣರಾದ ಡಾ. ಪಿ. ಸುಬ್ಬರಾಯನರು ಉತ್ತರಕೊಡುತ್ತ 'ಈ ಪ್ರಾಂತವು ಭಾಷಾವಾರ ಪ್ರಾಂತರಚನೆಯ ತತ್ವದನ್ವಯ ವಿಭಾಗಿಸಲ್ಪಡುವದಕ್ಕೆ ಮುಸ್ಲಿಂ ಲೀಗ ಸದಸ್ಯರು ಅನುಕೂಲವಾಗಿರುವರೆಂದು ಈ ಚರ್ಚೆಯಿಂದ ವ್ಯಕ್ತವಾಗುವದು. ಆದರೆ ಇವರು ಉತ್ತರ ಭಾರತದ ಧುರೀಣತ್ವಕ್ಕೆ ಬದ್ಧರಾಗಿ ಅವರ ಆಜ್ಞಾನುಧಾರಿಗಳಾಗಿರುವದರಿಂದ ಈ ವಿಷಯದ ಬಗ್ಗೆ ಬಿಚ್ಚು ಮನಸಿನಿಂದ ಮಾತಾಡಲು ನಾಚಿಗೆಪಡುತ್ತಿರುವರು. ಈ ವಿಷಯವು ಘಟನಾ ಸಮಿತಿಗೆ ಒಪ್ಪಿಸಲ್ಪಡುವದಕ್ಕೆ ಇವರ ಮುಖ್ಯ ಆಕ್ಷೇಪವಿದೆ" ಎಂದರು. ಕೊನೆಯಲ್ಲಿ ಅವರು ಈ ಗೊತ್ತುವಳಿಗಳಿಗೆ ಬೆಂಬಲಕೊಡಲು ಮುಸ್ಲಿಂ ಲೀಗ ಸದಸ್ಯರನ್ನು ಬಿನ್ನವಿಸಿದರು.

ಲೀಗ ಸದಸ್ಯರು ಸಭಾತ್ಯಾಗ ಮಾಡುವ ಮುನ್ನ ವಿರೋಧಿ ಪಕ್ಷದ ಧುರೀಣರಾದ ಶ್ರೀ ಮಹಮ್ಮದ ಇಸ್ಮಾಯಿಲರು ಒಂದು ಹೇಳಿಕೆ ಕೊಡುತ್ತ "ಭಾರತದಲ್ಲಿ ಸುಖ ಶಾಂತಿ ನೆಲಸಿ ಅದು ಅಭಿವೃದ್ಧಿ ಹೊಂದಬೇಕಾದರೆ ಅದನ್ನು ಭಾಷಾನುಗುಣವಾಗಿ ವಿಭಜಿಸುವದರ ಬದಲು ಧಾರ್ಮಿಕ ಹಾಗು ಸಾಂಸ್ಕೃತಿಕ ತಳಹದಿಯ ಮೇಲೆ ವಿಭಜಿಸಬೇಕು. ಸಭಾ ಧುರೀಣರು ಹಾಗು ಕಾಂಗ್ರೆಸ ಪಕ್ಷದ ಸದಸ್ಯರು ಮಾಡಿದ ಸ್ಪಷ್ಟೀಕರಣವನ್ನು ನೋಡಿ ಮುಸಲ್ಮಾನರ ಹಿತರಕ್ಷಣೆಯು ಪಾಕಿಸ್ತಾನದಲ್ಲಿ ಮಾತ್ರ ಸಾಧ್ಯವೆಂದು ಲೀಗ ಸದಸ್ಯರಿಗೆ ಮನದಟ್ಟಾಗಿದೆ" ಎಂದರು.

ನಂತರ ಅವರು ತಮ್ಮ ಅನುಯಾಯಿಗಳಾದ ಲೀಗ ಸದಸ್ಯರೊಂದಿಗೆ ಸಭಾ ಭವನದಿಂದ ಹೊರಬಿದ್ದರು.

ಪ್ರಜರ ಆಕಾಂಕ್ಷೆಗಳನ್ನು ನರೇಂದ್ರರು ಗಮನಿಸಿಲ್ಲ

ಅ. ಭಾ. ಸಂಸ್ಥಾನಿ ಪ್ರಜಾಪರಿಷತ್ತಿನ ಮಹತ್ವದ ಠರಾವುಗಳು

ಭಾರತದಲ್ಲಿ ಸಂಭವಿಸುತ್ತಿರುವ ಸಂಸ್ಕರಣೀಯ ಸ್ಥಿತ್ಯಂತರಗಳನ್ನು ಇಲ್ಲಿಯ ಸಂಸ್ಥಾನಗಳ ನರೇಂದ್ರರು ಗಮನಿಸಿಲ್ಲ. ಇಷ್ಟೇ ಅಲ್ಲ, ತಮ್ಮ ಸಂಸ್ಥಾನಗಳಲ್ಲಿ ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯನ್ನು ಸ್ಥಾಪಿಸಲೂ ಪ್ರಯತ್ನಿಸಿಲ್ಲೆಂದು ಗ್ವಾಲೇರದಲ್ಲಿ ಅ. ಭಾ. ಸಂಸ್ಥಾನ ಪ್ರಜಾ ಪರಿಷತ್ತಿನ ಬಹಿರಂಗ ಅಧಿವೇಶನದಲ್ಲಿ ಗೊತ್ತುವಳಿಯೊಂದು ಸ್ವೀಕೃತವಾಗಿದೆ.

ಇತ್ತೀಚೆಗೆ ಕೆಲವು ನರೇಂದ್ರರು ಸಾರಿರುವ ರಾಜಕೀಯ ಘೋಷಣೆಗಳ ಬಗ್ಗೆ ಆ ಗೊತ್ತುವಳಿಯಲ್ಲಿ ಈ ಕೆಳಗಿನಂತೆ ಕಾಣಿಸಲಾಗಿದೆ:

ಸ್ವಾತಂತ್ರ್ಯ ಮತ್ತು ಪ್ರಜಾತಂತ್ರವನ್ನು ಕಡೆಗಣಿಸಿಯೆ ನರೇಂದ್ರರು ಇತ್ತೀಚಿನ ತಮ್ಮ ಘೋಷಣೆಗಳನ್ನು ಮಾಡಿದ್ದಾರೆ. ಈ ಘೋಷಣೆಗಳು ಹೊಣೆಗಾರ ರಾಜ್ಯಪದ್ಧತಿಯ ಧ್ಯೇಯವನ್ನು ಒಪ್ಪಿಕೊಳ್ಳುವದಿಲ್ಲ. ಒಂದುವೇಳೆ ಒಪ್ಪಿಕೊಂಡರೂ ಆ ತಮ್ಮ ಘೋಷಣೆಯನ್ನು ಜಾರಿಯಲ್ಲಿ ತರಲು ಪ್ರಯತ್ನಿಸುವದಿಲ್ಲ. ಅಲ್ಲದೆ ಹೊಸ ಕಾರ್ಯಕಾರೀ ಮಂಡಳದಲ್ಲಿಯ ಲೋಕನಿಯುಕ್ತ ಮಂತ್ರಿಗಳು ಸಹ ಹೊಣೆಗೇಡಿಗಳಾಗಿರುತ್ತಾರೆ. ರಾಜಕೀಯ ಘೋಷಣೆಗಳ ಮಾತನ್ನೇ ಎತ್ತದೆ ಇನ್ನೂ ಮೂಳ ಬಸವಣ್ಣನಂತೆ ಕೆಲವು ಸಂಸ್ಥಾನಗಳು ಕುಳಿತಿವೆ. ಆದ್ದರಿಂದ ರಾಜಕೀಯ ಸುಧಾರಣೆಗಳ ಬಗ್ಗೆ ನರೇಂದ್ರರ ಈ ಅಸಮಾಧಾನಕರ ಧೋರಣೆಯನ್ನು ಈ ಸಭೆಯು ನಿಷೇಧಿಸುತ್ತದಲ್ಲದೆ ಹೊಣೆಗಾರ ರಾಜ್ಯಪದ್ಧತಿಯನ್ನು ಸ್ಥಾಪಿಸಬೇಕು ಎನ್ನುವ ಪ್ರಜರ ಬೇಡಿಕೆಯನ್ನು ಅವರು ಆದಷ್ಟು ಬೇಗನೆ ಪೂರೈಸಬೇಕು ಎಂದೂ ಕೇಳಿಕೊಳ್ಳುತ್ತದೆ.

ಪ್ರಜಾಮಂಡಳಗಳಿಗೆ ಮಾರ್ಗದರ್ಶನ

ಪ್ರಜಾಮಂಡಳಗಳು ಸಂಸ್ಥಾನಗಳಲ್ಲಿ ಯಾವ ರೀತಿಯಿಂದ ಕಾರ್ಯನಡೆಸಬೇಕೆಂಬುದನ್ನು ಇನ್ನೊಂದು ಠರಾವಿನ ಮೂಲಕ ಸೂಚಿಸಲಾಗಿದೆ. ಅ. ಭಾ. ಸಂಸ್ಥಾನಿ ಪ್ರಜಾಪರಿಷತ್ತು ಕಾಲಕಾಲಕ್ಕೆ ಮಾಡುವ ಬೇಡಿಕೆಯನ್ನು ಈ ಪ್ರಜಾಮಂಡಳಗಳು ತಮ್ಮ ಸಂಸ್ಥಾನಗಳಲ್ಲಿ ಪಡೆಯಲು ಪ್ರಯತ್ನಿಸಬೇಕು. ಭಾರತವು ೧೯೪೮ ಜೂನದಲ್ಲಿ ಸ್ವತಂತ್ರವಾದ ಕೂಡಲೆ ಬ್ರಿಟನದ ಹಸ್ತಕರು ಹೂಡಬಹುದಾದ ಕೊನೆಯ ಹೋರಾಟವನ್ನೆದುರಿಸಲು ಸದಾಸಿದ್ಧರಿರಬೇಕು ಮುಂತಾದ ಸೂಚನೆಗಳು ಈ ಠರಾವಿನಲ್ಲಿವೆ.

ಈ ಪರಿಷತ್ತಿನಲ್ಲಿ ನಿಯೋಜಿತ ಅಧ್ಯಕ್ಷರಾದ ಶ್ರೀ ಶೇಖಅಬ್ದುಲ್ಲಾರು ಈಗ ಬಂಧನದಲ್ಲಿರುವದರಿಂದ ಎಲ್ಲ ಪ್ರಜಾಮಂಡಳಗಳೂ 'ಶೇಖ ಅಬ್ದುಲ್ಲಾ ಅಧ್ಯಕ್ಷ ದಿನವನ್ನು ಆಚರಿಸಬೇಕೆಂದು ಗೊತ್ತಾಯಿತು.

ತಿರುವಾಂಕೂರಿನ ಬಗ್ಗೆ

ತಿರ್ವಾಂಕೂರಿನಲ್ಲಿ ನಾಗರಿಕ ಹಕ್ಕು ಬಾಧ್ಯತೆಗಳನ್ನೂ ಕೂಲಿಕಾರ ಚಳವಳಿಯನ್ನೂ ಹತ್ತಿಕ್ಕುತಿರುವದನ್ನು ಖಂಡಿಸಿ ಹೊಸ ಸುಧಾರಣೆಗಳ ಬಗ್ಗೆ ಅಸಂತುಷ್ಟಿ ವ್ಯಕ್ತಗೊಳಿಸುವ ಹಾಗು ಅಲ್ಲಿ ನಡುಗಾಲ ಸರಕಾರ ಸ್ಥಾಪನೆಯನ್ನು ಬೇಡುವ ಇನ್ನೊಂದು ಗೊತ್ತುವಳಿಯಾಯಿತು.

ಭೋಪಾಲದ ಹೊಸ ಸ್ವರೂಪ

ಭೋಪಾಲದಲ್ಲಿ ನಡುಗಾಲ ಸರಕಾರ ರಚಿತವಾಗಿದೆ. ಆದರೆ ಭೋಪಾಳದ ನವಾಬರು ಇಂಥ ಸರಕಾರ ರಚಿಸುವ ಪೂರ್ವದಲ್ಲಿ ಸಂಸ್ಥಾನದಲ್ಲಿಯ ಎಲ್ಲ ರಾಜಕೀಯ ಪಂಗಡಗಳನ್ನು ವಿಚಾರಿಸಲಾಗುವದು ಎಂದು ೧೯೪೬ ರಲ್ಲಿ ಕೊಟ್ಟ ತಮ್ಮ ಆಶ್ವಾಸನವನ್ನು ಮುರಿದಿದ್ದಾರೆ. ಆ ಸಂಸ್ಥಾನದ ಪ್ರಜರ ಪ್ರತಿನಿಧಿಯಾದ ಪ್ರಜಾಮಂಡಳದ ಸಲಹೆ ಕೇಳಿಲ್ಲ. ಅಲ್ಲದೆ ಈಗಿನ ಆ ನಡುಗಾಲ ಸರಕಾರವು ಪ್ರಜರಿಗೆ ಹೊಣೆಯಾಗಿಲ್ಲ. ಶಾಸನಸಭೆಯಲ್ಲಿ ಲೋಕನಿಯುಕ್ತರ ಸಂಖ್ಯೆ ಹೆಚ್ಚಿಲ್ಲ. ನಾಗರಿಕರ ಹಕ್ಕುಗಳನ್ನು ಘೋಷಿಸಿಲ್ಲ. ಆದ್ದರಿಂದ ಈ ಸಭೆಯು ಭೋಪಾಲ ನವಾಬರ ಕೃತಿಗಳನ್ನು ನಿಷೇಧಿಸುತ್ತದಲ್ಲದೆ ಅಲ್ಲಿಯ ಪ್ರಜರ ಆಕಾಂಕ್ಷೆಗಳು ಪೂರ್ಣವಾಗುವಂತೆ ಅವರು ನಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತದೆ.

ಹೈದರಾಬಾದವಂತೇಕೆ ?

ಹೈದರಾಬಾದ ಸಂಸ್ಥಾನದಲ್ಲಿ ನಾಗರಿಕ ಹಕ್ಕು ಬಾಧ್ಯತೆಗಳನ್ನು ಹತ್ತಿಕ್ಕಲಾಗಿದೆಯಲ್ಲದೆ ಜಾತೀಯ ಪಕ್ಷಪಾತವೂ ಕಂಡುಬರುತ್ತಿದೆ. ಅಲ್ಲಿಯ ರೈತರ ಸುಲಿಗೆ ನಡೆದಿದೆ. ಜನರ ತಾಪತ್ರಯಗಳಂತೂ ಮುಕ್ತಾಯ ಹೊಂದುವಂತಿಲ್ಲ. ಕಾಶ್ಮೀರ ಮತ್ತು ನಿಜಾಮ ಸಂಸ್ಥಾನಗಳಲ್ಲಿ ಲೋಕಪ್ರಿಯ ಶಾಸನ ಸಭೆಗಳಿಲ್ಲದಿರುವದರಿಂದ ಮತ್ತು ಅಲ್ಲಿಂದ ಘಟನಾ ಸಮಿತಿಗೆ ಸದಸ್ಯರನ್ನು ಕಳಿಸಬೇಕೆಂಬ ಪ್ರಶ್ನೆಯ ನಿರ್ಧಾರವಿನ್ನೂ ಆಗದ್ದರಿಂದ ಈ ಸಭೆಗೆ ಬಹಳ ವಿಷಾದವಾಗಿದೆ. ಕಾಶ್ಮೀರ ಮತ್ತು ನಿಜಾಮ ಸಂಸ್ಥಾನಗಳು ಸ್ವತಂತ್ರ ಉಳಿಯುವವೆಂಬ ಭಾವನೆ ಕೆಲವರಲ್ಲಿ ಮೂಡಿದೆ. ಆದರೆ ಸ್ವತಂತ್ರ ಭಾರತದ ಕಕ್ಷೆಯ ಹೊರಗೆ ಅವನ್ನು ಉಳಿಯಗೊಡಲಾಗುವದಿಲ್ಲ. ಅವರು ಭಾರತದ ಹೊರಗುಳಿಯಬೇಕೆನ್ನುವದನ್ನು ಅಲ್ಲಿಯ ಪ್ರಜೆಗಳು ಸಹಿಸಲಾರರು ಎಂಬ ಠರಾವೂ ಪಾಸಾಯಿತು. ಈ ಪರಿಷತ್ತು ಈ ಎರಡೂ ಸಂಸ್ಥಾನಗಳ ಜನರಿಗೆ ತನ್ನ ಬೆಂಬಲವೀಯುತ್ತದೆಂದೂ ತಿಳಿದಿದೆ.

ಅ. ಭಾ. ಸಂಸ್ಥಾನಿ ಪ್ರಜಾ ಪರಿಷತ್ತಿನ ಇನ್ನು ಮುಂದಿನ ಅಧಿವೇಶನವನ್ನು ಹೈದರಾಬಾದದಲ್ಲಿ ಸೇರಿಸಬೇಕೆಂದು ಗೊತ್ತಾಗಿದೆ.

ಸ್ವತಂತ್ರ ಭಾರತದಲ್ಲಿ ಪತ್ರಿಕೆಗಳ ಸ್ಥಾನ

ಅ. ಭಾ. ಸಂಪಾದಕ ಪರಿಷತ್ತಿನಲ್ಲಿ ದೇವದಾಸ ಗಾಂಧಿಯವರ ಭಾಷಣ

ಕ್ರಮಶಃ ಲೋಕಪ್ರಿಯ ಸರಕಾರಗಳು ನಮ್ಮ ಹಕ್ಕುಬಾಧ್ಯತೆಗಳ ಮೇಲೆ ನಡೆಸಬಹುದಾದ ಅತಿಕ್ರಮಣವನ್ನು ನಾವು-ಪತ್ರಿಕಾಕರ್ತರು-ತಡೆಯಲು ಸದಾಸಜ್ಜರಾಗಿರಬೇಕು. ನಮ್ಮ ಸ್ವಾತಂತ್ರ್ಯದ ಬಗ್ಗೆ ನಮ್ಮಲ್ಲಿ ಉತ್ಕಂಠೆಯಿದೆ. ಬರುವ ವರ್ಷದಲ್ಲಿ ಸ್ವತಂತ್ರ ಭಾರತ ಸರಕಾರವು ಸ್ಥಾಪಿತವಾದ ಕೂಡಲೆ ನಾವೊಂದು ಹಾಮ್ರಪಟವನ್ನು ಪಡೆದುಕೊಳ್ಳಲಿಚ್ಛಿಸುತ್ತೇವೆಂದು ಹೊಸ ಅಧ್ಯಕ್ಷರಾದ ಶ್ರೀ ದೇವದಾಸ ಗಾಂಧಿಯವರು ಅ. ಭಾ. ಪತ್ರಿಕಾ ಸಂಪಾದಕರ ಮದ್ರಾಸಿನಲ್ಲಿ ಸೇರಿದ್ದ ಆರನೇ ಅಧಿವೇಶನದಲ್ಲಿ ಹೇಳಿದರು.

ಸರದಾರ ಪಟೇಲರ ಸಂದೇಶ

ಪರಿಷತ್ತಿಗೆ ಸರದಾರ ಪಟೇಲರು ಕೆಳಗಿನ ಸಂದೇಶ ಕಳಿಸಿದ್ದರು.

ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತು ಈ ಸಲ ಸಂಸ್ಮರಣೀಯವಾದ ಸೂಕ್ಷ್ಮ ಸಮಯದಲ್ಲಿ ಸೇರುತ್ತಿದೆ ಆದ್ದರಿಂದ ಈ ಅಧಿವೇಶನಕ್ಕೆ ವಿಶೇಷ ಮಹತ್ವವಿದೆ. ಜನರಿಗೆ ಶಿಕ್ಷಣಕೊಟ್ಟು ಅವರ ಅಭಿಪ್ರಾಯವನ್ನು ತಿದ್ದುವದು ಸಂಪಾದಕರ ಕೆಲಸವಾಗಿದೆ. ಈ ಕಾಲದಲ್ಲಿ ಆ ಹೊಣೆಗಾರಿಕೆ ಇನ್ನೂ ಹೆಚ್ಚಿದೆ. ಪತ್ರಿಕೆಗಳ ಸಂಪೂರ್ಣ ಸಹಕಾರವಿಲ್ಲದಿದ್ದರೆ ದೇಶದಲ್ಲಿ ರಾಜಕೀಯ ಭದ್ರತೆಯಾಗಲಿ, ಚಿರಶಾಂತಿಯಾಗಲಿ, ಸ್ಥಾಪಿತವಾಗಲಾರದು.

ಅಧ್ಯಕ್ಷ ಭಾಷಣ

ಪತ್ರಿಕೆಗಳು ಬದಲಿಸಿದ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿ ತೊಡಗಿವೆ. ಈಗ ಹೊಣೆಗಾರಿಕೆಗಳು ಹೆಚ್ಚಾಗಿವೆ. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವಿದ್ದು ಅವರಿಗೆ ನಮ್ಮ ಸಹಕಾರ ಬೇಕಾಗಿದೆ. ಆದ್ದರಿಂದ ಸರಕಾರದೊಡನೆ ನಮ್ಮ ಕಲಹ ನಿಂತು ಹೋಗಿದೆಂದರೂ ನಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ನಾವು ಸದಾ ಸಿದ್ಧರಿಬೇಕು. ಸರದಾರ ಪಟೇಲರು ಪತ್ರಿಕೆಗಳ ಸ್ವಾತಂತ್ರ್ಯವನ್ನು ಗೌರವಿಸುವದಾಗಿ ದಿಲ್ಲಿಯಲ್ಲಿ ಸೇರಿದ ನಮ್ಮ ಸಭೆಯಲ್ಲಿ ಹೇಳಿದ್ದಾರೆ. ಸದ್ಯಕ್ಕೆ ನಾವು ಈ ವಿವಾದದಲ್ಲಿ ತೊಡಗಬೇಕಾಗಿಲ್ಲ. ದೇಶದಲ್ಲಿಯ ಸದ್ಯದ ಸಂಕ್ರಾಂತಿಕಾಲದಲ್ಲಿ ನಾವು ಅದರ ಭವಿತವ್ಯ ನಿರ್ಧರಿಸುವ ಮಹತ್ವದ ಹೊಣೆಯನ್ನು ಹೊರಬೇಕಾಗಿದೆ. ಈ ಕೆಲಸವನ್ನು ಪತ್ರಿಕೆಗಳು ಚನ್ನಾಗಿ ಸಾಧಿಸಬಲ್ಲವು. ಜಾತೀಯ ದಂಗೆ ಈಗ ಹಬ್ಬಿರುವಾಗ ಪತ್ರಿಕೆಗಳು ಬಹಳ ಎಚ್ಚರದಿಂದ ವರ್ತಿಸಬೇಕಾಗಿದೆ. ಸರಕಾರವು ದಂಗೆಯ ಸುದ್ದಿಗಳನ್ನು ಪ್ರಸಿದ್ಧಿಸುವದರಲ್ಲಿ ಇಂಥಿಂಥ ಕಾಯಿದೆಗಳನ್ನು ಅನುಸರಿಸಬೇಕೆಂದು ಕಾಯದೆಯ ಕಟ್ಟಪ್ಪಣೆ ಕೊಟ್ಟಿದ್ದರೂ ಅದರ ಮುನ್ನುಡಿಯಲ್ಲಿ ಹೇಳಿದ "ಜಾತೀಯ ಉದ್ರೇಕಕ್ಕೆ ಕಾರಣವಾಗುವ ರೀತಿಯಲ್ಲಿ ಯಾವ ಪತ್ರಿಕೆಯೂ ವರ್ತಿಸಬಾರದು" ಎಂಬ ಶಬ್ದಗಳಲ್ಲಿ 'ಆ ಕಾಯದೆಗಳ ಸಾರ ಅಡಕವಾಗಿದೆ.

ನಮ್ಮ ಪತ್ರಿಕೆಗಳಲ್ಲಿ ಪ್ರಗತಿ ಹೆಚ್ಚಾಗಿ ಕಂಡುಬರುತ್ತಿದೆ. ದೇಶೀಯ ಭಾಷಾಪತ್ರಿಕೆಗಳೂ ಹೆಚ್ಚಾಗಿವೆ. ಆಂಗ್ಲ ಪತ್ರಿಕೆಗಳಿನ್ನು ತಳ ಕಿತ್ತಬೇಕಾಗುವದೆಂಬ ಸಂದೇಹ ತಲೆದೋರಬಹುದು. ಆದರೆ ಆ ಭೀತಿ ನಿರಾಧಾರವಾದುದು.

ಏಶಿಯಾ ಪರಿಷತ್ತು ದಿಲ್ಲಿಗೆ ಜಗತ್ತಿನಲ್ಲಿ ಒಂದು ಅಪೂರ್ವ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಜಗತ್ತಿನ ಶಾಂತಿ ರಕ್ಷಣೆಗಾಗಿ ಪ್ರಯತ್ನಿಸುವ ಸಂಸ್ಥೆಯೊಂದು ಅಲ್ಲಿ ಜನ್ಮ ತಾಳಿದೆ. ಏಶಿಯಾ ಪರಿಷತ್ತಿನ ಕಾರ್ಯವನ್ನು ಮುಂದರಿಸುವದು ಏಶಿಯಾದ ಪತ್ರಿಕೆಗಳ ಕರ್ತವ್ಯ. ನಮಗೂ ಇದರಿಂದ ಸ್ಫೂರ್ತಿ ದೊರೆತಿದೆ.

ಸ್ವಾತಂತ್ರ್ಯದ ಅರುಣೋದಯದ ಬಗ್ಗೆ ಮಾತಾಡುತ್ತಿದ್ದೇವೆ. ಸ್ವಾತಂತ್ರ್ಯ ಸೂರ್ಯನೊಂದಿಗೆ ಬರುವ ಆ ರಕ್ತಿಮೆ ನಮಗೆ ಬೇಡ. ಸ್ವಾತಂತ್ರ್ಯ ಸೂರ್ಯನ ದರ್ಶನದಿಂದ ಅದು ತಾನಾಗಿಯೆ ಇಲ್ಲದಂತಾಗುವದು.

ಪತ್ರಿಕಾ ಸಂಪಾದಕರ ಸ್ಥಾಯಿ ಸಮಿತಿಯ ಹೊಸ ಸದಸ್ಯರು

ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿನ ಸ್ಥಾಯಿ ಸಮಿತಿಗೆ ಈ ಕೆಳಗಿನವರು ಆರಿಸಿಬಂದಿದ್ದಾರೆ.

ಕೆ. ಶ್ರೀನಿವಾಸನ್ [ಹಿಂದೂ], ಬ್ರೆಲ್ವಿ [ಕ್ರಾನಿಕಲ], ತುಷಾರ ಕಾಂತಿ ಘೋಷ [ಎ ಬಿ ಪತ್ರಿಕಾ] ಸಿ. ಆರ್. ಶ್ರೀನಿವಾಸನ್ [ಸ್ವದೇಶಮಿತ್ರನ್], ಅಮೃತಲಾಲ ಸೇಠ [ಜನ್ಮಭೂಮಿ], ಕೆ. ಶ್ರೀನಿವಾಸನ್ [ನ್ಯಾಶನಲ್ ಸ್ಟ್ಯಾಂಡರ್ಡ], ಶ್ರೀ ಹಣಮಂತರಾವ ಮೊಹರೆ [ಸಂಯುಕ್ತ ಕರ್ನಾಟಕ], ಭರತನ್ [ಅ. ಪ್ರೆ.], ಸೇನಗುಪ್ತ (ಯು. ಪ್ರೆ.], ಡಿ. ವಿ. ಗೋಖಲೆ [ಕೇಸರಿ], ಕೆ. ಪುನ್ನಯ್ಯಾ [ಸಿಂಧ ಅಬ್ಸರ್ವರ], ವೃಜ [ಹಿತವಾದ], ಜೋಸೆಫ ಅಲ್ವಾ [ಪೋಸ್ಟರಂ], ಶಂಭು ಪ್ರಸಾದ [ಆಂಧ್ರ ಪತ್ರಿಕಾ], ಸದಾನಂದ [ಫ್ರೀಪ್ರೆಸ], ಎಸ್ ಕೆ ಮುಜುಮದಾರ [ಆನಂದ ಬಝಾರ ಪತ್ರಿಕಾ], ಜೆ ಎನ್. ಸಹಾನಿ [ಇಂಡಿಯನ್ ನ್ಯೂಜ ಕ್ರಾನಿಕಲ], ಸರ್ ಪ್ರಾನ್ಸಿಸ ಲೋ [ಟಾಯಿಮ್ಸು], ದೇಶಬಂಧು ಗುಪ್ತ [ದೈನಿಕತೇಜ], ಸ್ಟೀಫನ್ಸ [ಸ್ಟೇಟ್ಸಮನ್], ಎಸ್. ಎಸ್. ಮುಜುಮದಾರ.

ದಡ್ಡಿ ಯೋಜನೆಯಲ್ಲಿ ಭಾಷೆಯ ಪ್ರಶ್ನೆ ಬರಲಾರದು

ಕಾಂಗ್ರೆಸ ಕಚೇರಿಯಲ್ಲಿ ಮಂತ್ರಿಗಳ ಚರ್ಚೆ

ಮೊದಲೇ ನಿಶ್ಚಯಿಸಿದಂತೆ ಮುಂಬಯಿ ಸರಕಾರದ ಮಂತ್ರಿಗಳಾದ ಮಾನ್ಯ ಮಲ್ಲಪ್ಪನವರು ಪಾಟೀಲ ಮತ್ತು ಡಾ. ಗಿಲ್ಡರರು ಬೆಳಗಾವಿ ಜಿಲ್ಲಾ ಕಾಂಗ್ರೆಸ ಸಮಿತಿಯ ಕಚೇರಿಗೆ ತಾ. ೨೦ ಕ್ಕೆ ಭೆಟ್ಟಿಕೊಟ್ಟರು ಮಂತ್ರಿಗಳು ಕೆಲ ಪ್ರಶ್ನೆಗಳಿಗೆ ಉತ್ತರ ಕೊಟ್ಟದ್ದು ಅವುಗಳ ಸಾರ ಇಂತಿದೆ.

೧೯೫೦ ರ ಸುಮಾರಕ್ಕೆ ಕರ್ನಾಟಕವೊಂದು ಸ್ವತಂತ್ರ ವಿಶ್ವವಿದ್ಯಾಲಯವನ್ನು ಕೊಡಬೇಕೆಂದು ಗೊತ್ತುಪಡಿಸಿವಾಗ ಸೊಲ್ಲಾಪುರದಲ್ಲೊಂದು ಮೆಡಿಕಲ್ ಕಾಲೇಜ ಸ್ಥಾಪಿಸುವ ವಿಚಾರವನ್ನಿಟ್ಟುಕೊಳ್ಳಲಾಗಿದೆ ಸೊಲ್ಲಾಪುರದಲ್ಲಾಗುವ ಮೆಡಿಕಲ್ ಕಾಲೇಜ ಕರ್ನಾಟಕದ್ದಾಗಬಹುದೋ ಎಂದು ಸಂಶಯ ವ್ಯಕ್ತ ಮಾಡಿದಾಗಿ ಡಾ. ಗಿಲ್ಡರರು ಸೊಲ್ಲಾಪುರದಲ್ಲಿ ಮೆಡಿಕಲ್ ಕಾಲೇಜ ಸ್ಥಾಪನೆಯಾದರೆ ಅದರಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ತೊಂದರೆಯುಂಟಾಗಲಾರದೆಂದರು.

ಅರಣ್ಯ ಶಾಖೆಯಲ್ಲಿಯ ಬೆಳಗಾವಿ ಮತ್ತು ಸುಪಾ ಭಾಗಗಳನ್ನು ಮಧ್ಯಭಾಗಕ್ಕೆ ಏಕೆ ಸೇರಿಸಲಾಯಿತೆಂಬ ಪ್ರಶ್ನೆಗೆ ಅರಣ್ಯ ಮಂತ್ರಿಗಳು ಈ ರೀತಿ ಉತ್ತರ ಕೊಟ್ಟರು: ಕೆಲಸ ಹೆಚ್ಚಾದ್ದರಿಂದ ಈ ವಿಭಾಗದಲ್ಲಿ ಮೂರರ ಬದಲು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಯಿತು. ಆಡಳಿತೆಯ ಅನುಕೂಲತೆಗಾಗಿ ಬೆಳಗಾವಿ ಸುಪಗಳನ್ನು ಮಧ್ಯವಿಭಾಗದಲ್ಲಿ ಸೇರಿಸಿದ್ದೇನೆ ಇದು ಕರ್ನಾಟಕ ಏಕೀಕರಣಕ್ಕೆ ಅಡ್ಡ ಬರಲಾರದು.

ದಡ್ಡೀ ಯೋಜನೆ ಲಾಭದಾಯಕವಿದೆ

ದಡ್ಡೀ ಯೋಜನೆಯ ಚರ್ಚೆ ಪ್ರಾರಂಭವಾದೊಡನೆ ಶ್ರೀ ಬಾಬಾಸಾಹೇಬ ಎಂಬವರೊಬ್ಬರು ಎದ್ದುನಿಂತು ಈ ಯೋಜನೆಯನ್ನು ಮರಾಟಗರ ಪರವಾಗಿ ವಿರೋಧಿಸುವ ದೀರ್ಘ ಭಾಷಣ ಮಾಡಿದರು.

ಇದಕ್ಕೆ ಮಂತ್ರಿವರ್ಯ ಶ್ರೀ ಪಾಟೀಲರು ಈ ರೀತಿ ಉತ್ತರ ಕೊಟ್ಟರು:— ದಡ್ಡಿ ಅಸೋಗಾ ಯೋಜನೆಗಳನ್ನು ಮೊದಲಿನಿಂದಲೂ ಗಮನಿಸಲಾಗಿತ್ತು. ಅವುಗಳ ಬಗ್ಗೆ ಪ್ರಾಸ್ತಾವಿಕ ಕಾರ್ಯವನ್ನಾದರೂ ಪೂರ್ತಿಗೊಳಿಸಲಾಗಿತ್ತು. ಇವುಗಳನ್ನು ಮುಂದೆ ಹಾಕಲಾಗಿತ್ತೆಂದು ತಿಳಿಯುವದು ತಪ್ಪು. ಪ್ರಾಂತದಲ್ಲಿ ಅನೇಕ ಯೋಜನೆಗಳಿದ್ದು ಅವುಗಳನ್ನು ಕ್ರಮೇಣ ತೆಗೆದುಕೊಳ್ಳಲಾಗುವದು. ಈ ಯೋಜನೆಗೆ ಪ್ರಾಂತಿಕ ಪ್ರಶ್ನೆ ಹೇಗೆ ಸಂಬಂಧವಾಗುವದೋ ತಿಳಿಯುವದಿಲ್ಲ. ದುರ್ದೈವದಿಂದ ಇಂಥ ಸಂಬಂಧ ಹಚ್ಚುವ ಪ್ರಯತ್ನಗಳಾಗಿವೆ. ಕೋಯನಾ ಯೋಜನೆಯು ಮಹಾರಾಷ್ಟ್ರದಲ್ಲಾದರೂ ಕರ್ನಾಟಕಕ್ಕೆ ಅದರಿಂದ ಸಾಕಷ್ಟು ಪ್ರಮಾಣದಲ್ಲಿ ಲಾಭವಾಗತಕ್ಕದ್ದಿದೆ. ಯಾಕೆಂದರೆ ಅಲ್ಲಿಂದ ನೀರನ್ನೂ ವಿದ್ಯುತ್ ಶಕ್ತಿಯನ್ನೂ ವಿಜಾಪೂರ ಮತ್ತು ಬೆಳಗಾಂವಿ ಜಿಲ್ಲೆಗಳಿಗೆ ಪೂರೈಸಲಾಗುವದು.

ಸದ್ಯಕ್ಕೆ ಎರಡೂ ಯೋಜನೆಗಳ ಸರ್ವೆ ನಡೆದಿದೆ. ಇವುಗಳಲ್ಲಿ ಯಾವ ಯೋಜನೆಯನ್ನು ಮೊದಲು ಪ್ರಾರಂಭಿಸಬೇಕೆಂಬುದು ತಜ್ಞರನ್ನು ಕೂಡಿದೆ. ಭೂಮಿಯನ್ನು ಕಳಕೊಳ್ಳುವವರಿಗೆ ಪರಿಹಾರ ಕೊಡಲಾಗುವದು. ದಡ್ಡಿಯಲ್ಲಿ ೧೨ ಸಾವಿರ ಎಕರೆ ಭೂಮಿ ಹೋದರೂ ಅಸೋಗಾ ಯೋಜನೆಯಲ್ಲಿ ೨೦ ಸಾವಿರ ಎಕರೆ ಭೂಮಿ ಹೋದರೂ ಅನುಕ್ರಮವಾಗಿ ೧ ಮತ್ತು ೧೪ ಲಕ್ಷ ಎಕರೆ ಹೊಸ ಭೂಮಿ ತಯಾರಾಗುವದು. ಈ ಭೂಮಿಯಲ್ಲಿ ಹೆಚ್ಚಿನ ಬೆಳೆ ಬಂದೇ ಬರುವದು. ಸರಕಾರಕ್ಕಾದರೂ ೧ ಕೋಟಿ ೬೫ ಲಕ್ಷ ರೂ. ಆದಾಯ ಹೆಚ್ಚುವದು.

ಶ್ರೀ ಎಂ. ಪಿ. ಪಾಟೀಲರು ಮತ್ತು ಡಾ. ಗಿಲ್ಡರರು ದಡ್ಡಿ ಆಣೆಕಟ್ಟಿನ ಸ್ಥಳವನ್ನು ನೋಡಿಕೊಂಡು ಬಂದರು.

ಬೆಂಗಳೂರು—ಮೈಸೂರು

ಹಿಂದುಸ್ಥಾನ ಸರಕಾರದವರು ಮೈಸೂರು ಸಂಸ್ಥಾನಕ್ಕೆ ೬೦೦ ಟನ್ ಕಡಲೆಯನ್ನು ಪತಿಯಾಲದಿಂದ ಕೊಟ್ಟಿದ್ದಾರೆ.

ಧರ್ಮರತ್ನಾಕರ ಬಿ. ಎನ್. ಗೋಪಾಲರಾಯರ ಮೇಲೆ ಡಾ. ವಿನೊರೋನ್ಹಾ ಅವರು ಮೋಸದ ಅಪಾದನೆ ಹೊರಿಸಿ ಫಿರ್ಯಾದು ಕೊಟ್ಟಿದ್ದು ಪೋಲೀಸರು ಅವರ ಮೇಲೆ ಇಂಡಿಯನ್ ಪೀನಲ ಕೋಡಿನ ೪೨೦ ನೇ ಕಲಮಿನನ್ವಯ ಬೆಂಗಳೂರಿನ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ತಂದಿದ್ದಾರೆ. ತಾವೊಬ್ಬ ದೊಡ್ಡ ವ್ಯಾಪಾರಿ. ರೇಶ್ಮೆ ಮೊದಲಾದ ವ್ಯಾಪಾರದಲ್ಲಿ ಅಗಾಧ ಲಾಭಗಳಿಸುತ್ತಿದ್ದು ಅದರ ಬಗ್ಗೆ ಹಣವನ್ನು ಮುಂಗಡ ಕೊಡುವವರಿಗೆ ತಿಂಗಳಿಗೆ ನೂರಕ್ಕೆ ೬ ರಂತೆ ಲಾಭ ಹಂಚುತ್ತಿದ್ದೇವೆಂದು ನಂಬಿಸಿ ೨೦,೦೦೦ ರೂಪಾಯಿ, ೯,೫೦೦ ರೂ. ಮತ್ತು ೩,೦೭೦ ರೂಪಾಯಿ ಹೀಗೆ ೭—೮—೪೬, ೧೭—೮—೪೬ ಹಾಗು ೨೧—೮—೪೬ ಈ ದಿನಗಳಲ್ಲಿ ತಮ್ಮಿಂದ ಅಪ್ರಾಮಾಣಿಕ ರೀತಿಯಲ್ಲಿ ತೆಗೆದುಕೊಂಡರೆಂದು ನೊರೆನ್ಹಾ ಅವರ ಆರೋಪವಿದೆ. ೧೪೬ ಸಾಕ್ಷ್ಯಗಳನ್ನು ನೊರೊನ್ಹಾ ಅವರು ಉಲ್ಲೇಖಿಸಿದ್ದು ಅವರಲ್ಲಿ ಧರ್ಮರತ್ನಾಕರ ಪೆರುಮಾಳ ಶೆಟ್ಟಿ, ಶ್ರೀಮತಿ ಸಾಕಮ್ಮ, ಶ್ರೀ ಎಫ್. ತಂಬುಚೆಟ್ಟಿ, ಸರ್ ಸಿ. ವಿ. ರಾಮನ್ ಮೊದಲಾದ ಪ್ರಸಿದ್ಧ ಪುರುಷರು ಇದ್ದಾರೆ.

ಮಲ್ಲೇಶ್ವರ ಮುಸ್ಲಿಂಭಾಗದ ಮುಸ್ಲಿಮರನ್ನು ಎದುರಿಸುವ ಉದ್ದೇಶದಿಂದ ಶಾಸನ ವಿರುದ್ಧವಾಗಿ ಆಕ್ರಮಕೂಟ ಸೇರಿಸಿದರೆಂದು (ತಾ. ೪-೪-೪೭ ರಾತ್ರಿ) ೧೯ ಜನ ಹಿಂದುಗಳ ಮೇಲೆ ಪ್ರಕರಣ ಹೂಡಲಾಗಿದೆ.

ಭದ್ರಾವತಿ ಉಕ್ಕಿನ ಕಾರಖಾನೆಯ ಕೂಲಿಕಾರ ಪ್ರತಿನಿಧಿಗಳು ದಿವಾಣ ಸರ್ ಅರ್ಕಾಟ ರಾಮಸ್ವಾಮಿಯವರನ್ನು ಕಂಡು ೧೯೪೨ ರ ಚಳವಳಿ ಕಾಲದಲ್ಲಿ ಕೆಲಸವನ್ನು ಕಳೆದುಕೊಂಡ ಕಬ್ಬಿಣ ಮತ್ತು ಕಾಗದ ಕಾರಖಾನೆಗಳ ಕೂಲಿಕಾರರಿಗೆ ತಿರುಗಿ ಕೆಲಸ ಕೊಡಿಸಬೇಕೆಂದೂ ಕೆಲಸಗಾರರಿಗೆ ೨ ತಿಂಗಳ ಬೋನಸ್ ಕೊಡಿಸಬೇಕೆಂದೂ ಅರಿಕೆ ಮಾಡಿಕೊಂಡರು. ದಿವಾಣರು ಪರಿಶೀಲಿಸುವದಾಗಿ ಉತ್ತರವಿತ್ತರು. ಕೂಲಿಕಾರ ಸಂಘದ ಚುನಾವಣೆಗಳನ್ನು ಅಧಿಕಾರಿಗಳು ಸರಿಯಾಗಿ ನಡೆಯಗೊಡದ್ದರಿಂದ ತಿರುಗಿ ಚುನಾವಣೆಯಾಗಬೇಕೆಂದೂ ಅವರ ಬೇಡಿಕೆಯಿತ್ತು.

ತಾ. ೧೭ ಕ್ಕೆ ಬೆಂಗಳೂರು ಬಸವನ ಗುಡಿಯಲ್ಲಿ ದೇಶೀ ವಿದ್ಯಾಲಯದ ಹಳೆ ವಿದ್ಯಾರ್ಥಿಗಳು ಏರ್ಪಡಿಸಿದ ಅ. ಭಾ. ಖಾದೀ ಮತ್ತು ಸ್ವದೇಶೀ ವಸ್ತು ಪ್ರದರ್ಶನ ಸಮಾರಂಭದಲ್ಲಿ ಉದ್ಘಾಟನೆ ಮಾಡುತ್ತ ಮಧ್ಯಪ್ರಾಂತದ ಅಭಿವೃದ್ಧಿ ಮಂತ್ರಿಗಳಾದ ಶ್ರೀ ದ್ವಾರಕಾ ಪ್ರಸಾದ ಮಿಶ್ರರು ಅಖಿಲ ಕರ್ನಾಟಕದ ಏಕೀಕರಣ ಮೈಸೂರದರಸರ ಆಳಿಕೆಯಲ್ಲಿ ಆಗಬೇಕೆಂದು ಪ್ರತಿಪಾದಿಸಿದರು. ಮೈಸೂರಲ್ಲಿ ಆಗಿರುವ ಔದ್ಯೋಗಿಕ ಪ್ರಗತಿಯನ್ನು ಪ್ರಶಂಸಿಸಿ, ಸ್ವತಂತ್ರ ಹಿಂದುಸ್ಥಾನದಲ್ಲಿ ನರೇಂದ್ರರು ಪ್ರಜಾತಂತ್ರ ಬದ್ಧರಾದ ಅರಸರಾಗಬೇಕಾಗುವದರಿಂದ ಬ್ರಿಟಿಶ ಕರ್ನಾಟಕದವರು ಬೆದರಬೇಕಾಗಿಲ್ಲೆಂದು ಅವರ ಅಭಿಪ್ರಾಯವಾಗಿತ್ತು.

ಮೈಸೂರು ಕಾಂಗ್ರೆಸ್ ಹೂಡಲಿರುವ ಸತ್ಯಾಗ್ರಹದಲ್ಲಿ ಕಾಂಗ್ರೆಸಿನ ಶಾಸನಸಭಾ ಕಾರ್ಯಕರ್ತರು ಭಾಗವಹಿಸುವದಿಲ್ಲೆಂಬ ಸುದ್ದಿ ಸುಳ್ಳೆಂದು ಕಾಂಗ್ರೆಸ್ ವರಿಷ್ಠರು ಪ್ರಕಟಿಸಿದ್ದಾರೆ.

ಬೆಂಗಳೂರಲ್ಲಿ ಸಾರ್ವಜನಿಕ ಸುರಕ್ಷಿತತೆಯ ಆರ್ಡಿನನ್ಸಿನನ್ವಯ ಬಂಧಿಸಲ್ಪಟ್ಟವರಲ್ಲಿ ೧೧೭ ಜನರನ್ನು ಬಿಡುಗಡೆ ಮಾಡಲಾಗಿದೆ.

ತಾ. ೨೮ ಕ್ಕೆ ಬೆಂಗಳೂರಲ್ಲಿ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಕೂಡಲಿದ್ದು ಶ್ರೀ ಜಯಪ್ರಕಾಶ ನಾರಾಯಣರು ಭಾಷಣ ಮಾಡುವರು. ಮೈಸೂರು ಕಾಂಗ್ರೆಸ್ಸಿನವರು ಹೂಡಲಿರುವ ಹೋರಾಟದಲ್ಲಿ ವಿದ್ಯಾರ್ಥಿಗಳು ವಹಿಸಬೇಕಾದ ಭಾಗವೂ ಚರ್ಚೆಗೆ ಬರಲಿದೆಯೆಂದು ತಿಳಿಯುತ್ತದೆ.

ಮೈಸೂರು ದಂಡಿನ ಭಾಗವನ್ನು ಇದೇ ಜೂನ ಕೊನೆಯೊಳಗೆ ಮೈಸೂರು ಸಂಸ್ಥಾನಕ್ಕೆ ಸೇರಿಸುವದು ಖಂಡಿತವೆಂದು ದಿವಾಣರು ಸಾರಿದ್ದಾರೆ. ಇದುವರೆಗೆ ಅದು ಬ್ರಿಟಿಶರ ಅಧೀನದಲ್ಲಿತ್ತು.

ಕುಂದಾಪುರ ತಾಲೂಕ ಕಾಂಗ್ರೆಸ್ ಸಮಿತಿಗೆ ಶ್ರೀ ಕೆ. ಸೂರಪ್ಪ ಶೆಟ್ಟಿ ಶ್ರೀ ರಮಾನಂದ ಪೈ, ಇವರು ಅಧ್ಯಕ್ಷ ಉಪಾಧ್ಯಕ್ಷರಾಗಿಯೂ ಶ್ರೀ ಎಸ್ ಸುಬ್ಬಣ್ಣ ಶೆಟ್ಟಿ ಶ್ರೀ ಎಚ್ ಕೋಟಿಯಣ್ಣ ಶೆಟ್ಟಿ ಇವರು ಕಾರ್ಯದರ್ಶಿಗಳಾಗಿಯೂ

ವ್ಯಾಪಾರ ಪ್ರಪಂಚ

ಎಪ್ರಿಲ ೨೩

ಮುಂಬಯಿ ಶೇರ ಪೇಟೆ

ಮುಂಬಯಿ ಶೇರ ಪೇಟೆಯಲ್ಲಿ ಈ ವಾರ ಏನೂ ಸುಧಾರಣೆಯಾಗಲಿಲ್ಲ. ಕೂಲಿಕಾರ ಸಂಘಗಳ ಪರಿಸ್ಥಿತಿಯಲ್ಲಿ ಯಾವುದೇ ಅಂತರವಾಗಲಿಲ್ಲವಾದ್ದರಿಂದ ಧೈರ್ಯವೇ ಇಲ್ಲವಾಗಿದೆ. ಮೇಲಾಗಿ ಎಲ್ಲರ ದೃಷ್ಟಿ ದಿಲ್ಲಿಯಲ್ಲಿ ನಡೆದಿರುವ ತೆರೆಮರೆಯ ಚರ್ಚೆಗಳಲ್ಲಿ ನಟ್ಟಿದೆ. ಹೀಗಾಗಿ ಕೊಳ್ಳುವವರು ಮುಂದೆ ಬರುತ್ತಿಲ್ಲ. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ೨೧೪೬—೪—೦ ರಿಂದ ೨೧೬೦—೦—೦ ಕ್ಕೇರಿದರೂ ತಿರುಗಿ ೨೧೦೫-೦-೦ ಕ್ಕಿಳಿದು ೨೧೦೫—೦—೦ ಕ್ಕೆ ಬಂದಿತು. ಡಾಯಿಂಗ್ ೧೧೦೫-೦-೦ ರಿಂದ ೧೧೧೦-೦-೦ ಕ್ಕೇರಿ ೧೦೭೨-೮-೦ ಕ್ಕಿಳಿದು ೧೦೯೦-೦-೦ ರಲ್ಲಿ ಕೊನೆಗೊಂಡಿತು. ಫಿನ್ಲೆ ೩೦೮-೦-೦ ರಿಂದ ೩೦೯-೦-೦ ಕ್ಕೆ ಸುಧಾರಿಸಿ ೩೦೪-೦-೦-೩೦೫ ರಲ್ಲಿದೆ. ಕೋಹಿನೂರು ೫೯೭—೦—೦ ರಿಂದ ೬೧೭-೦-೦ ರ ವರೆಗೆ ಹೋದರೂ ೫೯೫-೦-೦ ಕ್ಕಿಳಿದು ೬೦೯-೦-೦ ಕ್ಕೇರಿದೆ. ಇದ್ದದ್ದರಲ್ಲಿ ಇವಕ್ಕೇ ಸ್ವಲ್ಪ ಬೆಂಬಲವಿತ್ತು. ಸ್ವದೇಶಿ ೫೮೨-೦-೦ ರಿಂದ ೫೯೫-೦-೦ ಕ್ಕೇರಿ ೫೭೦-೦-೦ ಕ್ಕಿಳಿದು ತಿರುಗಿ ೫೮೨-೦-೦ ಕ್ಕೆ ಬಂದವು. ಗೋಕಾಕ ೨೯೭.೦.೦ — ೨೯೮-೦-೦ ರಿಂದ ೨೮೯-೦-೦ ಕ್ಕಿಳಿದು ೨೯೧-೦-೦ ಕ್ಕೆ ಬಂತು. ಟಾಟಾ ಕೆಮಿಕಲ್ಸ ೩೭-೮-೦ ೩೪-೮-೦ ಕ್ಕಿಳಿದರೆ ಇಂಡಿಯನ ಅಯರ್ನ ೨೫೨-೧೧-೦ ರಿಂದ ೨೪೯-೦-೦ ಕ್ಕಿಳಿದು ತಿರುಗಿ ೨೫೨-೦-೦ ಕ್ಕೆ ಹೋಯಿತು. ಅಸೋಸಿಯೇಟೆಡ ಸಿಮೆಂಟ್ಸ ೧೭೯—೭—೦ ಯಿಂದ ೧೭೩ ಕ್ಕೆ ಇಳಿದವು.

ಬ್ಯಾಂಕುಗಳಲ್ಲಿ ಸೆಂಟ್ರಲ ೧೦೨-೮-೦ ಕ್ಕೂ ಇಂಪೀರಿಯಲ ಎಸ್ ಸಿ ೨೨೭೦-೦-೦ ರಿಂದ ೨೨೭೫-೦-೦ ಕ್ಕೇರಿ ೨೨೫೭-೮-೦ ಗಿಳಿದು ಪುನಃ ೨೨೭೦-೦-೦ ಕ್ಕೆ ಬಂತು. ರಿಝರ್ವ ೧೨೦-೦-೦ ರಿಂದ ೧೨೧-೦-೦ ಕ್ಕೇರಿ ೧೧೮-೦-೦ ಕ್ಕಿಳಿಯಿತು.

ಸರಕಾರಿ ಸಾಲ ಪತ್ರಗಳಲ್ಲಿ ಜಿ ಪಿ ೧೦೧-೯-೦ ರಿಂದ ೧೦೧-೧೪-೦ ಕ್ಕೂ ೧೯೬೭-೫೦ ರ ಸಾಲ ೧೦೧-೮-೦ ಯಿಂದ ೧೦೨-೮-೦ ಗೂ ಏರಿತು.

ಚಿನ್ನ ಬೆಳ್ಳಿ

ಲಾಭಬಡಕರು ಕೊಳ್ಳುವದು ಯಥಾಪ್ರಕಾರ ಸಾಗಿದ್ದು ಪೇಟೆಗೆ ಬರುವ ಚಿನ್ನ ಬೆಳ್ಳಿ ಬೇಡಿಕೆಗೆ ಸಾಕಷ್ಟಾಗದ್ದರಿಂದ ೧೦೬-೪-೦ ರಿಂದ ೧೦೫-೧೨.೦ ಕ್ಕೆ ಬಂದಿದ್ದ ಚಿನ್ನ ೧೦೭-೪-೦ಕ್ಕೆ ಬಂದು ಬಿಟ್ಟಿತು. ವಾಯದಾ ೧೦೫-೮.೦. ಬೆಳ್ಳಿಯೂ ೧೭೦-೧೨-೦ ರಿಂದ ೧೬೯-೦-೦ ಕ್ಕಿಳಿದುದು ತಿರುಗಿ ೧೭೪-೦-೦ ಕ್ಕೆ ಹೋಗಿಬಿಟ್ಟಿತು.

ಅರಳೆ

ಅರಳೆ ವ್ಯಾಪಾರದಲ್ಲಿ ಅಷ್ಟೇನೂ ಆಸ್ಥೆಯಿಲ್ಲದಾಗಿದೆ. ಅರಳೆಯ ವಿಷಯಕ್ಕೆ ವರದಿ ಮಾಡಲು ಶ್ರೀ ಗೋರವಾಲಾ ಹಾಗು ಶ್ರೀ ಗಾಡಗೀಳರು ಮುಂಬಯಿಗೆ ಬಂದಿದ್ದು ಅವರ ವರದಿಯನ್ನೆ ಬೆಲೆಗಳು ಅವಲಂಬಿಸಬಹುದು ಜುಲೈ ವಾಯದೆ ೪೩೫-೨-೦ ರಿಂದ ೪೩೭-೦-೦ ಕ್ಕೇರಿ ತಿರುಗಿ ೪೩೫-೬-೦ ಕ್ಕೆ ಬಂತು. ಸೆಪ್ಟೆಂಬರ ೪೪೩-೬-೦.

ಎಣ್ಣೆಕಾಳು

ಶೇಂಗಾ	೧೪೪-೦-೦
ಅಗಸಿ	೨೫-೨-೦
ಅಗಸಿ ಎಣ್ಣೆ	೧೭-೧೪-೦

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೫೧-೫೨
,, ,, ೨	೪೭-೫೦
ಕೊಪ್ಪ ಶೃಂಗೇರಿ	೪೪-೪೮
ಬೆಟ್ಟೆ ಮಂತಿ	೩೪-೩೫½
ಬೆಟ್ಟೆ	೩೧-೩೨½
ತೊರಸಾಲು	೪೨-೪೬

ಸಾಂಗಲಿ ಪೇಟೆ

ಅರಿಷಣ ಹೇರು	೯೨-೯೭½
ಮೆಣಸಿನಕಾಯಿ ಹೇರು ,,	೧೪೦-೧೮೫
ಶೇಂಗಾ ಖಂಡಿ	೧೧೦

ಹುಬ್ಬಳ್ಳಿ ಪೇಟೆ

ಹೊಸ ಜಯವಂತ ಹತ್ತಿ	೨೩೦-೨೫೫
ಹಳೆ ,,	೨೬೫-೨೭೫
ಅಪ್ಲಂಡ ಹತ್ತಿ	೨೬೦-೨೭೦
ಹೊಸ ಜಿನ	೧೭೦-೧೭೫
ಹಳೆ ಜಿನ	೧೬೦-೧೭೦
ಡಬಲರೋಲ	೧೫೫-೧೬೫

ಹಿರಿ ಮಿರಜಿಯಲ್ಲಿ ರಾಜಕೀಯ ಸುಧಾರಣೆ
ಪೂರ್ಣ ಹೊಣೆಗಾರ ಸರಕಾರ

ಮಿರಜ (ಹಿರಿ) ಸಂಸ್ಥಾನದ ರಾಜಾಸಾಹೇಬರು ದಿನಾಂಕ ೨೦ ರಲ್ಲಿ ಒಂದು ಘೋಷಣೆ ಹೊರಡಿಸಿ ಪ್ರಜೆಗಳಿಗೆ ನಿಜವಾದ ಅಧಿಕಾರವನ್ನು ವರ್ಗಾಯಿಸುವ ಸಂಬಂಧದಲ್ಲಿ ಮಹತ್ವದ ಸುಧಾರಣೆಗಳನ್ನು ಸಾರಿದ್ದಾರೆ.

ಈ ಸುಧಾರಣೆಗಳು ಇಂತಿವೆ—

ಕಾರ್ಯಕಾರೀ ಮಂಡಳದಲ್ಲಿ ಮೂರಕ್ಕಿಂತ ಹೆಚ್ಚು ಸದಸ್ಯರಿರಬಾರದು. ಇವರಲ್ಲೊಬ್ಬನು ಈ ಮಂಡಳದ ಅಧ್ಯಕ್ಷನಾಗುವನು. ಶಾಸನ ಸಭೆಯ ಬಹುಮತ ಪಕ್ಷದ ಧುರೀಣನ ಸಲಹೆ ಪಡೆದು ರಾಜಾ ಸಾಹೇಬರು ಈ ಅಧ್ಯಕ್ಷನನ್ನು ಆರಿಸುವರು. ಉಳಿದ ಮಂತ್ರಿಗಳನ್ನು ಅಧ್ಯಕ್ಷರೊಡನೆ ವಿಚಾರ ವಿನಿಮಯ ಮಾಡಿ ರಾಜಾ ಸಾಹೇಬರೇ ನೇಮಿಸುವರು. ಈ ಕಾರ್ಯಕಾರಿ ಮಂಡಳವು ಸಂಸ್ಥಾನದ ಶಾಸನ ಸಭೆಗೆ ಜೊಣೆಯುಳ್ಳದ್ದಾಗುವದು. ಸಂಯುಕ್ತ ಹೊಣೆಗಾರಿಕೆ ತತ್ವವನ್ನು ಮಾನ್ಯಮಾಡಲಾಗಿದೆ. ರಾಜಾ ಸಾಹೇಬರ ಸ್ವಂತ ಹೊಣೆಗಾರಿಕೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು ಉಳಿದೆಲ್ಲ ವಿಷಯಗಳನ್ನು ಈ ಮಂತ್ರಿಮಂಡಳಕ್ಕೆ ಒಪ್ಪಿಸಲಾಗುವದು.

ದಿವಾಣನು ಮುಖ್ಯ ಕಾರ್ಯಕಾರಿ ಅಧಿಕಾರಿ (ಚೀಫ್ ಎಗ್ಸಿಕ್ಯೂಟಿವ ಆಫೀಸರ) ಯಾಗಿ ಉಳಿಯುವನು. ಅವನು ಮಂತ್ರಿಗಳಿಗೆ ಅಧೀನನಾಗಿದ್ದು ಅವರು ಹೇಳಿದಂತೆ ನಡೆದುಕೊಳ್ಳುವನು. ಶಾಸನ ಸದಸ್ಯರೆಲ್ಲರು ಚುನಾವಣೆಯಲ್ಲಿ ಆರಿಸಿ ಬಂದವರಾಗಬೇಕು. ಅಧ್ಯಕ್ಷ ಪದಕ್ಕೆ ಸದಸ್ಯರೊಬ್ಬರನ್ನು ಆರಿಸಲಾಗುವದು. ಅಧ್ಯಕ್ಷ ಹಾಗು ಉಪಾಧ್ಯಕ್ಷ ಸ್ಥಾನಗಳ ಆಯ್ಕೆಗೆ ರಾಜಾ ಸಾಹೇಬರ ಸಮ್ಮತಿ ಅಗತ್ಯವಿಲ್ಲ. ಈ ಹೊಸ ಸುಧಾರಣೆಗಳು ಬೇಗನೆ ಕಾರ್ಯರೂಪದಲ್ಲಿ ಬರಲು ಅಸ್ಪದ ಕೊಡುವದಕ್ಕಾಗಿ ಹೊಸ ಚುನಾವಣೆಗಳನು ಜರುಗಿಸಬಾರದೆಂದು ನಿರ್ಧರಿಸಲಾಗಿದೆ. ಆದರೆ ಸದ್ಯದ ಶಾಸನ ಸಭೆಯಲ್ಲಿ ಎಲ್ಲ ನಾಮಕರಣ ಸದಸ್ಯರನ್ನು ಹಿಂತೆಗೆದುಕೊಂಡು ಬರೆ ನಿಯುಕ್ತ ಸದಸ್ಯರನ್ನೇ ಉಳಿಸಲಾಗುವದು.

ಈ ಮೊದಲು ರಾಜಾ ಸಾಹೇಬರ ವಿಶೇಷ ಹೊಣೆಗಾರಿಕೆಯಾಗಿದ್ದ ಕಾಯದೆ ಸುವ್ಯವಸ್ಥೆ ವಿಷಯಗಳನ್ನು ಮಂತ್ರಿಮಂಡಳಕ್ಕೆ ಒಪ್ಪಿಸಲಾಗುವದು. ಈ ರಾಜಾ ಸಾಹೇಬರ ಸ್ವಂತ ಹೊಣೆಗಾರಿಕೆಗೆ ಸಂರಕ್ಷಣೆ, ಸಂಸ್ಥಾನ ಸಿಬ್ಬಂದಿ, ಸರಕಾರಿ ದೇಣಿಗೆ, ಸರಕಾರಿ ಅತಿಥಿಗಳು ಮೊದಲಾದ ವಿಷಯಗಳನ್ನು ಬಿಟ್ಟು ಕೊಡಲಾಗಿದೆ

ಪಬ್ಲಿಕ ಸರ್ವಿಸ ಕಮೀಶನ ಒಂದನ್ನು ಸ್ಥಾಪಿಸಲಾಗುವದು.

ಹೊಸ ಸುಧಾರಣೆಗಳು ಇದೇ ಮೇ ತಿಂಗಳ ೧೯ ಕ್ಕೆ ಬಳಕೆಯಲ್ಲಿ ಬರುವವು. ಹೊಸ ಮಂತ್ರಿಮಂಡಳದ ಯಾದಿಯನ್ನು ಮೇ ತಿಂಗಳ ೩೧ ನೇ ತಾರೀಕಿಗೆ ಶಾಸನ ಸಭೆಗೆ ಒಪ್ಪಿಸಲಾಗುವದು.

ಸದ್ಯಕ್ಕೆ ಜಿಲ್ಲಾ ಸೆಶನ್ಸ ಜಡ್ಜರಾದ ಶ್ರೀ ಫಡಕೆಯವರು ರಾಜಾ ಸಾಹೇಬರ ಸಲಹೆಗಾರರಾಗಿ ಇನ್ನು ೧೫ ದಿನಗಳಲ್ಲಿಯೆ ನೇಮಕ ಹೊಂದುವ ಲಕ್ಷಣವಿದೆ.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡುವಾಗ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ವ್ಯವಸ್ಥಾಪಕ.

ಮೈಸೂರು ರಾಜಕಾರಣ

"ಸತ್ಯಾಗ್ರಹಕ್ಕೆ ಇದು ತಕ್ಕ ಸಮಯವಲ್ಲ"
ಮೈಸೂರು ದಿವಾಣರ ಅಭಿಪ್ರಾಯ
ಮುದಲಿಯಾರ-ಚಂಗಲರಾಯ ಭೆಟ್ಟಿ

ಇದೀಗ ಅಮೇರಿಕೆಯಿಂದ ಮರಳಿರುವ ಮೈಸೂರು ದಿವಾಣರಾದ ಸರ್ ಅರ್ಕಾಟ ರಾಮಸ್ವಾಮಿ ಮುದಲಿಯಾರರು ಒಂದು ಪತ್ರಿಕಾ ಸಂದರ್ಶನದಲ್ಲಿ ಮೈಸೂರು ಕಾಂಗ್ರೆಸಿನವರು ಹೂಡಬೇಕೆಂದಿರುವ ಸತ್ಯಾಗ್ರಹ ಅಕಾಲಿಕವೆಂದು ಪ್ರತಿಪಾದಿಸಿದರು. ಮುಖ್ಯವಾಗಿ ಜಾತೀಯ ದ್ವೇಷವಿರುವ ಈ ಕಾಲದಲ್ಲಿ ಸತ್ಯಾಗ್ರಹ ಹೂಡುವದು ಯೋಗ್ಯವಲ್ಲೆಂದು ಹೇಳಿದರು. ಬ್ರಿಟಿಶ ಸಾಮ್ರಾಜ್ಯವಾದಿಗಳ ಕೈಕೆಳಗೆ ತರಬೇತಿ ಹೊಂದಿದ ಅವರು, ಜಾತೀಯ ದ್ವೇಷವನ್ನೂ ಎಷ್ಟೇ ಅಹಿಂಸಾತ್ಮಕವಾಗಿರಬೇಕೆಂದು ಮುಂದಾಳುಗಳು ಉದ್ದೇಶಿಸಿದರೂ ಇಂಥ ಚಳವಳಿಗಳು ಹಿಂಸೆಗಳಲ್ಲೇ ತೀರುವವೆಂಬ ಹಳೆಯ ವಾದವನ್ನೂ ಮುಂದೊತ್ತಿದ್ದರಲ್ಲಿ ಆಶ್ಚರ್ಯವಿಲ್ಲ ಆದರೆ ತಾವಿನ್ನು ಕಾಲವಿಲಂಬ ಮಾಡುವದಿಲ್ಲೆಂದೂ ಭಾವೀ ರಾಜಕೀಯ ಸುಧಾರಣೆಗಳನ್ನು ಚರ್ಚಿಸಲು ಮೈಸೂರು ಕಾಂಗ್ರೆಸ ಅಧ್ಯಕ್ಷರಿಗೆ ತಾವು ಆಮಂತ್ರಣ ಕಳಿಸಿದ್ದೇವೆಂದು ಅವರು ಸಾರಿದರು. ಅದೇ ಉಸಿರಿಗೆ ಭಾವೀಘಟನೆಯ ರೂಪರೇಷೆ ತಮ್ಮಲ್ಲಿ ಸಿದ್ಧವಾಗಿದ್ದು ಪಕ್ಷಗಳ ಅಭಿಪ್ರಾಯ ತಿಳಿದುಕೊಂಡು ಬೇಗನೆ ಮಹಾರಾಜರಿಗೆ ಸಲಹೆ ಕೊಡುವದಾಗಿಯೂ ಅವರು ಆಶ್ವಾಸನವಿತ್ತರು. ಆದರೆ ಕಾಂಗ್ರೆಸ್ ಅಧ್ಯಕ್ಷರ ಭೆಟ್ಟಿಯಿಂದ ಯಾವುದೇ ಸ್ಥಿತ್ಯಂತರವಾಗುವದೆಂದು ಯಾರೂ ಆಶಿಸುತ್ತಿಲ್ಲ. ತಾ. ೨೩ ಕ್ಕೆ ಕಾಂಗ್ರೆಸ ಅಧ್ಯಕ್ಷರು ದಿವಾಣರನ್ನು ಭೆಟ್ಟಿಯಾದನಂತರ ಸತ್ಯಾಗ್ರಹ ಮುಂದೆ ಬೀಳಬಹುದೆಂದಿಷ್ಟೆ ತರ್ಕವಿತರ್ಕ ಉಂಟಾಗಿದೆ ಕಾಂಗ್ರೆಸ ಪೂರ್ಣ ಹೊಣೆಗಾರ ಸರಕಾರವನ್ನೆ ಬೇಡುತ್ತಿದೆ. ದಿವಾಣರು ಈ ಬೇಡಿಕೆಯನ್ನು ಮನ್ನಿಸಿದರೆ ಅದೊಂದು ಅಘಟಿತ ಘಟನೆಯೇ ಆದೀತು. ಆದರೆ ಅಂಥ ಘಟನೆಯಾಗುವ ಸಂಭವವಿಲ್ಲ. ರಾಜಕೀಯ ಸುಧಾರಣೆಗಳ ಗುರಿಯೇನೆಂದನ್ನು ಕೂಡ ದಿವಾಣ ಸಾಹೇಬರು ಪ್ರಸಿದ್ಧಿಸಿಲ್ಲ. ಹೊಣೆಗಾರ ಸರಕಾರ ಅಥವಾ ಅದಕ್ಕೆ ಸಮೀಪವಾದುದೇನಾದರೂ ಅವರ ಬತ್ತಳಿಕೆಯಲ್ಲಿದ್ದರೆ ಈಗಾಗಲೆ ಅದರ ಕುರುಹು ಹೊರ ಕಾಣುತಿತ್ತು. ಜಾತೀಯ ದ್ವೇಷದ ಮಾತೆತ್ತಿ ದಿವಾಣರು ಪ್ರಜೆಗಳ ಮನಸಿನಲ್ಲಿ ಇನ್ನಷ್ಟು ಕುಶಂಕೆಗಳೇಳಲು ಅಸ್ಪದ ಕೊಟ್ಟಿದ್ದಾರೆ. ಚನ್ನಪಟ್ಟಣ ಬೆಂಗಳೂರುಗಳಲ್ಲಿ ಈಚೆಗೆ ನಡೆದ ಘಟನೆಗಳಿಗೆ ರಾಜಕೀಯ ಬಣ್ಣ ಬಳಿಯಲು ಅವರು ಹೆಣಗಿದ್ದು ಶೋಚನೀಯ. ಶಿವಮೊಗ್ಗೆಯಲ್ಲಿ ಸೇರಿದ ಮೈಸೂರು ಮುಸ್ಲಿಂ ಲೀಗ್ ಅಧಿವೇಶನ ಹೊಣೆಗಾರ ಸರಕಾರ ಕೊಡಕೂಡದೆಂದು ಗೊತ್ತುವಳಿ ಮಾಡಿದ್ದು ದಿವಾಣರಿಗೆ ತುಂಬ ಅನುಕೂಲವಾಗಿರಬಹುದು. ಕಾಂಗ್ರೆಸ್ಸಿನ ಚಳವಳಿ ಮೈಸೂರ ಭಾಗ್ಯ ವಿಧಾತರನ್ನು ಪ್ರತಿಗಾಮಿ ಮುಸ್ಲಿಂ ಲೀಗಿನ ಶಿಬಿರಕ್ಕೆ ಓಡಿಸುವದೋ ನೋಡಬೇಕಾಗಿದೆ.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಮತ್ತು ಕೊಡಗು ಅಡಿಕೆ ವ್ಯವಸಾಯಗಾರರ ಸಂಘದ ಮೂರನೆ ವಾರ್ಷಿಕಾಧಿವೇಶನ ತಾ. ೧೯ಕ್ಕೆ ಪುತ್ತೂರಲ್ಲಿ ಜರುಗಿತು. ಮದ್ರಾಸ ಸರಕಾರದ ಹೊಸ ಆಹಾರ ಧಾನ್ಯ ಸಂಗ್ರಹ ಯೋಜನೆಯನ್ನು ನಿಷೇಧಿಸುವ, ಕೇಂದ್ರ ಸರಕಾರದ ಅಬಕಾರಿ ಸುಂಕವಿರುವ ಅಡಿಕೆಯಂಥ ವಸ್ತುಗಳ ಮೇಲೆ ಬೇರಾವ ಪ್ರಾಂತವೂ ಮಾರಾಟಕರವನ್ನು ಹೊರಿಸದಿರುವಾಗ ಮದ್ರಾಸ ಸರಕಾರ ಮಾತ್ರ ಹೊರಿಸುವದನ್ನು ಖಂಡಿಸಿ ಕರದ ಮತ್ತು ಪಾವತಿಯನ್ನು ಬೇಡುವ ಮತ್ತು ಅಡಿಕೆ ವ್ಯವಸಾಯಕ್ಕೆ ಸಂಬಂಧಿಸಿದ ಬೇರೆ ಗೊತ್ತುವಳಿಗಳಾದವು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಯ್ಮರಿ ಸ್ಟೋರುಗಳ ಪರಿಷತ್ತೊಂದು ತಾ ೧೯ಕ್ಕೆ ಮಂಗಳೂರಲ್ಲಿ ಜರಗಿತು. ಜನಹಿತ ದೃಷ್ಟಿಯಿಂದ ಸ್ಟೋರುಗಳು ತಮ್ಮ ವ್ಯಾಪಾರವನ್ನು ವಿವಿಧ ಪದಾರ್ಥಗಳಿಗೆ ವಿಸ್ತರಿಸಬೇಕೆಂದು ಠರಾವಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಪೋಸ್ಟಮನ್ ಮತ್ತು ಕೆಳದರ್ಜೆಯ ನೌಕರರ ಸಂಘದ ವಾರ್ಷಿಕ ಸಭೆ ತಾ ೧೩ಕ್ಕೆ ಜರಗಿ ಅಧಿಕಾರಿ ವರ್ಗವನ್ನಾಶ್ರಯಿಸತಲ್ಲದೆ ರಜಾ ದಿನಗಳಲ್ಲಿ ಕೆಲಸ ಮಾಡುವ ಹಳ್ಳಿಯ ಅಂಚೆಯವರಿಗೆ ಅಧಿಕ ಸಮಯದ ವೇತನಕೊಡಬೇಕು. ಅಂಚೆಮನೆಗಳನ್ನು ಹೆಚ್ಚಿಸಬೇಕು, ದಿನಕ್ಕೆ ೮ಗಂಟೆ ಮಿಕ್ಕಿ ಕೆಲಸಮಾಡುವವರಿಗೆ ಹೆಚ್ಚು ಸಂಬಳ ಕೊಡಬೇಕು. ಮೊದಲಾದ ಗೊತ್ತುವಳಿಗಳಾದವು.

ವಾರದ ಕತೆ

ಭೂತಯೋನಿ

ಶ್ರೀಕೃಷ್ಣ ಪಾಟೀಲ ಅವರಿಂದ—



ಮನುಷ್ಯನಿಗೆ ಉಪಜೀವನದಂತೆ ಆತ್ಮಹತ್ಯವೂ ಕಷ್ಟದ ವಿಷಯ. ಬಡತನ, ಅಪಮಾನ, ನಿರುತ್ಸಾಹ ಮತ್ತು ಭಗ್ನ ಜೀವನದಿಂದ ಬೆಂದು ಬೇಗುದಿಗೊಂಡ ಮನುಷ್ಯನು ಸಂತೋಷದಿಂದ ಸತ್ತು ಚಿರಶಾಂತಿಯನ್ನು ಪಡೆಯಬೇಕೆಂದು ಉತ್ಕಂಠಿತನಾಗಿರಲು ಇನ್ನಾವದೋ ಕಾರಣದಿಂದ ಶತವಿಘ್ನಗಳನ್ನೊಡ್ಡಿ ಮತ್ತೂ ಬದುಕಲೆಂದಿರಿಸುವದು ಪ್ರಕೃತಿಯ ಕಟು-ವಿಡಂಬನೆಯೇ ಸರಿ.

ಈ ವಿಡಂಬನೆಯ ಚಕ್ರವ್ಯೂಹದಲ್ಲಿ ಅಶ್ವಿನಿ ಕುಮಾರನು ಸಿಕ್ಕು, ಎರಡು ಮೂರು ಸಾರೆ ಸಿಕ್ಕು, ತೊಳಲಿ, ಬಳಲಿ ಉಳಿದನು. ಇವನು ಹೀಗಾಗಲು ದೈವವು ಕಾರಣವೋ ದೇವನು ಕಾರಣನೋ ತಿಳಿಯದ ವಿಷಯ. ಈ ದೈವ—ದೇವರ ಕಪಟನಾಟಕವನ್ನು ಮರೆತರೂ ಅವನ ಕರುಣಾಮಯ ಜೀವನ ಮರೆಯದಂತಹದು.

ಅಶ್ವಿನಿ ಕುಮಾರನು ಒಬ್ಬ ರಸಿಕ ತರುಣ. ಜೀವನದಲ್ಲಿ ಕೊರತೆಯೆಂಬುವದು ಅವನಿಗೆ ತಿಳಿಯದ ಸಂಗತಿ. ತಂದೆಯು ಪರಿಶ್ರಮಬಟ್ಟು ವಿಶ್ವವಿದ್ಯಾಲಯದವರೆಗೆ ಕಲಿಸಿದನು. ಬಿ.ಎ ದವರೆಗೆ ಇವನಾದರೂ ಕಲಿತನು. ಮೊದಲನೆಯ ವರುಷವೇ ಪಾಸಾದನು. ತಂದೆಗೆ ತುಂಬಾ ಸಂತಸ. ಕೈತುಂಬ ಸಂಬಳದ ಒಂದು ಕೆಲಸವೂ ಸಿಕ್ಕಿತು. ಕಾಲೇಜದ ಮೆಚ್ಚಿದ ಒಬ್ಬ ಬಡ ನಾರಿಯ ಸಂಗಡ ಮದುವೆಯೂ ಆಯಿತು. ಸತಿ—ಪತಿಗಳು ರಸಮಯ ಗೃಹಸ್ಥ ಧರ್ಮಗಂಗೆಯಲ್ಲಿ ಒಂದೆರಡು ವರುಷ ತಮ್ಮ ಜೀವನ ನೌಕೆಯನ್ನು ತೇಲಿಸಿಕೊಂಡು ಬಂದಿರಬೇಕು. ಪ್ರೇಮ ಸಾಗರದಿಂದ ಪುಟನೆಗೆವ ಚಂದ್ರಮನಂತೆ ಒಂದು ಗಂಡು ಮಗುವಾಯಿತು. ಜೀವನದಲ್ಲಿ ಇನ್ನೇನು ಬೇಕಿತ್ತು! ಎಲ್ಲ ತುಂಬಿ ಬಂದು ಮಹಾಪೂರ ಕಟ್ಟಿಕೊಂಡಿತು. ಅಶ್ವಿನಿ ಕುಮಾರ, ಹೆಂಡತಿ, ಮಗುವು ಒಂದು ಆದರ್ಶ ಕುಟುಂಬದ ರಸಘಟ್ಟಿಯೆಂದರೂ ಸರಿ. ದಿವಸಗಳನ್ನು, ವಾರಗಳನ್ನು ತಿಂಗಳುಗಳನ್ನು ನಕ್ಕು ನಕ್ಕು ಕಳೆದರು. ಅವರ ನಗೆಯ ಕಲರವವು ದೈವಕ್ಕೂ, ಭವಿಷ್ಯಕ್ಕೂ ಕೇಳಿಸಿರಲು ಸಾಕು. ಮುಂದೆ ಆಕಸ್ಮಿಕ ವೃದ್ಧಾಪ್ಯದ ಮೂಲಕ ತಂದೆಯವರು ತೀರಿಕೊಂಡರು. ಅಶ್ವಿನಿ ಕುಮಾರನಿಗೆ ತಂದೆ ತೀರಿದುದಕ್ಕೆ ಬಹಳ ವ್ಯಸನವಾಯಿತು. ತಾನು ಇನ್ನಷ್ಟು ದಿನ ಸೇವೆಗೈಯಲಿಲ್ಲೆಂದು ದುಃಖಪಟ್ಟನು. ಅದರೆ ಆ ದುಃಖವು ಹೆಂಡತಿ—ಮಗನ ಮುಂದೆ ಬೇಗ ವಿಸ್ಮರಣೆಗಿಟ್ಟುಕೊಂಡಿತು. ಮತ್ತೆ ಮೊದಲಿನಂತೆ ಚಕ್ರ ನಡೆಯಿತು.

ತಂದೆಯು ತರುಣರ ಜೀವನಕ್ಕೆ ಸಹಕಾರಿಯಲ್ಲದಿದ್ದರೂ ಸಂಕಟದವರೆಂದು ಅಶ್ವಿನಿ ಕುಮಾರನಾಗಲಿ, ಹೆಂಡತಿ ಮಧುಮಾಲತಿಯಾಗಲಿ ತಿಳಿದಿರಲಿಲ್ಲ. ತಮ್ಮ ತರುಣ ಜೀವನದಲ್ಲಿಯ ತಪ್ಪು ತಡೆಗಳನ್ನು ಸೌಮ್ಯದಿಂದ ಗುರಿಯಿಲ್ಲದೆ ಬೆರಳಿಟ್ಟು ತೋರಿಸುವ ಉಪದೇಶಕರೆಂದು ತಿಳಿದಿದ್ದರು. ತಂದೆ (ಮಾವ)ಯಾಗಲಿ ತರುಣರ ಸ್ವಚ್ಛಂದ ಜೀವನಕ್ಕೆ ಉಪದೇಶದ ಅಧಿಕ ಪೀಡೆಯಾಗದಂತೆ ನೋಡುತ್ತ ನಡೆದಿದ್ದರು.

ಮರಣವೆಂದರೆ ಚಿರಶಾಂತಿಯಲ್ಲವೇ? ಎಂಬ ವಿಚಾರ ಕಲಾಪದಲ್ಲಿ ಹೆಜ್ಜೆ ಇಟ್ಟು ನಡೆದಿರಬೇಕು. ಅಶ್ವಿನಿ ಕುಮಾರನು ಕೊನೆಯ ನಿರ್ಧಾರ ಮುಟ್ಟಲಿಕ್ಕೆ ಮುಪ್ಪಿನ ತಂದೆಯ ಜೀವನ, ಸಾಹಸ, ಕೃತಾರ್ಥ ಗೃಹಸ್ಥ ಧರ್ಮ, ಸಂತಾನದ ಹಿತಕಾಂಕ್ಷೆ ಸಹಕಾರಿಯಾಗಿ ನಿಂತು ಸಮರ್ಥಿಸುತ್ತಿದ್ದವು. ಇನ್ನೆರಡು ದಿನವಾಗಿದ್ದರೆ ನಿರ್ಧಾರವಾಗುತ್ತಿತ್ತೇನೋ! ಮಗನು ಬೇನೆಬಿದ್ದನು. ಉಲ್ಬಣಾವಸ್ಥೆಗಿಟ್ಟಿತು. ಒಂದಿನ ಕಣ್ಣನ್ನೂ ಮುಚ್ಚಿತು. ಅಂದಿಗೆ ಮೊದಲಿನ ವಿಚಾರಗಳೆಲ್ಲ ತಲೆಕೆಳಗಾದವು. ಮರಣವು ಭಯಾನಕವೆನಿಸಿತು. ಮನೆಬೆಳಗಿದ ಮನೆತುಂಬಿದ, ಮುದ್ದಿನ ಮಗನ ಸಾವು ಕಾಳರಾತ್ರಿಯನ್ನು ಹರಡಿತು. ಕೈತುಂಬ ನಲಿದಾಡಿದ ಪ್ರೇಮದ ಮುದ್ದೆ ಮಣ್ಣಲ್ಲಿ ಬೆರೆತು ಹೋಯಿತು. ಹೃದಯವನ್ನೆಲ್ಲ ನಿರಾಶೆ ತುಂಬಿಕೊಂಡಿತು. ಮಧುಮಾಲತಿಯು ನೆಲವನ್ನೇ ಹಿಡಿದಳು. ಆವಳಿಗೆ ಏಳೆಂದು ಹೇಳಲು ಅಶ್ವಿನಿ ಕುಮಾರನಿಗೆ ಮಾತಿಲ್ಲದಾಯಿತು, ಮನಸಿಲ್ಲದಾಯಿತು, ಹೃದಯವಿಲ್ಲದಾಯಿತು, ಮನೆ ತುಂಬ ಮೌನದ ಸಾಮ್ರಾಜ್ಯ! ತಾನೇನೋ ಗಂಡುತನಕ್ಕೆ ಸರಿಯೆನಿಸುವ ಉಪಜೀವನದ ಸೌಕರ್ಯವೆಂದು ಕೆಲಸಕ್ಕೆ ಹೋಗುವನು, ಬರುವನು. ಗೆಳೆಯರು ಕೆಲದಿನ ರಜೆತೆಗೆದುಕೊಂಡು ಹೋಗೆಂದು ಆಗ್ರಹಪಟ್ಟರು. ಆದರೆ ಎಲ್ಲವು ವ್ಯರ್ಥ. ಮಧುಮಾಲತಿಯು ಇನ್ನು ಏಳಲಿಲ್ಲ. ಡಾಕ್ಟರರು ಏನೇನೋ ಹೆಸರಿಟ್ಟರು ಔಷಧವಂತೂ ನಡೆದೇ ಇದ್ದಿತು ಮಧುಮಾಲತಿಯ ಆರಯಿಕೆಯಲ್ಲಿ ಅಶ್ವಿನಿಯೂ ನಿರುತ್ಸಾಹಿಯಾದನು. ಅದಕ್ಕೆ ಕಾರಣವಿದ್ದಿತು. ಅವಳಿಗೂ ಬದುಕಿ ಎದ್ದು ನಿಲ್ಲಬೇಕೆಂದು ಆಶೆ ಇರಲಿಲ್ಲ. ಇದನ್ನು ಕುಮಾರನು ತುಂಬಾ ಅರಿತಿದ್ದನು, ಔಷಧವನ್ನು ಕುಡಿದರೆ ಕೊಡುವದು, ಇಲ್ಲದಿದ್ದರೆ ನೆಲಕ್ಕೆ ಸುರುವಿ ಮತ್ತೆ ತುಂಬಿತರುವದು. ಇವರ ನಿಷ್ಕಾಮ ಕರ್ಮಕ್ಕೆ ದೇವರು ಕಿವಿಗೊಡಬೇಕಿದ್ದಿತು. ಆದರೆ ಹಾಗಾಗಲಿಲ್ಲ. ಒಂದಿನ ಮಾಲತಿಯು ಗಂಡನ ಕೈಗೆ ಮುದ್ದಿಟ್ಟು ತೆರಳಿದಳು. ಹೋಗುವ ಮುಂದೆ ಇದೊಂದು ವಿಚಿತ್ರ ಕೆಲಸವನ್ನು ಮಾಡಿದಳು. ಹೀಗೆ ಜನರಾಡಿಕೊಳ್ಳುವರು. ಅಂದರೆ ಅವನ ಬುದ್ಧಿಯನ್ನು ಕೆಡಿಸಿದಳು ಅಶ್ವಿನಿ ಕುಮಾರನು ಇಂದಿಗೆ ಬುದ್ಧಿ ಶೂನ್ಯ ಅಥವಾ ಅವನ ಬುದ್ಧಿ ಅವನ ಸ್ವಾಧೀನ ತಪ್ಪಿದೆ ಎಂದರೂ ಸರಿ. ಬುದ್ಧಿಯ ಸ್ವಾಧೀನತೆಗೆ ತನ್ನನ್ನು ಮಾರಿಕೊಂಡಿರುವನು. ಸಂಸ್ಕಾರಜನ್ಯ ಬುದ್ಧಿ ಒಮ್ಮೊಮ್ಮೆ ಅವನತನವನ್ನು ಕಾಯ್ದಿಟ್ಟಂತೆ, ಒಮ್ಮೆ ಗಾಳಿಗೆ ತೂರಿದಂತೆ ಕಂಡುಬರುವದು. ಒಟ್ಟು ಅವನನ್ನು ಅರೆ ಹುಚ್ಚರಲ್ಲಿ ಜನರು ಎಣಿಸುವರು.

ಅಶ್ವಿನಿ ಕುಮಾರನ ಜೀವನವು ಇಂದಿಗೆ ಬರಿದೋ ಬರಿದು, ತೆರವೋ ತೆರವು. ಸೌಂದರ್ಯದಿಂದ ಕಿಕ್ಕಿರಿ ತುಂಬಿದ ಈ ನೆಲ ಒಣ ಒಣ ಭಣ ಭಣ. ಈ ಶೂನ್ಯ ಸಂಸ್ಕಾರವನ್ನು ಗುರಿಯಿಲ್ಲದ ಓಟದಿಂದ ಸಾಗಿಸಿಕೊಂಡು ಹೋಗುವದು ಸಾಕಾಯಿತು. ತಂದೆ, ಹೆಂಡತಿ, ಮಗನ ಸಾವು ಕೂಗಿಟ್ಟು ಕರೆದಂತೆ ಕಿವಿಯಲ್ಲಿ ಮಾರ್ನುಡಿಯಿತು. ಎಷ್ಟು ಬಗೆಯಿಂದ ವಿಚಾರಿಸುತ್ತ ಬಂದರೂ ಮರಣಕ್ಕೆ ಕಿವಿಗೊಟ್ಟು ಚಿರಮುಕ್ತಿ ಸಿದ್ಧಾಂತಕ್ಕೆ ತಿರುಗಿದನು. ಸರಿ ಸಾಯಬೇಕು! ಸಾಯಬೇಕು ಎಂಬ ಆಸ್ಫಾಲನೆಗಳೇ ನಾಡಿ ನಾಡಿಗಳಲ್ಲಿ ತುಂಬಿಕೊಂಡವು.

ಅಶ್ವಿನಿ ಕುಮಾರನ ಈ ಅಕರ್ಮಣ್ಯ ಜೀವನದಿಂದ ಗೆಳೆಯರೆಲ್ಲ ಮರುಗಿದರು. ಇನ್ನೊಂದು ಮದುವೆಯ ಮಂತ್ರವನ್ನು ಊದಿದರು. ಆದರೆ ಅದೆಲ್ಲ ವ್ಯರ್ಥ. ಮದುವೆಯ ಮಾತಿಗೆ ಅವನ ಮರಣದ ಸಂಭಾಷಣೆ ಚರ್ಚೆಗೊಂಡು ಮುಂದುವರಿಯಹತ್ತಿತು. ಈ ಸಾಯಲಿಕ್ಕೆ ಹೊರಟವನ ಮನೆಯ ರೀತಿ ನೀತಿಗಳು ಅಸ್ತವ್ಯಸ್ತವಾದವು. ಒಂದಿನ ಮನೆಯಲ್ಲಿದ್ದರೆ ನಾಲ್ಕು ದಿನ ಬೀದಿಯ ಮೇಲೆ, ಗುಡಿಗುಂಡಾರಗಳಲ್ಲಿ, ಸಂತೆ ಕೋಟಿಯಲ್ಲಿ. ನೆಲವು ಹಾಸಿಗೆಯಾಯಿತು. ಮುಗಿಲು ಹೊದಿಕೆಯಾಯಿತು. ಜನರು ಸ್ಪಷ್ಟವಾಗಿ ಹುಚ್ಚನೆಂದು ಕೂಗಹತ್ತಿದರು. ತಮ್ಮ ಜೀವನಕ್ಕೆ ಅಡ್ಡಿಯಾಗದಂತೆ ಕಂಡಂದ ಪರಾಮರ್ಶಿಸುತ್ತ ನಡೆದರು ಒಂದಿನ ಸಂಜೆಯ ಮುಂದೆ ಕೈಯಲ್ಲಿ ಹಗ್ಗವನ್ನು ಹಿಡಿದು ನಡೆದಿದ್ದನು. ಗೆಳೆಯ ಶಿವದಾಸನು ಭೆಟ್ಟಿಯಾದನು.

“ಅಶ್ವಿನಿ ಕುಮಾರ, ಎಲ್ಲಿಗೆ ನಡೆದೆ?” ಎಂದು ಕೇಳಿದನು.

“ಮರಣ......!” ಅಶ್ವಿನಿ ಅಸ್ಪಷ್ಟವಾಗಿ ನುಡಿದನು.

“ಮರಣ......!” ಅವಾಕ್ಕಾದನು ಗೆಳೆಯ.

“ಓ! ಶಿವದಾಸ, ಬಾ ಇಲ್ಲಿ”

“ಆತ್ಮಹತ್ಯೆಯೋ?”

“ಅಹುದು... ಶಿವದಾಸ, ಮಾಲತಿಯು ತನ್ನ ಮಗನ ಸಂಗಡ ನಲಿಯುತ್ತ ಇರಹತ್ತಿ ಆರು ತಿಂಗಳಾಯಿತಲ್ಲವೇ? ಒಂದೊಂದು ದಿನ ಮಗುವು ನನ್ನನ್ನು ನೆನೆಸಿ ಅತ್ತೇ ಅಳುವದಂತೆ! ನನ್ನ ನಿದ್ರೆಯ ತುಂಬ ಮಗನ ಅಳುವೂ, ಹೆಂಡತಿಯ ಕೂಗೂ ತುಂಬಿ ತುಂಬಿ ಕೇಳಬರುವದು. ಈ ಕೋಲಾಹಲ ಸ್ವಪ್ನ ಜೀವನವನ್ನು ಹೇಗೆ ಸಹಿಸಲಿ! ಕರುಳು ಹರಿದುಕೊಂಡು ನಿಂತ ತಂದೆ ಇನ್ನೆಷ್ಟು ದಿನ ಬದುಕಬಹುದ.! ಎತ್ತರಿಸಿದು ಕೈಗೆ ಸಿಗುವ ಸಾವನ್ನು ನಾನು ಈ ವರೆಗೂ ಮರೆತಿರುವೆನಲ್ಲ. ಇಂದು ಹೋಗುವೆ...... ಇನ್ನೊಂದು......”

“ಏನು?” ಉತ್ಸುಕತೆಯಿಂದ ಕೇಳಿದನು.

“ಏನೆಂದರೆ... ಅಲ್ಲಿಯೂ, ನಾನು ಹೋದರೆ ಮಗನೂ ಹೆಂಡತಿಯೂ ಸಾಯಲಿಕ್ಕಿಲ್ಲವಷ್ಟೇ!”

“ಹಾಗಾಗನು,” ಶಿವದಾಸನು ಸಂತಾಪದಿಂದ ನುಡಿದನು.

“ಹ! ಅದೇ ಎಂದೆ; ಇಲ್ಲಿ ನೀನು ಕೊಟ್ಟ ನಂಬಿಕೆಯು ಅಲ್ಲಿ ಸತ್ಯವಾಗುತ್ತಿದ್ದರೆ ನಾನು ಹೋಗಬೇಕು. ಒಳ್ಳೇದು ಹೋಗುವೆ.” ಹುಚ್ಚು ನಗೆ ಬೀರಿ ಓಡಿದನು.

“ಅಶ್ವಿನೀ...!”

“ಬೇಡ... ಬೇಡ... ಮಾಲೂ, ಬಂದೆ... ...ಬಂದೆ.” ಓಡಿ ಕಣ್ಮರೆಯಾದನು.

ಶಿವದಾಸನು ಭಯದಿಂದ ನಡುಗಿದನು. ಕ್ಷಣ ಸಹ ತಡವಾದರೆ ಹಾನಿಯೆಂದುಕೊಂಡನು. ತನ್ನ ನಾಲ್ಕಾರು ಗೆಳೆಯರನ್ನು ಕೂಡಿಕೊಂಡು ಅಶ್ವಿನಿ ಕುಮಾರನನ್ನು ಹಿಡಿದು ತರಹೋದನು ಆದರೆ ಇಷ್ಟರಲ್ಲಿ ಅವನು ಪೋಲೀಸರ ವಶನಾಗಿದ್ದನು.

ಅಂತೂ ತಿಂಗಳೊಪ್ಪತ್ತು ಬಂಧನವನ್ನನುಭವಿಸಿ ಮನೆಗೆ ಬಂದ. ಅಂದರೆ ಪೋಲೀಸರ ಪೀಡೆಯಿಂದ ಮುಕ್ತನಾಗಿ ಬೀದಿಗಿಳಿದ. ಈಗ ಮರಣವು ತಲೆಯಲ್ಲಿ ತಾಂಡವನೃತ್ಯವಾಡಹತ್ತಿತು. ವೈಮೇಲಿನ ಬಟ್ಟೆ, ದೇಹದ ವಿಕಾರರೂಪ, ಬಾಯೊಳಗಿನ ಅಸಂಬದ್ಧ ಮಾತು ತಲೆತುಂಬಿದ ಮೃತ್ಯುವಿನ ಕೋಲಾಹಲದಿಂದ ಮರಣ ತೀರ ಸಮೀಪವೆಂದುಕೊಂಡನು. ಸರಿ. ಮತ್ತೆ ಸಾವು ಸಾಯಬೇಕು. ಗೆಳೆಯರಿಂದ ಕೆಲ ಹಣ ಕೈಗಡ ಪಡೆದುಕೊಂಡನು. ಔಷಧದ ಅಂಗಡಿಗೆ ಹೋದನು. ವಿಷವನ್ನು ಬೇಡಿದನು. ಅಂಗಡಿಕಾರನು ಯಾತಕ್ಕೆಂದು ಕಾರಣವನ್ನು ಕೇಳಿದನು. ಅಶ್ವಿನಿಕುಮಾರನು ನಿಜ ಸಂಗತಿಯನ್ನು ಹೇಳಿದನು. ಅವನು ಕೊಡುವೆನೆಂದು ಕುಳ್ಳಿರಿಸಿ ಪೋಲೀಸರ ಕೈಗೆ ಕೊಟ್ಟನು. ಮತ್ತೆ ಬಂಧನ ಶಿವದಾಸನು ದುಮ್ಮಾಲ ಮರುಗಿದನು. ಬಿಡಿಸಿಕೊಂಡು ಬಂದು ಮನೆಯಲ್ಲಿಟ್ಟುಕೊಂಡನು. ಅವನಿಗೆ ತಾನರಿತ ಪಾರಮಾರ್ಥಿಕ ಜ್ಞಾನವನ್ನು, ಪ್ರೇಮದ ಸವಿನುಡಿಗಳನ್ನು, ತಾಳ್ಮೆಯ ಸಾಂಸಾರಿಕ ಶಬ್ದಗಳನ್ನೂ ದಿನಂಪ್ರತಿ ಹೇಳುತ್ತ ಮಗುವಿನಂತೆ ಕಾಯ್ದು ತಂದನು. ನಿತ್ಯ ಅವನನ್ನು ತಿರುಗಾಡಿಸಿಕೊಂಡು ಬರುವದು, ಒಳ್ಳೊಳ್ಳೆಯ ದೃಶ್ಯಗಳನ್ನು ತೋರಿಸುವದು ಇತ್ಯಾದಿಗಳಿಂದ ಮನುಷ್ಯರಲ್ಲಿ ಎಳೆಯುತ್ತಿದನು. ಅಶ್ವಿನಿಯು ಮರಣವೆಂಬುದನ್ನು ಬಾಯಲ್ಲಿ ನುಡಿಯದಿದ್ದರೂ ತಲೆಯಲ್ಲಿ ನಡೆದ ತರ್ಕವಿತರ್ಕ ತಿಳಿಯದೆ ಹೋಯಿತು.

ಒಂದುದಿನ ಶಿವದಾಸನು ಕೆಲಸಕ್ಕಾಗಿ ಬೇರೂರಿಗೆ ಹೋಗಿದ್ದನು. ಅಶ್ವಿನಿಕುಮಾರನು ಊಟ ತೀರಿಸಿ ಪಡಸಾಲೆಯಲ್ಲಿ ಯಾವುದೋ ಸ್ವಪ್ನವನ್ನು ಕೆದರುತ್ತ ಕುಳಿತಿರಬೇಕು. ಕೂಡಲೆ ಶಿವದಾಸನ ಕಕ್ಕ ರಾಮದಾಸನನ್ನು ಬಡಿಯಬೇಕೆಂದು ಒಬ್ಬ ಟೊಣಪನು ಓಡುತ್ತ ಬಂದನು. ರಾಮದಾಸನು ಗಾಬರಿಯಾಗಿ ಅಡಗಿಕೊಳ್ಳಬೇಕೆಂದನು. ಆದರೆ ಟೊಣಪನ ಕೈಗೆ ಸಿಕ್ಕನು. ಅವನು ಪ್ರಾಣದಾಸೆಯಿಂದ ಚೀರುತ್ತ “ಕೊಲ್ಲಿರಿ. ಕೊಲ್ಲಿರಿ” ಎಂದು ಅಬ್ಬರಿಸಿದನು. ಅಶ್ವಿನಿ ಕುಮಾರನು ಮೂಲೆಯಲ್ಲಿಟ್ಟಿದ್ದ ಬೊಕ್ಕೆಯನ್ನೆತ್ತಿ ಟೊಣಪನ ತಲೆಯಮೇಲೆ ಇಕ್ಕಿದನು. ಟೊಣಪನು ರಕ್ತ ಸುರಿಸಿ ಸತ್ತುಬಿದ್ದನು. ರಾಮದಾಸನು ಗಾಬರಿಯಾಗಿ—

“ಅಶ್ವಿನಿ ಕುಮಾರ, ಇದೇನು ಮಾಡಿದೆ?” ಎಂದು ಕೂಗಿದನು.

“ನೀನು ಹೇಳಿದೆಯಲ್ಲವೆ!” ಎಂದು ನಕ್ಕನು.

ಜನರು ನೆರೆದರು. ಪೋಲೀಸರಿಗೆ ತಿಳಿಯಿತು. ಪಂಚನಾಮೆಯಾಗಿ ಅಶ್ವಿನಿ ಕುಮಾರನನ್ನು ಹಿಡಿದುಕೊಂಡು ತುರಂಗಿನಲ್ಲಿಟ್ಟರು.

ಮುಂದೆ ಕೋರ್ಟಿನಲ್ಲಿ ನ್ಯಾಯ ನಡೆಯಿತು.

ಶಿವದಾಸನು ಊರಿಂದ ಬಂದನು. ಎಲ್ಲವನ್ನು ಅರಿತುಕೊಂಡನು. ಅಶ್ವಿನಿ ಕುಮಾರನನ್ನು ಉಳಿಸಿಕೊಳ್ಳಬೇಕೆಂದು ಎಷ್ಟು ಪ್ರಯತ್ನಿಸಿದರೂ ಸಾರ್ಥಕವಾಗಲಿಲ್ಲ. ನ್ಯಾಯಾಧೀಶರು “ಅಶ್ವಿನಿ ಕುಮಾರನಿಗೆ ಗಲ್ಲಿನ ಶಿಕ್ಷೆ” ಎಂದು ಓದಿಬಿಟ್ಟರು. ಶಿವದಾಸನು ಸಂಕಟಪಟ್ಟನು.

“ಅಶ್ವಿನಿ... ನಿನಗೆ ಮರಣವಾಯಿತು!” ಎಂದು ಕಣ್ಣುಮುಚ್ಚಿಕೊಂಡು ಅಳಹತ್ತಿದನು.

—ರಿತೀನೇ ಫುಟಕ್ಕೆ

“ಕರ್ನಾಟಕದ ಅವಶ್ಯಕತೆಗಳು”

ಟಿಳಕ ಟ್ರಸ್ಟಿನ ಪರವಾಗಿ ರೂ- ೫೦೦ ಬಹುಮಾನ

‘ಕರ್ನಾಟಕ ಪ್ರಾಂತವು ಸ್ವತಂತ್ರವಾದೊದನೆ ಅದೊಂದು ಸರ್ವಾಂಗ ಪರಿಪೂರ್ಣ ಪ್ರಾಂತವೆನಿಸಬೇಕಾದರೆ ಅದರ ಜೀವನದ ವಿವಿಧ ಕ್ಷೇತ್ರಗಳಲ್ಲಿ ಅದರ ಅವಶ್ಯಕತೆಗಳೇನು ಹಾಗು ಅವುಗಳನ್ನು ಪೂರೈಸುವ ಉಪಾಯಗಳಾವುವು? (Needs of separate province of Karnatak in all fields of Life and the ways and means to fulfil the same)— ಈ ವಿಷಯವನ್ನು ಕುರಿತು ಒಂದು ಕನ್ನಡ ಪ್ರಬಂಧವನ್ನು ಅಂಕಿ ಸಂಖ್ಯೆಗಳೊಂದಿಗೆ ಬರೆಯಿಸಬೇಕೆಂದು ಟಿಳಕ ಟ್ರಸ್ಟಿನವರು ನಿರ್ಧರಿಸಿದ್ದಾರೆ.

ಹಾಗೆ ಬರೆದು ಬಂದ ಪ್ರಬಂಧಗಳಲ್ಲಿ ಟ್ರಸ್ಟಿನ ದೃಷ್ಟಿಯಿಂದ ಉತ್ತಮವೆನಿಸಿದ ಪ್ರಬಂಧಕ್ಕೆ ೫೦೦ ರೂಪಾಯಿ ಕೊಡದೇಕೆಂದು ಗೊತ್ತಾಗಿದೆ.

ವಿವರಗಳು

೧. ಅವಧಿ: ಇಂದಿನಿಂದ ಒಂದು ವರುಷದ ಒಳಗೆ ಟ್ರಸ್ಟಿನ ಕೈ ಸೇರಬೇಕು.

೨. ಪುಟ ಸಂಖ್ಯೆ ಇತ್ಯಾದಿ: ಪುಟದ ಒಂದೇ ಮಗ್ಗಲಿಗೆ ಬರೆದು, ಪುಟದ ೧/೪ ಅಂಶದಷ್ಟು ಮಾರ್ಜಿನ್ ಬಿಟ್ಟು ದುಂಡಗಿರುವ ಅಕ್ಷರದಲ್ಲಿ ಪ್ರತಿಪ.ಟಕ್ಕೆ ೩೫ ಸಾಲುಗಳುಳ್ಳ ೨೫೦ ಫುಲಸ್ಕೇಪ ಆಕಾರದ ಪುಟಗಳು.

೩. ಒಡೆತನ: ಬಹುಮಾನ ಪಡೆದ ಪ್ರಬಂಧದ ಒಡೆತನವು ಟ್ರಸ್ಟಿಗೆ ಸೇರುವದು. ಮಿಕ್ಕ ಪ್ರಬಂಧಗಳು ತಿರುಗಿ ಕಳಿಸಲಾಗುವವು.

ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕು.

ರಂಗನಾಥ ದಿವಾಕರ
ಕಾರ್ಯದರ್ಶಿ

ಹುಬ್ಬಳ್ಳಿ | ಕರ್ನಾಟಕ ಲೋಕಮಾನ್ಯ
೧೮—೪—೪೭ | ಟಿಳಕ ಪರ್ಸ ಫಂಡ ಟ್ರಸ್ಟ



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಛತೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಏಪ್ರಿಲ ೨೮ ರಿಂದ ಮೇ ೪ ರ ವರೆಗೆ

ಮೇಷ

ಸ್ವಂತ ಹಾಗು ಹೆಂಡತಿಗೆ ಪ್ರಾಪಂಚಿಕ ವಿಷಯಗಳಲ್ಲಿಯ ಚಿಂತೆಯಿಂದ ಪ್ರಕೃತಿಗೆ ತೊಂದರೆ. ಜೀವದ ಅತ್ಯಂತ ಕಾಳಜಿಯಾಗಿ ಕಾಲ ಕಳೆಯುವ ಪ್ರಸಂಗ, ಹಾಗು ಸ್ವಂತ ಕೆಲಸ ಬಿಟ್ಟುಕೊಟ್ಟು ಮೊದಲು ಅವರ ಕೆಲಸ ಮಾಡಲು ಯೋಚಿಸಬೇಕು. ಉದ್ಯೋಗದಲ್ಲಿ ಪ್ರಗತಿ ಹಾಗು ಲಾಭ ಅಲ್ಪ. ಅದರೆ ಪ್ರತಿಷ್ಠೆ ಹಾಗು ಕೀರ್ತಿ ಬಹಳ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಅಪಯಶ ಮತ್ತು ಬಹಳ ವೆಚ್ಚ. ಕೋರ್ಟ ವ್ಯವಹಾರದಲ್ಲಿ ಬೇರೆ ಮೋಸ. ಪ್ರವಾಸ ಹಾಗು ಪತ್ರವ್ಯವಹಾರಕ್ಕಿಂತ ಭೆಟ್ಟಿ ನೆಟ್ಟಗೆ. ಅಶ್ವಿನಿಯ ೪ ನೇ ಹಾಗು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೮, ೩೦, ೪ ನೆಟ್ಟಗೆ.

ವೃಷಭ

ಸ್ವಂತ ಹಾಗು ಹೆಂಡತಿಯ ಪ್ರಕೃತಿ ನೆಟ್ಟಗೆ. ಅದರೆ ಪರಸ್ಪರ ಪ್ರೇಮಭಾವ ಕಡಿಮೆ. ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕ್ಷಣ ಕ್ಷಣಕ್ಕೆ ಬದಲಾಗುವಿಕೆ. ಉದ್ಯೋಗದಲ್ಲಿ ಪ್ರಗತಿ ಹಾಗು ಪ್ರತಿಷ್ಠೆ ನೆಟ್ಟಗೆ. ಅದರೆ ಲಾಭ ಕಡಿಮೆ. ಮಿತ್ರರೊಡನೆ ವಿಶ್ವಾಸ ಒಡಕು ವ್ಯಾಜ್ಯ. ಹಾಗು ಸ್ಪರ್ಧೆಯಲ್ಲಿ ಭಾವೀ ಯಶಕ್ಕೆ ಪೋಷಕ ಘಟನೆಗಳು. ಪ್ರವಾಸ ಉತ್ತಮ. ಅದರೆ ಭೆಟ್ಟಿ ಹಾಗು ಪತ್ರವ್ಯವಹಾರ ಸಾಧಾರಣ ಅನಿಶ್ಚಿತ. ಕೃತ್ತಿಕೆಯ ೪ ನೇ ಹಾಗು ರೋಹಿಣಿಯ ಮೊದಲನೆ ೩ ಚರಣಗಳಿಗೆ ಬಹಳ ತೊಂದರೆ. ತಾ. ೨೮, ೨, ೩ ನೆಟ್ಟಗೆ.

ಮಿಥುನ

ಪ್ರಕೃತಿ ಹಾಗು ಸ್ತ್ರೀ ಸುಖ ನೆಟ್ಟಗೆ. ಅದರೆ ಮಕ್ಕಳಿಂದ ಬಹಳ ಅಪ್ರಿಯ ಘಟನೆಗಳು. ಅದರೆ ಪರ ಪ್ರಾಪಂಚಿಕ ಉತ್ಕರ್ಷದ ಒಂದು ಸಂಗತಿ ಘಟಿಸುವ ಯೋಗ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಹಾಗು ಲಾಭ ಪ್ರತ್ಯಕ್ಷ ಆಗುವದಕ್ಕಿಂತ ಅಂದಾಜೇ ಹೆಚ್ಚು. ಮಿತ್ರರಲ್ಲಿ ಕ್ಲೇಶ. ರೋಗ ಸಂಗ್ರಹದಲ್ಲಿ ಹೆಚ್ಚಳ. ಅದರೆ ಸ್ಥಾವರ ಸಂಬಂಧದಲ್ಲಿ ಕೆಲವೊಂದು ನೇಮ್ಹಿ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಉಭಯ ಪಕ್ಷದ ಸಮಾನ ಸ್ಥಿತಿ. ಲಗ್ನ, ಮುಂಜಿವಿ, ಉದ್ಘಾಟನ ಮೊದಲಾದ ಅನೇಕ ಸಮಾರಂಭಗಳಲ್ಲಿ ಹಾಜರಿರುವ ಯೋಗ. ಪ್ರವಾಸ ಹಾಗು ಭೆಟ್ಟಿಗಿಂತ ಪತ್ರವ್ಯವಹಾರ ನೆಟ್ಟಗೆ. ಮೃಗಾದ ೪ ನೇ ಹಾಗು ಅದ್ರಾ೯ದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೮, ೨೯, ೩೦, ೪ ನೆಟ್ಟಗೆ.

ಕರ್ಕ

ಪ್ರಕೃತಿ ನೆಟ್ಟಗೆ. ಅದರೆ ಹೆಂಡತಿಯೊಡನೆ ಕ್ಷುಲ್ಲಕ ಕಾರಣದಿಂದ ಮೇಲಿಂದ ಮೇಲೆ ವಿರೋಧ. ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಮಕ್ಕಳ ವಿಶೇಷ ಉನ್ನತಿ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಹಾಗು ಲಾಭ ಬಹಳ ಉತ್ತಮ. ಅದರೆ ಸರಿಯಾದ ಉತ್ಕರ್ಷ ಹೆಚ್ಚು ಆಗುವ ಮೂಲಕ ಮನಸ್ಸಿಗೆ ವಿಶೇಷ ಕ್ಲೇಶ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ವಿಶೇಷ ಅನುಕೂಲತೆ. ಮಿತ್ರ ಸುಖ ಉತ್ತಮ. ಹಾಗು ಅವರಲ್ಲಿ ಅನೇಕರ ವಿಶೇಷ ಉತ್ಕರ್ಷ. ಪ್ರವಾಸ ಕೈಗೂಡದಿದ್ದು. ಅದರೆ ಭೆಟ್ಟಿ ಹಾಗು ಪತ್ರವ್ಯವಹಾರ ನೆಟ್ಟಗೆ. ಪುಷ್ಯದ ೪ ನೇ ಹಾಗು ಆಶ್ಲೇಷದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶ. ತಾ. ೩೦, ೧, ೨, ೩ ನೆಟ್ಟಗೆ.

ಸಿಂಹ

ಸ್ವಂತ ಪ್ರಕೃತಿ ನೆಟ್ಟಗೆ. ಅದರೆ ಹೆಂಡತಿಯ ಪ್ರಕೃತಿ ಕೆಡುವದರಿಂದ ಪ್ರಾಪಂಚಿಕ ತೊಂದರೆ ಹೆಚ್ಚು. ಅಪ್ರಿಯ ಜನರ ಅಸಾಧ್ಯ ಪ್ರಾಬಲ್ಯ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಹಾಗು ಲಾಭ ಒಟ್ಟನಲ್ಲಿ ನೆಟ್ಟಗೆ. ಅದರೆ ಪ್ರತಿಯೊಂದು ವಿಷಯದಲ್ಲಿ ಹೆಚ್ಚು ಶ್ರಮ. ನಿರರ್ಥಕ ವೆಚ್ಚ ಹೆಚ್ಚು. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಅಪಯಶ. ಅಪೇಕ್ಷಿತರಿಗೆ ಸಹಾಯ ಮಾಡಿದ ಅಪಯಶ. ಅವಶ್ಯಕಗಳಿಗೆ ಸಹಾಯ ಮಾಡಿದ ಅಸಮಾಧಾನಕರ, ವಾದ. ಪ್ರವಾಸಾದಿ ಕೆಲಸ ಅಸಮಾಧಾನಕರ. ಮಘಾದ ೪ ನೇ ಹಾಗು ಪೂರ್ವಾದ ಮೊದಲನೇ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೯, ೪ ನೆಟ್ಟಗೆ.

ಕನ್ಯಾ

ಪ್ರಕೃತಿ ಸಾಧಾರಣ, ಹಾಗು ರತಿ ಸುಖ ತೊಡಕು. ಇತರ ಸರ್ವ ವಿಷಯಗಳಲ್ಲಿ ಹೆಂಡತಿಯೊಡನೆ ಕಾದಾಟದ ಸೂಚಿರುವಿಕೆ, ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಹಾಗು ಲಾಭ ಬಹಳ ಉತ್ತಮ. ಮಿತ್ರರಿಂದ ಸ್ವಲ್ಪ ವಿರೋಧ. ವೆಚ್ಚ ಹೆಚ್ಚು. ಅದರೆ ಉದ್ದೇಶ ಸಾಧ್ಯ. ವ್ಯಾಜ್ಯದಲ್ಲಿ ಒಡಂಬಡಿಕೆಯ ಸಂಭವ, ಪ್ರವಾಸ ಹಾಗು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ನೆಟ್ಟಗೆ. ಉತ್ತರಾದ ೪ ನೇ ಹಾಗು ಹಸ್ತದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶ. ತಾ. ೨೮, ೨, ೩, ೪ ನೆಟ್ಟಗೆ.

ತುಲಾ

ವಿನಾಕಾರಣ ಪ್ರಕೃತಿ ಕೆಡುವದು. ಹೆಂಡತಿಗೆ ಕಿರುಕುಳ ಕಾಯಿಲೆ. ಎಲ್ಲ ದೃಷ್ಟಿಯಿಂದಲೂ ಪ್ರಾಪಂಚಿಕ ತೊಂದರೆ ಹೆಚ್ಚಾಗದು. ಸ್ನೇಹಿತರಿಂದ ಪತ್ರವ್ಯವಹಾರ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಅದರೆ ವೆಚ್ಚ ಬಹಳ. ವಾದ ಮತ್ತು ಸ್ಪರ್ಧೆಯಲ್ಲಿ ವೈರಿಗೆ ಬಹಳ ಹಾನಿ. ಅದರೆ ಅದರ ಝಳ ತಮಗೂ ಅಲ್ಪಸ್ವಲ್ಪ ತಟ್ಟುವ ಸಂಭವ. ಮಿತ್ರ ಸುಖ ನೆಟ್ಟಗೆ. ಪ್ರವಾಸ ತೊಂದರೆಯದು. ಅದರೆ ಭೆಟ್ಟಿ ಮತ್ತು ಪತ್ರವ್ಯವಹಾರ ನೆಟ್ಟಗೆ, ಚಿತ್ರಾ ನಕ್ಷತ್ರ ೪ ನೇ ಮತ್ತು ಸ್ವಾತಿಯ ೧ ಮತ್ತು ೩ ನೇ ಚರಣಗಳಿಗೆ ಹೆಚ್ಚು ಕಷ್ಟ. ತಾ. ೨೯, ೩೦, ಮತ್ತು ೧ ನೆಟ್ಟಗೆ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀ ಸುಖ ನೆಟ್ಟಗೆ ಅದರೆ ಪ್ರಾಪಂಚಿಕ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ನೆಟ್ಟಗೆ. ಅದರೂ ಲಾಭ ಕಡಿಮೆ. ಮಿತ್ರರಿಂದ ವಿರೋಧ. ವಾದ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ, ಪ್ರವಾಸವು ತೊಂದರೆಯದಾದರೂ ಕಾರ್ಯವು ಸಾಧ್ಯವಾಗುವದು. ಭೆಟ್ಟಿ ಉತ್ತಮ, ಪತ್ರವ್ಯವಹಾರ ಕಷ್ಟಸಾಧ್ಯ. ಅನುರಾಧಾ ನಕ್ಷತ್ರದ ೪ ನೇ ಮತ್ತು ಜೇಷ್ಠಾ ನಕ್ಷತ್ರದ ೧ ನೇ ಮತ್ತು ೩ ಚರಣಗಳಿಗೆ ಹೆಚ್ಚು ಕಷ್ಟ. ತಾ. ೨೯, ೩೦, ಮತ್ತು ೧ ಉತ್ತಮ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ನೆಟ್ಟಗೆ. ಪ್ರಾಪಂಚಿಕ ತೊಂದರೆ ಸಾವಕಾಶವಾಗಿ ಪ್ರಾರಂಭವಾಗುವದು. ಸ್ವಲ್ಪ ಕಷ್ಟವಾದರೂ ಉದ್ಯೋಗದಲ್ಲ ಪ್ರಗತಿ ಉತ್ತಮ. ಪ್ರತಿಷ್ಠೆ ಮತ್ತು ಲಾಭ ಮನಸ್ಸಿನಂತೆ. ಮಿತ್ರ ಸುಖ ಕಡಿಮೆ. ಶತ್ರುವಿನ ಕಿರಾಣಿಯು ಹೆಚ್ಚಾದರೂ ಅ ಕಡಿಮೆ. ಮಾನದಿಂದ ಸ್ವಂತ ಲಾಭ ಕಡಿಮೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ನೆಟ್ಟಗೆ. ಮೂಲಾ ನಕ್ಷತ್ರದ ೪ ನೇ ಮತ್ತು ಪೂರ್ವಾಷಾಢಾ ನಕ್ಷತ್ರದ ೧ ನೇ ಮತ್ತು ೩ ನೇ ಚರಣಗಳಿಗೆ ಕಷ್ಟದಿಂದ ಯಶ ಸಿಗುವದು. ತಾ. ೨೯, ೩೦, ೩ ಮತ್ತು ೪ ನೆಟ್ಟಗೆ.

ಮಕರ

ಪ್ರಕೃತಿ ಮತ್ತು ಸ್ತ್ರೀ ಸುಖ ನೆಟ್ಟಗೆ. ಎಲ್ಲ ದೃಷ್ಟಿಯಿಂದಲೂ ಪ್ರಾಪಂಚಿಕ ಸುಖ ನೆಟ್ಟಗೆ. ಅದರೆ ಮಕ್ಕಳೊಬ್ಬರಲ್ಲಿ ಪ್ರಕೃತಿ ಅಥವಾ ಉನ್ನತಿಯ ವಿಷಯವಾಗಿ ಮನಸ್ಸಿಗೆ ಅಸಮಾಧಾನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ನೆಟ್ಟಗೆ. ಅದರೆ ಪ್ರತಿಯೊಂದು ವಿಷಯದಲ್ಲಿ ಎರಡನೇಯವರ ಮಾನಸಿಸ್ಸಾನ ಮಾಡಬೇಕಾಗಿ ಕಷ್ಟವಾಗುವದು. ವಾದ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಸ್ಥಾವರದಲ್ಲಿ ಲಾಭವಾಗುವ ಪ್ರಸಂಗ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ನೆಟ್ಟಗೆ. ಉತ್ತರಾಷಾಢಾ ನಕ್ಷತ್ರದ ೪ ನೇ ಮತ್ತು ಶ್ರವಣಾದ ಮೊದಲನೇ ಮೂರು ಚರಣಗಳಿಗೆ ಕಷ್ಟದಿಂದ ಯಶ ದೊರೆಯುವದು. ತಾ. ೨೮, ೨, ೩ ಮತ್ತು ೪ ನೆಟ್ಟಗೆ.

ಕುಂಭ

ಸ್ವಂತದ ಪ್ರಕೃತಿ ಸಾಧಾರಣ. ಹೆಂಡತಿಯ ಹಾಗೂ ಮಕ್ಕಳ ಪ್ರಕೃತಿ ಚನ್ನಾಗಿರುವದರಿಂದ ಪ್ರಾಪಂಚಿಕ ಸುಖ ಬಹಳ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಉತ್ತಮ. ಅದರೆ ಬುದ್ಧಿ ಪೂರ್ವಕ ಅಡ್ಡ ಹಾದೀ ಹಿಡಿಯುವ ದುರ್ಬುದ್ಧಿ ಹುಟ್ಟಾಗಿ ಸಾಧ್ಯವಾಗುವ ಕೆಲಸಗಳೂ ಸಾಧ್ಯವಾಗದಂತಾಗುವವು. ಮಿತ್ರರಿಂದ ವಿರೋಧ. ವಾದ ಮತ್ತು ಸ್ಪರ್ಧೆಯಲ್ಲಿ ಅನುಕೂಲ, ಅದರೆ ಶತ್ರುಪಕ್ಷವೂ ಒಟ್ಟಿನಿಂದ ಸುಖ ಜೈಸವಾಗುವದು. ಪ್ರವಾಸಕ್ಕಿಂತಲೂ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ನೆಟ್ಟಗೆ. ಧನಿಷ್ಠಾ ನಕ್ಷತ್ರದ ೪ ನೇ ಮತ್ತು ಶತತಾರಾ ನಕ್ಷತ್ರದ ೧ ಮತ್ತು ೩ ನೇ ಚರಣಗಳಿಗೆ ಕಷ್ಟದಿಂದ ಯಶ. ತಾ. ೨೯, ೩೦, ಮತ್ತು ೪ ನೆಟ್ಟಗೆ.

ಮೀನ

ಪ್ರಕೃತಿ ನೆಟ್ಟಗೆ. ಪ್ರಾಪಂಚಿಕ ಸುಖ ಸಾಧಾರಣ. ದೊಡ್ಡವರ ಸಹವಾಸ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮನೋರಂಜನೆಯ ಸಂದರ್ಭಗಳು ಒದಗಿಬರುವವು. ವಾದ ಮತ್ತು ಸ್ಪರ್ಧೆಯಲ್ಲಿ ಅನುಕೂಲ ಪ್ರಸಂಗಗಳು. ಅದರೆ ಶತ್ರುಗಳ ಒಡಕು ಹುಟ್ಟಿಸಲು ಪ್ರಯತ್ನಿಸುವರು. ಮಿತ್ರ ಸುಖ ನೆಟ್ಟಗೆ. ಪತ್ರವ್ಯವಹಾರ ಮತ್ತು ಭೆಟ್ಟಿಗಳಿಗಿಂತ ಪ್ರವಾಸ ನೆಟ್ಟಗೆ. ಉತ್ತರಾಭಾದ್ರಪದ ನಕ್ಷತ್ರದ ೪ ನೇ ರೇವತಿ ನಕ್ಷತ್ರದ ೧ ಮತ್ತು ೩ ನೇ ಚರಣಗಳಿಗೆ ಕಷ್ಟದಿಂದ ಯಶ ದೊರೆಯುವದು. ತಾ. ೨೮, ೨, ೩ ನೆಟ್ಟಗೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ “ಲೋಕಶಿಕ್ಷಣ ಟ್ರಸ್ಟ”ದವಾಗಿ ಹ. ರಾ. ಪುರೋಹಿತ ಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

ಭಾವೀ ಮನುಷ್ಯನ ರೂಪ-ರೇಷೆ

(೨ ನೇ ಪುಟದಿಂದ ಮುಂದರಿದುದು)

ಆಕಾರ ಬಹಳ ಮಟ್ಟಿಗೆ ಮೆದುಳಿನ ವಿಕಾಸವನ್ನೆ ಅನುಸರಿಸುವದು. ಅದರೆ ತಲೆ ಈಗಿಗಿಂತ ದುಂಡಗಾಗುವದೆಂಬುದು ಬಹಳ ಮಟ್ಟಿಗೆ ನಿಶ್ಚಯವೇ. ಈ ಸಂಜ್ಞೆ ಈಗಾಗಲೆ ಅನೇಕ ಮಾನವ ಕುಲಗಳಲ್ಲಿ ಸ್ಪಷ್ಟವಾಗಿ ಗೋಚರಕ್ಕೆ ಬರುತಿದೆ. ಅಷ್ಟೂ ಅಲ್ಲದೆ ತಲೆ ದುಂಡಗಾಗಿದ್ದರೆ ಎಲುಬಿನ ಉಳಿತಾಯ ಬಹಳವಾಗುವದು.

ನಿಡುವ.ಾಗು ಚೂಚುಗದ್ದ

ಇನ್ನು ಮುಖದ ಮಟ್ಟಿಗೆ ಅದು ಸಣ್ಣ ಸಣ್ಣದಾಗುತ್ತ ಹೋಗುವದನ್ನು ನಾವು ಧಿರೀಕ್ಷಿಸಬಹುದು. ಮೂಗು ದೊಡ್ಡದಾದೀತು. ಗದ್ದ ಇನ್ನಷ್ಟು ಕೋನಾಕೃತಿ ಹೊಂದಿ ಮುಂದೆ ಚಾಚುತ್ತ ಹೋಗುವದು. ಮುಖದ ನಡುಭಾಗ ಇನ್ನಷ್ಟು ಒಳಸೇರುವದು. ಅರ್ಥಾತ್ ಮೂಗು ಮತ್ತು ಗದ್ದ ಬಹಳ ಮುಂದೆ ಚಾಚಿ ಮುಖದ ಇತರಭಾಗ ಒಳಸೆಕ್ಕಿ ಹೋದೀತು. ಅದರೆ ಇದಕ್ಕೂ ಮಿತಿಯಿದೆಯೆನಿಸುತ್ತದೆ. ಬಹಳ ಸೆಕ್ಕಿ ಹೋದ ಮುಖ ಉಸಿರಾಡಿಸುವದಕ್ಕೂ ಜಗಿಯುವದಕ್ಕೂ ಅನುಕೂಲವಲ್ಲ. ಮನುಷ್ಯನಿಗೆ ಮುಖವೇ ಇಲ್ಲದಂತಾಗುವ ಸಂಭವವಂತೂ ಖಂಡಿತ ಇಲ್ಲ.

ಇನ್ನು ಕೆಲವು ನಿಶ್ಚಿತ ಬದಲಾವಣೆಗಳು ಹೀಗಿರುವವು:—

ದವಡೆ ಹಲ್ಲು ಹೋಗುವದು

“ಅಕ್ಕಲದವಡೆ ಹಲ್ಲು” (ಅಂದರೆ ಕೊನೆಯದವಡೆ ಹಲ್ಲುಗಳು) ಖಂಡಿತ ಮಾಯವಾಗುವವು. ಈಗಾಗಲೇ ಅನೇಕರಿಗೆ ಈ ಹಲ್ಲು ಇಲ್ಲವೆ ಇಲ್ಲ. ಈ ಹಲ್ಲುಗಳು ಬಹಳ ಉಪದ್ರವಿಗಳೂ ನಿಷ್ಪ್ರಯೋಜಕವೂ ಆಗಿವೆ. ಉಳಿದ ಹಲ್ಲುಗಳು ಇನ್ನೂ ಚಿಕ್ಕವೂ ಸುರೂಪವೂ ಆಗುವವೆಂದು ಹೇಳಬಹುದು.

ನಾಲ್ಕೇ ಕಾಲ್ಬೆರಳು

ಕಾಲಿನ ಕಿರಿಬೆರಳೂ ಇಲ್ಲದಂತಾಗುವದು. ಈಗಾಗಲೆ ಈ ಬೆರಳು ತೀರ ಚಿಕ್ಕವೂ ದುರ್ಬಲವೂ ನಿಷ್ಪ್ರಯೋಜಕವೂ ಆಗಿದೆ. ಅದರ ಉಗುರು ಹಾಳಾಗಿರುತ್ತದೆ. ಕೆಲವರಿಗಂತೂ ಕಿರಿ ಬೆರಳಿಗೆ ಉಗುರೇ ಇರುವದಿಲ್ಲ. ಲಕ್ಷಾಂತರ ವರ್ಷಗಳ ನಂತರದ ಮನುಷ್ಯ ನಾಲ್ಕೇ ಕಾಲ್ಬೆರಳುಗಳುಳ್ಳವನಾದರೂ ಅವನ ಪಾದ ಮಾತ್ರ ಈಗಿಗಿಂತ ಅಗಲ ಕಿರಿದಾಗಿರುವ ಸಂಭವವಿಲ್ಲ. ಅಗಲವಾದ ಪಾದ ಮಾನವನಿಗೆ ಅವಶ್ಯವಾಗಿದೆ.

ಶಾಪಿರೊ ಅವರ ಇನ್ನೊಂದು ಭವಿಷ್ಯವೆಂದರೆ ತಲೆಕೂದಲು ಮಾಯವಾಗುವದೆಂದು ಅದರೆ ಇದು ಬಿಳಿ ಮನುಷ್ಯನಲ್ಲಿ ಮಾತ್ರ ವಿಶೇಷ ಗೋಚರಕ್ಕೆ ಬರುತ್ತಿದೆ. ಬಿಳಿ ಮನುಷ್ಯರು ಪೂರ್ತಿ ಬೋಳು ತಲೆಯವರಾಗುವರೆಂಬದು ಹೆಚ್ಚು ಕಡಿಮೆ ನಿಶ್ಚಿತ. ಅದನ್ನು ತಡೆಯಲು ವಿಜ್ಞಾನ ಏನೂ ಮಾಡಲರಿಯದೆಂದು ತೋರುತ್ತದೆ. ಅದರೆ ಇತರ ಜನಾಂಗಗಳಲ್ಲಿ ಈ ಪ್ರವೃತ್ತಿ ಕಾಣಬರುವದಿಲ್ಲ.

ವಾರದ ಕತೆ

ಭೂತಯೋನಿ

(೧೫ ನೇ ಪುಟದಿಂದ ಮುಂದರಿದುದು)

“ಏನು ನನಗೆ ಮರಣ!” ಅಶ್ವಿನಿ ಕುಮಾರನ ತುಟಿಯಮೇಲೆ ತಿಳಿನಗೆ ಹಣಕಿಕ್ಕಿತು.

“ಅಹುದು... ನಿನಗೆ ಮರಣ, ದುರ್ದೈವಿ!”

“ನನಗೆ ಮರಣ! ನನಗೆ ಮರಣ!” ಕೋರ್ಟಿನ ಗೋಡೆಗಳು ಉರುಳಿ ಬೀಳುವಂತೆ ನಗಹತ್ತಿದನು.

ಕೋರ್ಟು, ನ್ಯಾಯಾಧೀಶರೂ ಬೆಕ್ಕಸಬೆರಗಾದರು. ನಗೆಯ ಕಾರಣವು ಯಾರಿಗೂ ತಿಳಿಯಲಿಲ್ಲ. ರಾಮದಾಸನು ಕಣ್ಣು ಮುಚ್ಚಿಕೊಂಡು ಹಾಗೇ ಬಿಕ್ಕುತ್ತಿದ್ದನು. ಸಮೀಪದ ಒಬ್ಬನು ಯಾಕೆ ನಗುವಿ? ಎಂದು ಕೇಳಿದನು.

“ನನಗೆ ಮರಣ! ಮರಣ!” ನಗೆಯ ಉತ್ಕಟ ವೇಗ ಇನ್ನೂ ಕಡಿಮೆ ಯಾಗಿರಲಿಲ್ಲ.

ಕೋರ್ಟು ತೆಗೆದ ಬಾಯನ್ನು ಮುಚ್ಚಿರಲಿಲ್ಲ.

“ನೂರು ಬಗೆಯ ಆಧಿ-ಆತಂಕಗಳಿಂದ ನನಗೆ ಈ ವರೆಗೂ ಮರಣ ಬಂದಿರಲಿಲ್ಲ. ಇದೇ ನ್ಯಾಯವು ಸಾಯಬೇಡೆಂದು ಬಂಧಿಸಿದ್ದುಂಟು. ಈಗ ಇದೇ ನ್ಯಾಯವು ನನಗೆ ಮರಣವೆಂದು ವಿಧಿಸುವದು. ಒಬ್ಬನನ್ನು ಕೊಂದರೆ ನನಗೂ ಮರಣವೆಂದು ಹೊಳೆದಿರಲಿಲ್ಲ. ಮೊದಲೇ ಗೊತ್ತಾಗಿದ್ದರೆ ನಾಲ್ಕಾರು ಜನರನ್ನು ಕೊಲ್ಲುತ್ತಿದ್ದೆ! ಹೋಗಲಿ. ಮರಣ ಬಂದಿತು! ಮಾಲೂ...... ಮರಣ......ಬಂದೇ......” ಎಂದು ಗಟ್ಟಿಯಾಗಿ ನಗಹತ್ತಿದನು. ಪೋಲೀಸರು ಎಳೆದು ಮೋಟಾರಿನಲ್ಲಿ ಕೂಡಿಸಿದರೂ ಅವನ ನಗೆಯ ಉಚ್ಚ ಸ್ವರವು ಕಡಿಮೆಯಾಗಿರಲಿಲ್ಲ.

೨ನೇ ಪುಟದಲ್ಲಿರುವ

ಸಮಸ್ಯೆಗೆ ಉತ್ತರ

ಎಂಟು ಚೆಂಡುಗಳಲ್ಲಿ ಆರನ್ನು ತೆಗೆದು ತಕ್ಕಡಿಯ ಎರಡು ಪರಡಿಗಳಲ್ಲಿ ಮೂರು ಮೂರರಂತೆ ಹಾಕಿರಿ. ಈಗ ಆ ಆರರಲ್ಲೊಂದು ಹಗುರಾಗಿದ್ದರೆ ಒಂದು ಪರಡಿ ಅದನ್ನು ತೋರಿಸುತ್ತದೆ. ಆಗ ಹಗುರಾದ ಪರಡಿಯ ಮೂರು ಚೆಂಡುಗಳನ್ನು ತೆಗೆದುಕೊಂಡು ಅದರಲ್ಲೊಂದನ್ನು ಕೈಲಿಟ್ಟುಕೊಂಡು ಉಳಿದುದನ್ನು ತಕ್ಕಡಿಯ ಎರಡು ಪರಡಿಗಳಲ್ಲಿ ಹಾಕಿರಿ. ಅದರಲ್ಲೊಂದು ಹಗುರಾಗಿದ್ದರೆ ಅದು ತೋರಿಸಿಯೆ ತೋರಿಸುತ್ತದೆ. ಇಲ್ಲದಿದ್ದರೆ, ಅಂದರೆ ಆವೆರಡರ ತೂಕವೂ ಒಂದೇ ಇದ್ದರೆ ನಿಮ್ಮ ಕೈಯಲ್ಲಿದ್ದದ್ದೆ ಹಗುರಿನದೆಂದು ತಿಳಿಯಬಹುದು.

ಇನ್ನು ಮೊದಲಿನ ತೂಕದಲ್ಲಿ ಮೂರು ಮೂರು ಚೆಂಡುಗಳು ಸಮಾನ ತೂಕದವಾದರೆ ಕೆಳಗುಳಿದ ಎರಡರಲ್ಲಿ ಒಂದು ಹಗುರಿನದೆಂದು ನಿಶ್ಚಯವಾಯಿತು. ಅವುಗಳಲ್ಲಿ ಯಾವುದು ಹಗುರವೆಂದು ಎರಡನೆ ತೂಕದಲ್ಲಿ ಕಂಡು ಹಿಡಿಯುವಿರಿ.